ಸಂಪುಟ 24 ಸಂಚಿಕೆ 27 - 28
ಜುಲೈ 14. 2002 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ

ಐಕ್ಯರಂಗ

http:// www.geocities.com/aikyaranga



ದುಡಿವ ವರ್ಗದ ಸಿಂಹ ಧ್ವನಿ ಇನ್ನಿಲ್ಲ



ಕ್ಯಾ. ಲಕ್ಷ್ಮಿ ಸೆಹಗಲ್ ಸ್ಪರ್ಧೆ : ನಿಜಾಂಶಗಳೇನು?



ಹುತಾತ್ಮನಾದ ಶ್ರೀನಿವಾಸ್ : ಕೊಲೆಗಡುಕ ಹಿಂದೂ ಯುವ ಸೇನೆ ಕೃತ್ಯ

ಸತ್ವ ಪರೀಕ್ಷೆ ನಮ್ಮ ಮುಂದಿದೆ

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ: 100

ಹಿಂದಿನ ಸಂಚಿಕೆಯಲ್ಲಿ ಈಶಾನ್ಯ ರಾಜ್ಯಗಳ ರೈಲ್ವೆ ಅಭಿವೃದ್ಧಿ, ಚುನಾವಣೆಯಲ್ಲಿ ಎಡರಂಗದ ವಿಜಯ,ಎಡರಂಗ ಸರ್ಕಾರ ಉರುಳಿಸಲು ಕೇಂದ್ರದ ಯತ್ನ, ಅನುಭವಿಸಿದ ಮುಖಭಂಗದ ಬಗ್ಗೆ ಓದಿರುವಿರಿ, ಸಂಚಿಕೆಯಲ್ಲಿ ಪಕ್ಷದ 16ನೇ ಮಹಾಧಿವೇಶನ, ಕೇಂದ್ರದ ರಾಜಕೀಯ ಸ್ಥಿತಿ, ಮೂರನೇ ರಂಗದ ಮಹತ್ವ, ನಮ್ಮ ಜವಾಬ್ದಾರಿಗಳ ಬಗ್ಗೆ ಓದಿ...

ಜೂನ್ 18ರಂದು ಕೇಂದ್ರ ಗೃಹಖಾತೆಯ ಹೆಚ್ಚುವರಿ ಕಾರ್ಯದರ್ಶಿ ನೇತೃತ್ವದಲ್ಲಿ ಗೃಹಖಾತೆ ತನ್ನದೇ ಒಂದು ತಂಡವನ್ನು ಬಂಗಾಳಕ್ಕೆ ಕಳಿಸಿತು. ಇದನ್ನು ನಾವು ಒಪ್ಪಲಿಲ್ಲ. ಕೇಂದ್ರ ಸರಕಾರ ನಿಯಮಗಳನ್ನು ಉಲ್ಲಂಘಿಸುತ್ತಿದೆ ಎಂದು ಹೇಳಿದೆವು. ಅವರು ಉಪೇಕ್ಷಿತ ಅತಿಥಿಗಳು.

ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿ ಬಗ್ಗೆ ಅವರೊಂದಿಗೆ ನಾವು ಯಾವುದೇ ಚರ್ಚೆ ಮಾಡುವುದಿಲ್ಲ ಎಂದು ನಾವು ಅಧಿಕೃತವಾಗಿ ಸ್ಪಷ್ಟಪಡಿಸಿದೆವು. ತಂಡದ ಸದಸ್ಯರು ತೃಣಮೂಲದ ಕೆಲವು ನಾಯಕರನ್ನು ಭೇಟಿ ಮಾಡಿ ಬಂದ ದಾರಿಗೆ ಸುಂಕವಿಲ್ಲ ಎನ್ನುವಂತೆ ವಾಪಸಾದರು. ಕಲ್ಕತ್ತದಲ್ಲಿ ಒಂದು ಪಾಠ ದೊರೆಯಿತು.

19ನೇ ರಾಜ್ಯಸಮ್ಮೇಳನ

ಪಕ್ಷದ 19ನೇ ರಾಜ್ಯ ಸಮ್ಮೇಳನ ಅಗಸ್ಟ್ 27ರಿಂದ 30ರವರೆಗೆ ಹೌರಾದ ಶರತ್ ಸದನದಲ್ಲಿ ನಡೆಯಿತು. ಸದನಕ್ಕೆ ಕಾ.ಸುನಿಲ್ ಮೈತ್ರರ ಹೆಸರನ್ನು ಸ್ಥಳಕ್ಕೆ ಇಎಂಎಸ್ ಹೆಸರನ್ನು ಇಡಲಾಗಿತ್ತು. ರಾಜ್ಯದಲ್ಲಿ ಮೂರು ವರ್ಷಗಳ ಹಿಂದೆ ಇದ್ದ ಸದಸ್ಯತ್ವ ಶೇ 7.79 ರಷ್ಟು ಏರಿ 2.33 ಲಕ್ಷ ಆಗಿತ್ತು. ಮಿಡ್ನಾಪುರ ಜಿಲ್ಲೆಯಲ್ಲಿ ಗರಿಷ್ಠ ಶೇ 58.33 ಏರಿಕೆಯಾಗಿತ್ತು. ಜಲಪ್ಯಾಗುರಿ ಮತ್ತು ನಾಡಿಯಾ ಜಿಲ್ಲೆಗಳಲ್ಲಿ ಮಾತ್ರ ಸದಸ್ಯತ್ವ ಕಡಿಮೆಯಾಗಿತ್ತು. ನಮ್ಮ ಸಂಘಟನೆ ಬಲವಾಗಬೇಕೆಂದು ರಾಜಕೀಯ ಸಂಘಟನಾತ್ಮಕ ವರದಿ ಹೇಳಿತು. 19 ಅಂಶಗಳ ಕ್ರಿಯಾ ಯೋಜನೆಯನ್ನು ಕೈಗೆತ್ತಿಕೊಳ್ಳಲಾಯಿತು. ನಾವು ದಾಖಲೆಯ 21 ವರ್ಷಕಾಲ ಆಡಳಿತ ನಡೆಸಿದ್ದೇವೆ ಎಂಬುದಕ್ಕೆ ಒತ್ತು ನೀಡಿದೆವು. ನಾವಿರುವ ವ್ಯವಸ್ಥೆಯ ಪರಿಮಿತ ಅವಕಾಶಗಳಲ್ಲಿ ಕೆಲಸ ಮಾಡುವಲ್ಲಿ ನಮ್ಮ ಪ್ರಯತ್ನಗಳು ಹಾಗೂ ಯಶಸ್ಸಿನಿಂದಾಗಿ ಇದು ಸಾಧ್ಯವಾಯಿತು. ಉಳಿದ ರಾಜ್ಯಗಳಿಗಿಂತ ನಮ್ಮದು ಹೇಗೆ ಭಿನ್ನ ಎಂಬುದನ್ನು ಜನರು ಅರಿತುಕೊಂಡರು. 80 ಸದಸ್ಯರ ರಾಜ್ಯ ಸಮಿತಿಯನ್ನು ರಚಿಸಲಾಯಿತು. ಶೈಲೇನ ದಾಸ್ ಗುಪ್ತ ಕಾರ್ಯದರ್ಶಿಯಾಗಿ ಪುನರಾಯ್ಕೆಗೊಂಡರು.

ಬಿಹಾರದಲ್ಲಿ ಬಿಜೆಪಿ ದೊಂಬರಾಟ

ಬಿಹಾರ ಸರಕಾರವನ್ನು ವಜಾ ಮಾಡಲು ಕೇಂದ್ರ ಸೆಪ್ಟೆಂಬರ್ 22ರಂದು ಶಿಫಾರಸು ಮಾಡಿತು. ಆರ್‌ಎಸ್‌ಎಸ್ ನಾಯಕ ಸುಂದರಸಿಂಗ್ ಭಂಡಾರಿಯನ್ನು ರಾಜ್ಯದ ರಾಜ್ಯಪಾಲರನ್ನಾಗಿ ಕಳಿಸುವುದರೊಂದಿಗೆ ಈ ಸಂಚಿಗೆ ಚಾಲನೆ ನೀಡಲಾಗಿತ್ತು. ರಾಜಭವನದಲ್ಲಿ ಸಂಚು ರೂಪಿಸಿದ ನಂತರ, ಬಿಹಾರದಲ್ಲಿ ರಾಷ್ಟ್ರಪತಿ ಆಡಳಿತಕ್ಕೆ ಶಿಫಾರಸು ಮಾಡಲು ವಿವಾದಾತ್ಮಕ ವನಾಂಚಲ ಮಸೂದೆಯ ನೆವವನ್ನು ರಾಜ್ಯಪಾಲರು ಬಳಸಿದರು. ಕೇವಲ ಒಂದು ದಿನದ ಹಿಂದೆ ರಾಜ್ಯ ಸರಕಾರ ವಿಶ್ವಾಸಮತ ಗೊತ್ತುವಳಿಯಲ್ಲಿ ಜಯ ಸಾಧಿಸಿತ್ತು.

ಕೇಂದ್ರದ ಇಂಥ ಏಕಪಕ್ಷೀಯ ನಿರ್ಧಾರದ ವಿರುದ್ಧ ಎಲ್ಲ ಎಡ ಮತ್ತು ಜನತಾಂತ್ರಿಕ ಶಕ್ತಿಗಳು ಒಕ್ಕೊರಲಿನಿಂದ ಎದ್ದು ನಿಂತವು. ತೆಲುಗುದೇಶಂ ಮತ್ತು ಅಕಾಲಿದಳ ಕೂಡ ತನ್ನ ಮಿತ್ರಪಕ್ಷಕ್ಕೆ ಬೆಂಬಲ ನೀಡಲಿಲ್ಲ. ಸೆಪ್ಟೆಂಬರ್ 25ರಂದು ಪ್ರತಿಭಟನೆ ದಿನವನ್ನು ಆಚರಿಸಲಾಯಿತು. ಬಿಹಾರದಲ್ಲಿ 356ನೇ ವಿಧಿಯನ್ನು ಬಳಸುವ ಅಗತ್ಯವಿಲ್ಲ ಎಂದು ಹೇಳಿ ರಾಷ್ಟ್ರಪತಿ ಕೇಂದ್ರದ ಶಿಫಾರಸನ್ನು ಹಿಂತಿರುಗಿಸಿದರು. ರಾಷ್ಟ್ರಪತಿ ತಮ್ಮ ಜವಾಬ್ದಾರಿ ಹುದ್ದೆಗೆ ಅನುಗುಣವಾಗಿ ನಡೆದುಕೊಂಡು ಒಂದು ಉತ್ತಮ ಮಾದರಿ ಹಾಕಿಕೊಟ್ಟರು. ವಾಜಪೇಯಿ ಸರಕಾರಕ್ಕೆ ದೊಡ್ಡ ಹಿನ್ನಡೆಯಾಯಿತು. ಆದರೆ ಅದು ತನ್ನ ಕುತಂತ್ರಗಳನ್ನು ಮುಂದುವರೆಸಿತು. ವಾಸ್ತವವಾಗಿ ರಾಷ್ಟ್ರಪತಿಯವರ ವಿರುದ್ಧವೇ ಕೆಲವು ಟೀಕೆಗಳನ್ನು ಮಾಡಲಾಯಿತು.

16ನೇ ಮಹಾಧಿವೇಶನ

ಸಿಪಿಐ(ಎಂ) 16ನೇ ಮಹಾಧಿವೇಶನ ಕಲ್ಕತ್ತದಲ್ಲಿ ನಡೆಯಿತು. 1985ರಲ್ಲಿ ಇಲ್ಲಿ ಮಹಾಧಿವೇಶನ ನಡೆದಿತ್ತು. ಚುನಾವಣೆಗಳ ಕಾರಣದಿಂದ ರಾಜ್ಯ ಸಮ್ಮೇಳನದಂತೆ ಮಹಾಧಿವೇಶನವನ್ನು ಕೂಡ ಮುಂದೂಡಲಾಗಿತ್ತು. 12ನೇ ಮಹಾಧಿವೇಶನವನ್ನು ನಜರುಲ್ ಮಂಚ್‌ನಲ್ಲಿ ನಡೆಸಲು ನಿರ್ಧರಿಸಿದ್ದೆವು. ಸಮ್ಮೇಳನದ ಸ್ಥಳಕ್ಕೆ ಇ.ಎಂ.ಎಸ್ ಹೆಸರಿಟ್ಟೆವು. ಆದರೆ ವೇದಿಕೆಯ ಹೆಸರನ್ನು ಬದಲಾಯಿಸಿರಲಿಲ್ಲ. ಇದು ಭಾಷಾ ಪತ್ರಿಕೆಗಳಲ್ಲಿ ಊಹಾಪೋಹಕ್ಕೆ ಕಾರಣವಾಯಿತು. ಬಹುಶಃ ಪಕ್ಷದ ಆರಂಭಿಕ ಹಂತದಲ್ಲಿ ಕಾಜಿ ನಝುರುಲ್ ಇಸ್ಲಾಂ ಪಕ್ಷದ ಜತೆ ಹೊಂದಿದ್ದ ಸಂಪರ್ಕದ ಬಗ್ಗೆ ಅವರಿಗೆ ಗೊತ್ತಿರಲಾರದು. ಆದರೆ ಇಂಥ ಊಹಾಪೋಹಗಳಿಲ್ಲದೇ ಅವುಗಳು (ಪತ್ರಿಕೆಗಳು) ಬದುಕಲಾರವು. ವಿವೇಕಾನಂದ ಪಾರ್ಕ್ ಸಮೀಪ ರಚಿಸಿದ ಸುನಿಲ್ ಮೈತ್ರ ವೇದಿಕೆಯಲ್ಲಿ ವಿಚಾರ ಸಂಕಿರಣವನ್ನು ವ್ಯವಸ್ಥೆಗೊಳಿಸಲಾಗಿತ್ತು.

ಮಹಾಧಿವೇಶನದಲ್ಲಿ ಒಟ್ಟು 680 ಪ್ರತಿನಿಧಿಗಳು ಮತ್ತು 63 ಆಹ್ವಾನಿತರು ಭಾಗವಹಿಸಿದ್ದರು. ಒಂಬತ್ತು ಹಿರಿಯ ಸಂಗಾತಿಗಳು ಕೂಡ ಪಾಲ್ಗೊಂಡಿದ್ದರು. 28 ದೇಶಗಳು ಪ್ರತಿನಿಧಿಸಿದ್ದವು. ಅಕ್ಟೋಬರ್ 8ರಂದು ಸುರ್ಜಿತ್ ಧ್ವಜಾರೋಹಣ ಮಾಡಿ ಉದ್ಘಾಟನಾ ಭಾಷಣ ಮಾಡಿದರು. ಸ್ವಾಗತ ಸಮಿತಿ ಪರವಾಗಿ ನಾನು ಮಾತನಾಡಿದೆ.

ರಾಜಕೀಯ ಸಂಘಟನಾತ್ಮಕ ವರದಿಯನ್ನು ಚರ್ಚಿಸಲು ಅಕ್ಟೋಬರ್ 10ರಂದು ಪ್ರತ್ಯೇಕ ಸಭೆ ನಡೆಯಿತು. 1996ರಲ್ಲಿ ಕೇಂದ್ರ ಸರಕಾರದಲ್ಲಿ ಪಾಲ್ಗೊಳ್ಳುವಿಕೆ ವಿಷಯದ ಕುರಿತು ಚರ್ಚಿಸಿದೆವು. ಎಲ್ಲರಿಗೂ ಗೊತ್ತಿರುವಂತೆ, ಸರಕಾರದಲ್ಲಿ ಪಾಲ್ಗೊಳ್ಳಬೇಕೆನ್ನುವುದು ಅಲ್ಪಮತದ ಅಭಿಪ್ರಾಯವಾಗಿತ್ತು. ಆ ಅಭಿಮತವನ್ನು 16ನೇ ಮಹಾಧಿವೇಶನದ ಕರಡು ವರದಿಯಲ್ಲಿ ಸೇರಿಸಿಕೊಂಡೆವು. ಸರ್ವಾನುಮತದಿಂದ ವರದಿ ಅಂಗೀಕಾರವಾಯಿತು.

ಎಲ್ಲ ಪಕ್ಷಗಳಿಗಿಂತ ಸಿಪಿಐ(ಎಂ) ಅತ್ಯಂತ ಪ್ರಜಾಸತ್ತಾತ್ಮಕ ಎಂದು ನಾನು ಯಾವಾಗಲೂ ಹೇಳುತ್ತಿರುತ್ತೇನೆ. ನಾವು ಪ್ರತಿಯೊಂದನ್ನು ಪಕ್ಷದ ವೇದಿಕೆಯಲ್ಲಿ ಚರ್ಚಿಸುತ್ತೇವೆ. ಆ ರೀತಿ ಕೈಗೊಳ್ಳಲಾದ ನಿರ್ಧಾರಕ್ಕೆ ಎಲ್ಲರೂ ಬದ್ಧರಾಗಿ ಅನುಷ್ಠಾನಗೊಳಿಸಬೇಕು. ಅದು ನಮ್ಮ ಸಂಘಟನಾತ್ಮಕ ಶಿಸ್ತಿನ ಪರಿಕಲ್ಪನೆ.

ಈಗ ಸಾಮ್ರಾಜ್ಯಶಾಹಿ ಮತ್ತು ಸಮಾಜವಾದದ ನಡುವೆ ವಿರೋಧಾಭಾಸವಿದೆ ಎಂದು ರಾಜಕೀಯ ಗೊತ್ತುವಳಿ ಹೇಳಿತು. ಸಾಮ್ರಾಜ್ಯಶಾಹಿಗಳು ಹೆಚ್ಚು ಹೆಚ್ಚಾಗಿ ತೃತೀಯ ಜಗತ್ತಿನ ದೇಶಗಳ ಮೇಲೆ ದಾಳಿ ಮಾಡುತ್ತಿವೆ. ಆದರೆ ಯಾವುದೇ ಪ್ರಮುಖ ವೈರತ್ವವನ್ನು ಈಗಲೇ ಹೇಳಲು ಆಗುವುದಿಲ್ಲ. ತಥಾಕಥಿತ ಏಷ್ಯದ ಹುಲಿಗಳು ಕುಸಿದು ಬಿದ್ದವು. ಬಂಡವಾಳಶಾಹಿಯ ಯಶಸ್ಸಿಗೆ ಇವು ಮಾದರಿ ಉದಾಹರಣೆಗಳು ಎಂಬ ನಂಬಿಕೆ ಹುಸಿ ಎಂಬುದನ್ನು ಈ ಕುಸಿತ ಹೀನಾಯವಾಗಿ ಸಾಬೀತು ಪಡಿಸಿತು. ತೃತೀಯ ಜಗತ್ತಿನ ಅಭಿವೃದ್ಧಿಗೆ ಬಂಡವಾಳಶಾಹಿ ಮಾರ್ಗ ಸರಿಯಾದ ಆಯ್ಕೆ ಎಂಬುದು ಮಿಥ್ಯೆ ಎಂಬುದು ಸಾಬೀತಾಗಿತು.

ಆದರೆ ಈ ಅನುಭವ ನಮ್ಮ ಕಾರ್ಯಭಾರವನ್ನು ಸುಲಭಗೊಳಿಸಿತು ಎಂಬುದು ವಾಸ್ತವ. ಮಾರ್ಕ್ಸ್‌ವಾದ-ಲೆನಿನ್‌ವಾದ ಮೂಲ ಸಿದ್ಧಾಂತಗಳನ್ನು ಗಮನದಲ್ಲಿಟ್ಟುಕೊಂಡು ಇಂಥ ಸನ್ನಿವೇಶಗಳಲ್ಲಿ ನಾವು ಮಧ್ಯಪ್ರವೇಶ ಮಾಡಿದಲ್ಲೆಲ್ಲ ನಾವು ಯಶಸ್ವಿಯಾಗಿರುವುದು ನಮ್ಮ ಅನುಭವ. ರಾಜಿ ಮಾಡಿಕೊಳ್ಳುವುದು ಅಗತ್ಯವೆಂಬುದು ಇದರ ಅರ್ಥವಲ್ಲ. ಅನುಕೂಲಕರವಾಗಿ ನಮ್ಮನ್ನು ನಾವು ಸಮರ್ಥಿಸಿಕೊಳ್ಳಬೇಕೆನ್ನುವುದು (ASSERT) ಇದಕ್ಕೆ ಹಿಂದಿರುವ ಯೋಚನೆ.


ದೇಶದ ಈಗಿನ ಸ್ಥಿತಿ ಸ್ಫೋಟಕವಾಗಿದೆ. ಬಿಜೆಪಿ ತನ್ನ ಉದ್ದೇಶ ಸಾಧನೆಗೆ ದೇಶವನ್ನು ಬಳಸಿಕೊಳ್ಳುತ್ತಿದೆ. ತನ್ನ ಪ್ರಭಾವವನ್ನು ಹೆಚ್ಚಿಸಿಕೊಳ್ಳಲು ಎಡಪಂಥಿಯರು ಸಮರ್ಥರಾಗಿಲ್ಲ. ಒಂದು ದಶಕದ ಹಿಂದೆ ಬಲಪಂಥೀಯ ಶಕ್ತಿಗಳು ತಲೆಯೆತ್ತುವುದರೊಂದಿಗೆ ಆರಂಭದ ಪ್ರಕ್ರಿಯೆಯ ಅಂತಿಮ ಘಟ್ಟವಾಗಿ ಬಿಜೆಪಿ ಸರಕಾರ ರಚನೆಯಾಗಿದೆ. ಸಾರ್ವಜನಿಕ ಕ್ಷೇತ್ರವನ್ನು ಕಡೆಗಣಿಸಲಾಗಿದೆ. ವಿಮೆ ಮತ್ತು ಪೇಟೆಂಟ್ ಮಸೂದೆಗಳನ್ನು ದೇಶದ ಆರ್ಥಿಕ ಸಾರ್ವಭೌಮತ್ವದ ಮಾರಾಟಕ್ಕೆ ನೆರವಾಗುತ್ತದೆ ಅಷ್ಟೆ. ವಾಜಪೇಯಿ ನೀತಿಗಳು ಐಎಂಎಫ್ ನಿರ್ದೇಶಿತವಾಗಿದೆ.

ಆದರೆ ಸರಕಾರ ತನ್ನದೇ ವೈವಿಧ್ಯಗಳಿಂದ ತೊಳಲಾಡುತ್ತಿದೆ. ಸ್ಥಿರ ಸರಕಾರ ಘೋಷಣೆ ಹಾಸ್ಯಾಸ್ಪದವಾಗಿದೆ. ಯಾವುದೇ ಪಕ್ಷ ಸ್ವಂತ ಬಲದಿಂದ ಕೇಂದ್ರದಲ್ಲಿ ಅಧಿಕಾರಕ್ಕೆ ಬರುವುದು ಸಾಧ್ಯವಿಲ್ಲ ಎನ್ನುವುದು ಈಗ ಸ್ಪಷ್ಟವಾಗಿದೆ.

ಸರಕಾರ ರಚಿಸಲು ಕಾಂಗ್ರೆಸ್ ಅಸಮರ್ಥವಾಗಿದೆ. ಕಾಂಗ್ರೆಸ್ ಪಕ್ಷ ತನ್ನ ತಪ್ಪುಗಳಿಂದ ಪಾಠ ಕಲಿತು ನೀತಿಗಳನ್ನು ಬದಲಾಯಿಸಿಕೊಳ್ಳಬೇಕೆಂದು ನಾವು ಆ ಪಕ್ಷಕ್ಕೆ ಎಚ್ಚರಿಕೆ ನೀಡುತ್ತ ಬಂದಿದ್ದೇವೆ. ಪತ್ರಿಕೆಗಳು ಇದನ್ನು ತಿರುಚಿ ಯಾವುದೇ ಕಾಂಗ್ರೆಸ್ ಸರಕಾರಕ್ಕೆ ವಿಷಯಾಧಾರಿತ ಬೆಂಬಲದ ನಮ್ಮ ನೀತಿಯ ಬಗ್ಗೆ ಊಹಾಪೋಹ ಮಾಡುತ್ತಿವೆ.

ಮೂರನೇ ರಂಗ ತುಂಬಾ ಅಗತ್ಯವಾಗಿದೆ. ನಿರಂತರ ಚಳವಳಿಯ ಮತ್ತು ಜನತೆಯ ಒಳಗೊಳ್ಳುವಿಕೆಯಿಂದ ಮಾತ್ರವೇ ಅದನ್ನು ಸಾಧಿಸಬಹುದು. ಎಡಪಕ್ಷಗಳ ಜವಾಬ್ದಾರಿ ಹಿಂದೆಂದಿಗಿಂತ ಹೆಚ್ಚಾಗಿದೆ. ನಾವು 16ನೇ ಮಹಾಧಿವೇಶನ ತೋರಿದ ಹಾದಿಯಲ್ಲಿ ನಡೆಯಬೇಕಾದರೆ ಮುಂದಿನ ದಿನಗಳಲ್ಲಿ ಕಠಿಣ ಹೋರಾಟ ನಡೆಸಲಿದೆ. ನಮ್ಮ ಮೇಲೆ ಅಪಾರ ಹೊಣೆಯನ್ನು ಹೊರಿಸಿದೆ. ಇಂಥ ಕಠಿಣ ಪರೀಕ್ಷೆಗಳ ಮೂಲಕ ಮಾತ್ರವೇ ನೈಜ ಕಮ್ಯುನಿಸ್ಟ್ ಜಯಶಾಲಿ ಆಗಬಲ್ಲದು. ಸತ್ವ ಪರೀಕ್ಷೆ ನಮ್ಮ ಮುಂದಿದೆ.

(ಜ್ಯೋತಿಬಸು ಆತ್ಮಕಥನ ಇಲ್ಲಿಗೆ ಮುಕ್ತಾಯ. ಅದನ್ನು ಅನುವಾದಿಸಿದ ವಿಶ್ವಕುಂದಾಪುರ ಅವರಿಗೆ ಧನ್ಯವಾದ)



ಏನು ಜಾದೂ ಮಾಡಿದ್ದೀರಯ್ಯಾ ನೀವು ಕಮ್ಯುನಿಸ್ಟರು

ಸಿ.ಎನ್.ಕಮ್ಯುನಿಸ್ಟನಾದದ್ದು - 3

1990 ರ ಐಕ್ಯರಂಗದಲ್ಲಿ ಪ್ರಕಟವಾದ ಲೇಖನವನ್ನು ಮತ್ತೆ ಪ್ರಕಟಿಸಲಾಗಿದೆ


ನನಗೆ ಅವರೆವಿಗೆ ಸಿಕ್ಕಿದ್ದ ತಿಳುವಳಿಕೆಯ ಪ್ರಕಾರ ಕ್ರುಶ್ಚೇವರ 'ಶಾಂತಿಯುತ ಪರಿವರ್ತನೆ' ವಾಸ್ತವವಾಗಿ ಸಾಧ್ಯವಿಲ್ಲ ಎಂಬುದು, 1959ರಲ್ಲಿ ನೆಹರು ಸರ್ಕಾರವು ಕೇರಳದ ಕಮ್ಯುನಿಸ್ಟ್ ಸರ್ಕಾರವನ್ನು ವಜಾ ಮಾಡಿದುದು ಈ ನಂಬಿಕೆಯನ್ನು ಸಮರ್ಥಿಸಿತು.

1958ರಲ್ಲಿ ನನ್ನ ವಿದ್ಯಾರ್ಥಿ ಜೀವನದಲ್ಲಿ ಒಂದು ವಿಶೇಷ ಘಟನೆ ನಡೆಯಿತು. ನನ್ನ ವಿದ್ಯಾರ್ಥಿ ಜೀವನದ ವೆಚ್ಚಕ್ಕೆ ಆ ವರ್ಷ ಎಲ್ಲಿಂದಲೂ ಹಣ ಸಿಕ್ಕುವ ಸಂಭವವಿರಲಿಲ್ಲ. ಹಿಂದಿನ ವರ್ಷ ಪೌಷ್ಟಿಕ ಆಹಾರದ ಕೊರತೆಯಿಂದಾಗಿ ನನಗೆ 'ಅನೀಮಿಯಾ' ಆಗಿದ್ದಿತು. ಆಗ ಪ್ರತಿವರ್ಷವೂ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಮೆಡಿಕಲ್ ಎಕ್ಸಾಮಿನೇಷನ್ ನಡೆಯುತ್ತಿತ್ತು. ನನ್ನನ್ನು ಪರೀಕ್ಷಿಸಿದ ಡಾಕ್ಟರುಗಳು 'ಅನಿಮಿಯಾ' ಎಂದು ಬರೆದುದಲ್ಲದೇ ನಾಲ್ಕು ತಿಂಗಳುಗಳ ಟ್ರೀಟ್‌ಮೆಂಟ್ ಬರೆದುಕೊಟ್ಟರು. ನನ್ನನ್ನು ಹಣದ ಕೊರತೆಯನ್ನು ತಿಳಿದ ದಿವಂಗತ ಎಂ.ಸಿ.ಕೆಂಪಯ್ಯನವರು ನನ್ನನ್ನು ಮುತ್ತೂರಿಗೆ ಕರೆದುಕೊಂಡು ಹೋಗಿ ಊರಿನ ಜನರ ಸಭೆಯನ್ನು ಕರೆದು ನನ್ನ ವಿದ್ಯಾಬ್ಯಾಸಕ್ಕೆ ಪ್ರತಿಯೊಬ್ಬರೂ ಧನ ಸಹಾಯ ಮಾಡಬೇಕೆಂದು ಮನವಿ ಮಾಡಿದರು. ರೈತರು, ಕೃಷಿಕೂಲಿಕಾರರು ಧನ ಸಹಾಯ ಮಾಡಿದರು. ಮೇಲೂರಿನಿಂದ ಹೆಲ್ತ್ ಇನ್ಸ್‌ಪೆಕ್ಟರನ್ನು ಕರೆಸಿ ಎರಡು ವಾರಗಳ ಕಾಲ ವಿಟಮಿನ್, ಕ್ಯಾಲ್ಸಿಯಂ ಮತ್ತು ಮಿನರಲ್‌ಗಳ ಇಂಜೆಕ್ಷನ್ ಕೊಡಿಸಿದರು. ಬೆಂಗಳೂರಿನಲ್ಲಿ ನಾನು ಇದ್ದ ಸ್ಥಳದಿಂದ ಕಾಲೇಜಿಗೆ ಹೋಗಲು ದೂರವೆಂದು ಮುತ್ತೂರಿನ ಕಾಶಿಯವರ ತಮ್ಮಯ್ಯನವರು ನನಗೆ ಒಂದು ಬೈಸಿಕಲ್ಲನ್ನು ಕೊಟ್ಟರು. ಇವರು ಯಾರೂ ನನ್ನ ರಕ್ತ ಸಂಬಂಧಿಗಳಲ್ಲ. ನನಗೆ ಸಹಾಯ ಮಾಡುವುದರಲ್ಲಿ ಇವರಿಗೆ ಯಾವ ಸ್ವಾರ್ಥವೂ ಇರಲಿಲ್ಲ. ಇದರ ಕುರಿತು ನಾನು ಬಹುವಾಗಿ ಯೋಚಿಸಿ ಒಂದು ನಿರ್ಧಾರಕ್ಕೆ ಬಂದೆ. ನಾನು ನಮ್ಮ ದೇಶದ ಜನರ ಏಳಿಗೆಗಾಗಿ ದುಡಿಯಬೇಕು, ಸೋವಿಯತ್ ಒಕ್ಕೂಟದಲ್ಲಿರುವಂತೆ, ಚೀನದಲ್ಲಿರುವಂತೆ, ಭಾರತದಲ್ಲಿಯೂ ಸಮಸ್ತ ಜನರೂ ಸುಖವಾಗಿರಲು ಸಾಧ್ಯ ಮಾಡುವ ಸಮಾಜವಾದಿ ಸಮಾಜವನ್ನು ಸ್ಥಾಪಿಸಲು ದುಡಿಯಬೇಕು ಎಂದು ನಿರ್ಧಾರ ಮಾಡಿದೆ. 1958ರಲ್ಲಿ ಮಾಡಿದ ಆ ನಿರ್ಧಾರ ಮೂವತ್ತೆರಡು ವರ್ಷಗಳ ನಂತರವೂ ದೃಢವಾಗಿ ಹಾಗೆಯೇ ಉಳಿದಿದೆ. ಆದರೆ ಈ ನಿರ್ಧಾರವನ್ನು ನನ್ನ ಬಿ.ಕಾಂ. ವಿದ್ಯಾಬ್ಯಾಸ ಮುಗಿಯುವವರೆವಿಗೆ ಬಹಿರಂಗಪಡಿಸಲಿಲ್ಲ.

1960ರಲ್ಲಿ ಕೇಂದ್ರ ಸರ್ಕಾರದ ನೌಕರರ ಮುಷ್ಕರ ನಡೆಯಿತು. ಈ ಮುಷ್ಕರವನ್ನು ಕಾಂಗ್ರೆಸ್ ಸರ್ಕಾರ ಬಹಳ ಗಂಭೀರವಾಗಿ ಪರಿಗಣಿಸಿತು. ಈ ಮುಷ್ಕರವನ್ನು ದಮನ ಮಾಡಲು ಸರ್ಕಾರದ ಕಡೆಯವರು ಹಾಸ್ಟೇಲುಗಳಿಗೆ ಬಂದು ವಿದ್ಯಾರ್ಥಿಗಳನ್ನು ದಿನದ ಸಂಬಳದ ಮೇಲೆ ಬಂದು ಕೆಲಸ ಮಾಡಬೇಕೆಂದೂ, ಈಗ ಕೆಲಸ ಮಾಡಿದರೆ ವಿದ್ಯಾಭ್ಯಾಸ ಮುಗಿದ ನಂತರ ಅದೇ ಕೆಲಸ ಖಂಡಿತವಾಗಿ ಸಿಕ್ಕುವುದೆಂದು ಆಸೆ ಹುಟ್ಟಿಸಿ ಕೆಲಸ ಮಾಡಲು ಪುಸಲಾಯಿಸುತ್ತಿದ್ದರು.

(ಮುಂದುವರಿಯುವುದು)

ಲಾಲ್ ಸಲಾಂ ಕಾಮ್ರೇಡ್ ಸೂರಿ



ಇದು ಆಘಾತಕರ, ಬರಸಿಡಿಲು ಬಡಿದ ಸುದ್ದಿ, ಕಾರ್ಮಿಕ ವರ್ಗದ ಸಿಂಹದ ಘರ್ಜನೆ ಇನ್ನು ಕೇಳಲಾಗದು. ಜನತೆಯನ್ನು ಹಿಂಡುವ ಆರ್ಥಿಕ ನೀತಿಗಳ ವಿರುದ್ಧ, ದುಡಿವ ವರ್ಗವನ್ನು ವಿಭಜಿಸಿ, ಆಳುವವರ್ಗದ ಕ್ರೂರ ಮರ್ಧನದ ಫ್ಯಾಸಿಸ್ಟ್ ರೂಪದ ದಬ್ಬಾಳಿಕೆ ಹೇರುವ ಕೋಮುವಾದಿ ಸಂಚುಗಳ ವಿರುದ್ಧ ದುಡಿವ ಜನತೆಯ ಐಕ್ಯತೆಗಾಗಿ ಅಹೋರತ ಸೆಣಸಿದ ಅವರಿನ್ನಿಲ್ಲ. ಹೋರಾಟದ ಕಿಚ್ಚು ತುಂಬುವ, ಎಂತಹ ಕಠಿಣ ಸಂದರ್ಭದಲ್ಲಿಯೂ ಮುನ್ನುಗ್ಗುವ ಮಾರ್ಗದರ್ಶನ ಇನ್ನಿಲ್ಲ...

ಪ್ರಾಣಮಿತ್ರನ ಕಂಬನಿ


ಸಮರಶೀಲತೆಯ ಇನ್ನೊಂದು ಹೆಸರೇ ಕಾಮ್ರೇಡ್ ಸೂರಿ. ಕಾರ್ಮಿಕ ವರ್ಗದ ವರ್ಗ ಹೋರಾಟದ ಉನ್ನತ ರಾಜಕೀಯ ಪ್ರಜ್ಞೆ, ಮಾರ್ಕ್ಸ್‌ವಾದ-ಲೆನಿನ್‌ವಾದದ ಸೈದ್ಧಾಂತಿಕ ಸತ್ವದಿಂದ ದುಡಿವ ಜನಕೋಟಿಯ ಬಗೆಗಿನ ಅಪಾರ ಪ್ರೀತಿ. ದುಡಿವ ವರ್ಗದ ವಿಮೋಚನೆಗೆ ಅಚಲವಾದ ಬದ್ಧತೆ, ಪ್ರಾಯೋಗಿಕ ಅನುಭವಗಳು ಅವರನ್ನು ಅಪ್ರತಿಮ ಕ್ರಾಂತಿಕಾರಿಯನ್ನಾಗಿಸಿದವು. ದುಡಿವ ವರ್ಗದಿಂದ ಇವೆಲ್ಲವನ್ನೂ ಪಡೆದರು. ಅವೆಲ್ಲವನ್ನೂ ದುಡಿವ ವರ್ಗಕ್ಕೆ ಧಾರೆಯೆರೆದರು. ಕಾರ್ಮಿಕ ಚಳುವಳಿಯಲ್ಲಿನ ರಾಜಿ ಮನೋಭಾವ ಧಿಕ್ಕರಿಸಿ ವರ್ಗ ಹೋರಾಟದ ಮೊನಚು ನೀಡಿ ಸಂಘರ್ಷದ ಹೊಸ ಬೆಳಕು ಹತ್ತಿಸಿದರು.

ಸಾಮ್ರಾಜ್ಯಶಾಹಿ ವಿರುದ್ಧದ ಭಾರತ ಸ್ವಾತಂತ್ರ್ಯ ಸಂಗ್ರಾಮದ ಒಂದು ಅತ್ಯುತ್ತಮ ಕೊಡುಗೆ ಸಂಗಾತಿ ಸೂರಿಯವರು. ಗಳಿಸಿದ ಸ್ವಾತಂತ್ರ್ಯ ಜನಸಾಮಾನ್ಯರ, ರೈತ ಕಾರ್ಮಿಕ ಕೂಲಿಕಾರರಿಗೆದಕ್ಕಬೇಕೆಂದು ದಣಿವರಿಯದ ಸಮರ ಹೂಡಿದರು. ಅವರು ಕಟ್ಟಿದ ಹೋರಾಟಗಳಿಗೆ ಲೆಕ್ಕವಿಲ್ಲ. ಕರ್ನಾಟಕ ರಾಜ್ಯದ ಅದರಲ್ಲೂ ಬೆಂಗಳೂರಿನ ಬೆಳವಣಿಗೆಯಲ್ಲಿ ಅವರದೊಂದು ಅಚ್ಚಳಿಯದ ಪಾತ್ರವಿದೆ. ಜನತೆಯ ಹೋರಾಟಗಳ ವಿಶ್ವವಿದ್ಯಾನಿಲಯದಿಂದ ಉನ್ನತ ಹಂತ ತಲುಪಿದ ಜನನಾಯಕ ಕಾಂ. ಸೂರಿಯವರು ಕಾರ್ಮಿಕ ವರ್ಗದಲ್ಲಿ ವರ್ಗ ಜಾಗೃತಿ ಮೂಡಿಸಲು ಕ್ರಾಂತಿಕಾರಿ ಹೋರಾಟದ ಮುಂಚೂಣಿ ವಹಿಸಲು ಸೈದ್ಧಾಂತಿಕ ಶಿಕ್ಷಣ ಅಗತ್ಯವೆಂದು ಪ್ರತಿಪಾದಿಸುತ್ತಿದ್ದರು. ಇಂತಹ ಉನ್ನತ ರಾಜಕೀಯ ಪ್ರಜ್ಞೆ ರೂಪಿಸಲು ಐಕ್ಯರಂಗದ ಬೆಳವಣಿಗೆ, ಪ್ರಸಾರದತ್ತ ಸದಾ ಜತನದಿಂದ ಎಲ್ಲ ನೆರವು ನೀಡುತ್ತಿದ್ದರು. ಅವರು ಪತ್ರಿಕೆಯ ಪ್ರಕಾಶಕರೂ ಕೂಡ.

ದುಡಿವ ವರ್ಗದ ಸಮರಶೀಲ ಸೇನಾನಿಗೆ ಐಕ್ಯರಂಗದ ಶ್ರದ್ಧಾಂಜಲಿ.

ರಾರ್ ಸರಾಂ ಕಾಮ್ರೇಡ್ ಸೂರಿ.

ಶ್ರೀನಿವಾಸ ಬಜಾಲ್‌ರನ್ನು ಕೊಲೆಗೈದ ಹಿಂದೂ ಯುವಸೇನೆ



ಬಹುಮುಖ ಪ್ರತಿಭೆಯ ಕ್ರಿಯಾಶೀಲ ಯುವ ನಾಯಕ, ಡಿವೈಎಫ್‌ಐನ ಸಂಗಾತಿ ಶ್ರೀನಿವಾಸ್ ಬಜಾಲರನ್ನು ಹಿಂದೂ ಯುವ ಸೇನೆಯ ಗೂಂಡಾಗಳು ಬರ್ಬರವಾಗಿ ಹತ್ಯೆಗೈದಿದ್ದಾರೆ. ಈ ಕೊಲೆಗೈಯ್ಯಲು ಹಂತಕರಿಗೆ ಹಿಂದೂ ಯುವಸೇನೆಯ ಮುಖಂಡರು ಹತ್ತು ಸಾವಿರ ಸುಫಾರಿ ನೀಡಿದ್ದಾರೆ. ಮುಖ್ಯ ಉದ್ದೇಶ ಇಲ್ಲಿ ಡಿವೈಎಫ್‌ಐ ಬೆಳೆಯಬಾರದು. ಈ ಹತ್ಯೆಯ ಹಿಂದೆ ಹಲವಾರು ಕಾಣದ ಕೈಗಳಿವೆ. ಈ ಸಂಚಿನ ಹಿನ್ನೆಲೆ ಏನು ಎಂಬುದು ಬಯಲಾಗಬೇಕು. ಅದರ ಸುತ್ತ ವರದಿ.

ಜೂನ್ 24 ರ ಬೆಳಿಗ್ಗೆ ಸುಮಾರು 7.30 ಕ್ಕೆ ಪಕ್ಕಲಡ್ಕ ಪ್ರದೇಶದ ದಾರಿಯಲ್ಲೊಬ್ಬ ಬಾಲಕ ಗಟ್ಟಿಯಾಗಿ ಚೀರಿಕೊಂಡ ಕೂಡಲೇ ಗಾಬರಿಗೊಂಡ ಸುತ್ತ-ಮುತ್ತಲಿನ ಮನೆಗಳ ಜನರು ಹೊರ ಬರುತ್ತಿದ್ದಂತೆಯೇ ಕಪ್ಪು ಬಣ್ಣದ ಟೀ ಶರ್ಟ್, ನೀಲಿ ಜೀನ್ಸ್ ಪ್ಯಾಂಟ್ ತೊಟ್ಟಿದ್ದ ಯುವಕನೊಬ್ಬನ ಮೇಲೆ ಮಾರಕ ಆಯುಧ ಹಿಡಿದು ಐದಾರು ಜನರ ಹತ್ಯಾಕಾರರು ಕೊಲೆ ಮಾಡಿದ್ದನ್ನು ಕಂಡು ಹೌಹಾರಿದರು! ನೋಡುತ್ತಿದ್ದಂತೆ ಕೊಲೆಗಡುಕರು ಅಲ್ಲಿಂದ ಕ್ಷಣಾರ್ಧದಲ್ಲಿ ಪರಾರಿಯಾದರು.

ಸುದ್ದಿ ಕಾಡ್ಗಿಚ್ಚಿನಂತೆ ಬಜಾಲ್ ಪ್ರದೇಶವನ್ನು ಹರಡಿತು. ಕೊಲೆಯಾದ ಯುವಕ ಶ್ರೀನಿವಾಸ್ ಎಂದು ತಿಳಿಯುತ್ತಿದ್ದಂತೆ ನೂರಾರು ಯುವಕರ ದಂಡೆ ಬಂದು ಶ್ರೀನಿವಾಸ್‌ನನ್ನು ಬದುಕುಳಿಸಲು ಹೆಣಗಾಡಿತು. ಆದರೆ 29 ಗಾಯಗಳಿಂದ ಬರ್ಬರವಾಗಿ ಜರ್ಜರಿತಗೊಂಡಿದ್ದ ದೇಹ ಕೊನೆಯುಸಿರೆಳೆದಿತ್ತು. ಪಕ್ಕಲಡ್ಕ-ಬಜಾಲ್ ಪ್ರದೇಶದ ಜನತೆ ದುಃಖದ ಸಾಗರದಲ್ಲಿ ಮುಳುಗಿ ಹೋದರು.

ಕಾಮ್ರೇಡ್ ಶ್ರೀನಿವಾಸ್ 27 ರ ಹರೆಯದ ಯುವಕ, ಪಕ್ಕಲಡ್ಕ ಮಂಡಲದ ಕ್ರೀಡಾ ಕಾರ್ಯದರ್ಶಿ, ಸ್ವತಃ ಕಲಾವಿದ, ನೃತ್ಯಪಟು, ಸದಾ ಯುವಜನರೊಂದಿಗೆ ಬೆರೆಯುತ್ತಿದ್ದ ಸ್ನೇಹಮಯಿ. ಆ ಪ್ರದೇಶದಲ್ಲಿ ಯಾವುದೇ ಸಾಂಸ್ಕೃತಿಕ, ಕ್ರೀಡಾ, ಸಾಮಾಜಿಕ ಚಟುವಟಿಕೆಗಳಲ್ಲಿ ಶ್ರೀನಿವಾಸ್ ಸದಾ ಮುಂದು. ಚಿಣ್ಣರ ಮೇಳ, ಕ್ರೀಡೋತ್ಸವ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವ್ಯವಸ್ಥಿತವಾಗಿ ಸಂಘಟಿಸುತ್ತಾ ಜನರ ಪ್ರೀತಿಗೆ ಪಾತ್ರವಾಗಿದ್ದವರು ಶ್ರೀನಿವಾಸ್.

ಈ ಪ್ರದೇಶದಲ್ಲೊಂದು ಕ್ರಿಮಿನಲ್‌ಗಳ ತಂಡವಿದೆ. ಇದರ ಹೆಸರು 'ಹಿಂದೂ ಯುವ ಸೇನೆ'. ಕಳೆದ ಹಲವಾರು ವರ್ಷಗಳಿಂದ ಅಕ್ರಮ, ಅತ್ಯಾಚಾರ, ದೌರ್ಜನ್ಯ, ಸುಲಿಗೆಗಳನ್ನು, ಕೊಲೆಗಳನ್ನು ನಡೆಸುತ್ತಿರುವ ಕುಖ್ಯಾತಿ ತಂಡ ಇದು. ಕಳೆದ ಒಂದು ದಶಕದಿಂದ ಈ ಪ್ರದೇಶದಲ್ಲಿ ಡಿವೈಎಫ್‌ಐ ಸಂಘಟನೆಯ ಬೆಳವಣಿಗೆ, ಅದರ ವೈವಿಧ್ಯಮಯ ಕಾರ್ಯಕ್ರಮಗಳು, ಪ್ರದೇಶದ ಅಭಿವೃದ್ಧಿಗಾಗಿ, ಯುವಜನರ ಐಕ್ಯತೆಗಾಗಿ ಶ್ರಮಿಸುತ್ತಿದ್ದ ಯುವಜನರ ಕ್ರಿಯಾಶೀಲ ಗುಂಪು; ರಾಜಕೀಯವಾಗಿಯೂ ಬಲಗೊಳ್ಳುತ್ತಾ ಹೋಗುತ್ತಿರುವುದನ್ನು ಹಿಂದೂ ಮತಾಂಧರಿಗೆ ಸಹಿಸಲು ಸಾಧ್ಯವಾಗಲೇ ಇಲ್ಲ. ಸೈಧಾಂತಿಕವಾಗಿ ಹೋರಾಡಲು ಆ ಗೂಂಡಾ ಪಡೆಗಳಿಗೆ ಸಾಧ್ಯವಾಗುತ್ತಿಲ್ಲ. ಜನರಿಂದಲೂ, ಸಮಾಜದಿಂದಲೂ ಕ್ರಿಮಿನಲ್ ಪಟ್ಟ ಶಾಶ್ವತವಾಗಿ ಕಟ್ಟಿಕೊಂಡವರಿಗೆ ಉಳಿದಿರುವ ದಾರಿಯಾದರೂ ಏನು? ಕೊಲೆ ಮತ್ತು ಸುಲಿಗೆಗಳೇ.

ಈಗ್ಗೆ ಕೆಲ ವರ್ಷಗಳ ಹಿಂದೆ ಅಲ್ಲಿನ ಡಿವೈಎಫ್‌ಐ ಕಾರ್ಯದರ್ಶಿ ನಳಿನಾಕ್ಷರ ಮೇಲೆ ಮರಣಾಂತಿಕ ಹಲ್ಲೆಯನ್ನು ಇದೇ ಕ್ರಿಮಿನಲ್‌ಗಳು ನಡೆಸಿದ್ದರು. ಇದೀಗ ತಮ್ಮೆಲ್ಲಾ ದೌರ್ಜನ್ಯ, ದಬ್ಬಾಳಿಕೆಗಳನ್ನು ಬಹಿರಂಗವಾಗಿಯೇ ಎದುರಿಸುತ್ತಿದ್ದ ಡಿವೈಎಫ್‌ಐ ಸಂಘಟನೆಯನ್ನು ಮುಗಿಸಲು ನೂರಾರು ಯುವಜನರಿಗೆ ಬೆನ್ನೆಲುಬಾಗಿ ಕೆಲಸ ಮಾಡುತ್ತಿದ್ದ ಕಾಂ. ಶ್ರೀನಿವಾಸ್‌ರವರನ್ನು ಬರ್ಬರವಾಗಿ ಹತ್ಯೆ ಮಾಡಿದ್ದಾರೆ.

ಆದರೆ "ದೇಹ ಛಿದ್ರವಾದರೂ ದೇಶ ಛಿದ್ರವಾಗಲು ಬಿಡುವುದಿಲ್ಲ" ಎಂಬ ಸಮರಧೀರ, ದೇಶಪ್ರೇಮಿ ಸಂಘಟನೆ ಡಿವೈಎಫ್‌ಐ ಎಂಬುದನ್ನು ಆ ಕೊಲೆಗಡುಕ ಮತಾಂಧರಿಗೆ ತೋರಿಸುವ ಕೆಲಸ ಈಗಾಗಲೇ ಮಂಗಳೂರಿನಿಂದಲೇ ಆರಂಭಗೊಂಡಿದೆ. ಜೂನ್ 26 ರಂದು ರಾಜ್ಯವ್ಯಾಪಿಯಾಗಿ ಯುವಜನರ ನೂರಾರು ಪ್ರತಿಭಟನೆಗಳು, ಜೂನ್ 30 ರಂದು ಬಜಾಲ್ ಪ್ರದೇಶದಲ್ಲಿ ನಡೆದ ಸಾವಿರಾರು ಜನರ ಬೃಹತ್ ಪ್ರತಿಭಟನೆಗಳು ಇದನ್ನು ಸ್ಪಷ್ಟಪಡಿಸಿವೆ.

ವಿದ್ಯುತ್ ಬೆಳಕನ್ನೆ ಕಾಣದ ತನ್ನ ಮನೆಗೆ ಬೆಳಕಾಗಿದ್ದ ಶ್ರೀನಿವಾಸ್ ಅಸ್ವಸ್ಥೆಯಿಂದ ನರಳುತ್ತಿದ್ದ ತಾಯಿ; ಅಂಗವಿಕಲತೆಯ ಅಕ್ಕನ ಬಾಳಿಗೆ ಆಶಾಕಿರಣವಾಗಿದ್ದರು. ಈಗ ಅದೆಲ್ಲವೂ ಬರೀ ಕನಸು. ಅಂದು ಬೆಳಿಗ್ಗೆ 7.30 ರ ವೇಳೆಗೆ ಮನೆಯವರ ಆಶಾಗೋಪುರ ಕುಸಿದು ಶ್ರೀನಿವಾಸ್ ರಕ್ತದ ಮಡುವಿನಲ್ಲಿ ಬಿದ್ದಿದ್ದರು. ಬಜಾಲ್-ಪಕ್ಕಲಡ್ಕ ಪ್ರದೇಶದಲ್ಲಿ ಈಗ ಕರಾಳ ಮೌನ. ಶ್ರೀನಿವಾಸ್ ಸಾವಿಗೆ ಊರಿಗೆ ಊರೇ ಕಣ್ಣೀರಿಟ್ಟಿದೆ.

ಮೂಲತಃ ಎಕ್ಕೂರಿನವರಾದ ಶ್ರೀನಿವಾಸ್ ಬಜಾಲ್ ಪ್ರದೇಶದಲ್ಲಿ ನೆಲಸಿ, ಡಿವೈಎಫ್‌ಐ ಸಂಘಟನೆಯಲ್ಲಿ ಸಕ್ರಿಯವಾಗಿ ದುಡಿಯುತ್ತಿದ್ದರು. ಹಿಂದೂ ಯುವ ಸೇನೆ ಬಲಿಷ್ಟವಾಗಿದ್ದ ಎಕ್ಕೂರಿನಿಂದ ಬಂದ ಧೈರ್ಯಶಾಲಿ ಯುವಕ ಕೋಮುವಾದಿ ಸಂಘಟನೆ ಬಿಟ್ಟು ಪ್ರಗತಿಪರ ಸಂಘಟನೆಯಲ್ಲಿ ತೊಡಗಿಸಿಕೊಂಡದ್ದು ಅವರಿಗೆ ನುಂಗಲಾರದ ತುತ್ತಾಗಿತ್ತು.


ತೀರಾ ಬಡತನದಲ್ಲಿ ಬೆಳೆದ ಶ್ರೀನಿವಾಸ್ ಅನಾರೋಗ್ಯದ ತಾಯಿ ಹಾಗೂ ಕುರುಡ ಅಕ್ಕನ ಜವಾಬ್ದಾರಿ ಹೊತ್ತಿದ್ದರು. ಮನೆಗೆ ಆಸರೆಯಾಗಿದ್ದ ಪ್ರೀತಿಯ ಮಗನ ಸಾವಿನಿಂದ ತಾಯಿ ಆಘಾತಕ್ಕೊಳಗಾಗಿದ್ದಾರೆ.

ಒಟ್ಟಾರೆ ಸೌಹಾರ್ದತೆ ಕದಡುವ, ಪ್ರಗತಿ ಬಯಸದ ಕೋಮುವಾದಿ ಗೂಂಡಾಪಡೆ ಒಬ್ಬ ಪ್ರಗತಿಪರ, ಸ್ನೇಹಜೀವಿ ಶ್ರೀನಿವಾಸ್‌ರನ್ನು ಬಲಿತೆಗೆದು ಕೊಂಡಿದೆ. ಆದರೂ ಆತನ ಸಂಘಟನೆಯ ಆಶಯವನ್ನು ಏನು ಮಾಡಲಾಗದು ಎಂಬುದನ್ನು ಅರಿಯಬೇಕು.

ಕೊಲೆಯ ಸಂಚು

ಇತ್ತೀಚೆಗೆ ಜನರಿಂದ ದೂರವಾಗುತ್ತಿರುವ ಕೋಮುವಾದಿಗಳು, ತಮ್ಮ ಗಲಭೆಕೋರ ಅಜಂಡಾಗಳಿಂದ, ಸಿದ್ಧಾಂತಗಳಿಂದ ಜನರ

ಪುಟ 9 ಕ್ಕೆ



ರಾಷ್ಟ್ರಪತಿ ಸ್ಥಾನಕ್ಕೆ ಡಾ. ಲಕ್ಷ್ಮಿ ಸೆಹಗಲ್‌ಅವರನ್ನು ಸ್ಪರ್ಧಿಸಲು ಎಡಪಕ್ಷಗಳು ಮತ್ತು ಮಿತ್ರಪಕ್ಷಗಳು ಆಯ್ಕೆ ಮಾಡಿರುವ ನಿರ್ಧಾರಕ್ಕೆ ಸಂಘ ಪರಿವಾರವು ಬಾಲಿಶ ಪ್ರತಿಕ್ರಿಯೆ ನೀಡಿದೆ. ಎಡಪಕ್ಷಗಳ ವಿರುದ್ಧ ಮಾಡಿದ ಟೀಕೆಗಳ ಸರಮಾಲೆಗೆ ಸಾಕಷ್ಟು ಉತ್ತರ ದೊರಕಿದೆ. ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್ ಅವರ ಸ್ಪರ್ಧೆಯ ಕುರಿತು ಅನೇಕ ರಾಜಕೀಯ ಅಂಕಣಕಾರರು ಕೆಲವು ಪ್ರಶ್ನೆಗಳನ್ನು ಎತ್ತಿದ್ದಾರೆ. ಅವುಗಳಿಗೆ ಮಾರುತ್ತರ ನೀಡಿದ್ದಾರೆ

ಸೀತಾರಾಂ ಯೆಚೂರಿ

ರಾಷ್ಟ್ರಪತಿ ಸ್ಥಾನಕ್ಕೆ ಡಾ. ಲಕ್ಷ್ಮಿ ಸೆಹಗಲ್‌ರವರ ಉಮೇದುವಾರಿಕೆ

ಪ್ರಶ್ನೆಗಳು ಮತ್ತು ನಿಜಾಂಶಗಳು

1. ಅಭ್ಯರ್ಥಿಯನ್ನು ನಿಲ್ಲಿಸುವುದರ ಮೂಲಕ ಎಡಪಕ್ಷಗಳು ರಾಷ್ಟ್ರೀಯ ಮುಖ್ಯವಾಹಿನಿಯಿಂದ ದೂರ ಸರಿದಂತಾಗಿದೆಯಲ್ಲವೇ?

ದೇಶಕ್ಕೆ ಮತ್ತು ಜನತೆಗೆ ಮಾರಕವಾದ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರದ ಎಲ್ಲಾ ನೀತಿಗಳನ್ನು ಎಡಪಕ್ಷಗಳು ನಿರಂತರವಾಗಿ ವಿರೋಧಿಸಿವೆ. ಫ್ಯಾಸಿಸಂ ನಂತಹ ಕೋಮುವಾದದ ಕಾರ್ಯಸೂಚಿಯನ್ನು ಮುಂದುವರಿಸುತ್ತಿರುವುದರಿಂದ ಭಾರತದ ಜಾತ್ಯಾತೀತ, ಪ್ರಜಾಪ್ರಭುತ್ವ ತಳಹದಿಯು ನಾಶವಾಗುತ್ತಲಿದೆ. ಆರ್ಥಿಕ, ವಿದೇಶ ನೀತಿ, ಆಂತರಿಕ ಭದ್ರತೆ ಇತ್ಯಾದಿ ಪ್ರತಿಯೊಂದು ಕ್ಷೇತ್ರಗಳಲ್ಲಿಯೂ ವಾಜಪೇಯಿ ಸರಕಾರವು ನಮ್ಮ ದೇಶವನ್ನು ವಿನಾಶದತ್ತ ಕೊಂಡೊಯ್ಯುತ್ತಲಿದೆ.

ಒಂದೆಡೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರದ ನೀತಿಗಳನ್ನು ವಿರೋಧಿಸುತ್ತಾ, ಅದೇ ಸಂದರ್ಭದಲ್ಲಿ ರಾಷ್ಟ್ರಪತಿ ಸ್ಥಾನಕ್ಕೆ ಅವರ ಅಭ್ಯರ್ಥಿಯನ್ನು ಬೆಂಬಲಿಸುವುದು ರಾಜಕೀಯ ಅನೈತಿಕತೆಯಾಗುತ್ತದೆ. ಆದ್ದರಿಂದಲೇ ಈ ಚುನಾವಣೆಯಲ್ಲಿ ಸ್ಪರ್ಧಿಸಬೇಕೆಂಬ ಎಡಪಕ್ಷಗಳ ನಿರ್ಧಾರ ಅತ್ಯಂತ ಸಮಂಜಸ.

2. ಸೋಲುವ ಸಮರ ಎಂದು ತಿಳಿದಿದ್ದರೂ ಎಡಪಕ್ಷಗಳು ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿದುದು ಯಾಕೆ?

ರಾಷ್ಟ್ರಪತಿ ಸ್ಥಾನಕ್ಕೆ ನಡೆಯುತ್ತಿರುವ ಚುನಾವಣೆ ರಾಜಕೀಯ ಸ್ಪರ್ಧೆಯಾಗಿದೆ. ಈ ಚುನಾವಣೆಯ ಪ್ರಚಾರದ ಸಂದರ್ಭದಲ್ಲಿ ದೇಶ ಮತ್ತು ಜನತೆಯ ಪ್ರಮುಖ ಸಮಸ್ಯೆಗಳನ್ನು ಕಾರ್ಯಸೂಚಿಯನ್ನಾಗಿಸಲು ಎಡಪಕ್ಷಗಳು ಬಯಸುತ್ತವೆ. ಗುಜರಾತ್ ಸರಕಾರವು ಪ್ರಾಯೋಜಿಸಿದ ಹತ್ಯಾಕಾಂಡದ ನೆರಳಿನಲ್ಲಿ ಈ ಚುನಾವಣೆಯು ನಡೆಯುತ್ತಿದೆ. ಈ ಸ್ಪರ್ಧೆಯಿಂದಾಗಿ, ಈ ಪ್ರಶ್ನೆಯು ಜನರ ಮುಂದೆ ಚರ್ಚಿತವಾಗುತ್ತಿದೆ.

ಈ ಪ್ರಶ್ನೆಗೆ ಸರಿಯಾದ ಉತ್ತರವನ್ನು ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್ ಅವರೇ ನೀಡಿದ್ದಾರೆ. ಅವರೇ ಹೇಳಿದಂತೆ "ಪ್ರತಿಯೊಂದು ಹೋರಾಟದಲ್ಲೂ ಕೆಲವು ಜನರು ಕೈಕೊಡುತ್ತಾರೆ, ಆದರೂ ಹೋರಾಟ ಮುಂದುವರಿಯುತ್ತದೆ. ಸೋಲು ಖಚಿತವೆಂದು ತಿಳಿದಿದ್ದರೂ ಇಂಡಿಯನ್ ನ್ಯಾಶನಲ್ ಆರ್ಮಿ(ಐಎನ್‌ಎ) ಹೋರಾಟ ನಡೆಸಿತು. ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್ ಮತ್ತು ಐಎನ್‌ಎ ಹೋರಾಟದಲ್ಲಿ ಸೋತರೂ ಮುಂದೆ ಭಾರತದ ಸ್ವಾತಂತ್ರ್ಯಕ್ಕೆ ಅದು ಸಹಾಯ ಮಾಡಿತು. ಬ್ರಿಟಿಷ್ ವಸಾಹತುಶಾಹಿಗಳು ಭಾರತದ ಸೇನೆಯನ್ನು ನಂಬಿ ಕೂರಲು ಸಾಧ್ಯವಿಲ್ಲ ಎಂಬ ಬಲವಾದ ಎಚ್ಚರಿಕೆಯನ್ನು ಮೊದಲು ನೀಡಿದ್ದು ಐಎನ್‌ಎ.

ಒಮ್ಮೆ ಕಾಳಗದಲ್ಲಿ ಸೋತರೂ ಅಂತಿಮವಾಗಿ ಯುದ್ಧವನ್ನು ಗೆಲ್ಲುವವರೆಗೂ ಹೋರಾಟ ಮುಂದುವರೆಯುತ್ತದೆ.

3. ಸ್ವಾತಂತ್ರ್ಯ ಚಳುವಳಿಯ ವಯಸ್ಸಾದ ವ್ಯಕ್ತಿಯನ್ನು ತಮ್ಮ ಸ್ಪರ್ಧಿಯನ್ನಾಗಿ ಎಡಪಕ್ಷಗಳು ಕಣಕ್ಕಿಳಿಸಿದುದು ಏಕೆ?

ಸಂಕ್ಷಿಪ್ತವಾಗಿ ಹೇಳುವುದಾದರೆ ಸ್ವಾತಂತ್ರ್ಯಕ್ಕಾಗಿ ಭಾರತದ ಜನತೆ ನಡೆಸಿದ ಐಕ್ಯ ಚಳುವಳಿಯ ಹೆಗ್ಗುರುತು ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್. ಅದಲ್ಲದೆ, ಸ್ವಾತಂತ್ರ್ಯ ದೊರಕಿದ ನಂತರವೂ, ಭಾರತದ ಬಹುಸಂಖ್ಯಾತ ಜನರ ಆರ್ಥಿಕ ವಿಮೋಚನೆಗಾಗಿ ಹೋರಾಟವನ್ನು ಅವರು ಮುಂದುವರಿಸಿದರು. ವಿವಿಧ ಭಾಷೆಗಳನ್ನು ಮಾತನಾಡುವ, ವಿವಿಧ ಪರಂಪರೆಯ, ವಿವಿಧ ಜಾತಿಗಳಿಗೆ ಸೇರಿದ ಎಲ್ಲಾ ಧರ್ಮದ ಜನರನ್ನು ಒಂದುಗೂಡಿಸಿದ ನಿಜವಾದ ಭಾರತದ ರಾಷ್ಟ್ರೀಯತೆ ಪರಂಪರೆಗೆ ಸೇರಿದವರು ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್.

ಫ್ಯಾಸಿಸ್ಟ್ ವಾದಿ ಕೋಮುವಾದದ ಕಾರ್ಯಸೂಚಿಯ ಮೂಲಕ ಇಂತಹ ಐಕ್ಯತೆಯನ್ನು ಮುರಿಯಲು ಸಂಘ ಪರಿವಾರ ಸತತ ಪ್ರಯತ್ನ ಮಾಡುತ್ತಿದೆ. ಆರ್‌ಎಸ್‌ಎಸ್ ನ ಆಕ್ರಮಣಕಾರಿ ರಾಷ್ಟ್ರೀಯತೆಯು ಫ್ಯಾಸಿಸ್ಟ್ ಮಾದರಿಯ ಅತಿರೇಕದ ದೇಶಭಕ್ತಿ ಅಲ್ಲದೆ ಬೇರೇನಲ್ಲ. ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್ ಅವರ ಸ್ಪರ್ಧೆಯು ಭಾರತದ ನಿಜವಾದ ರಾಷ್ಟ್ರವಾದ ಮತ್ತು ಆರ್‌ಎಸ್‌ಎಸ್‌ನ ಕಪಟ ರಾಷ್ಟ್ರವಾದದ ನಡುವಿನ ಹೋರಾಟವನ್ನು ಅಜೆಂಡವನ್ನಾಗಿಸಿದೆ.

4. ಅಭ್ಯರ್ಥಿಯನ್ನು ಕಣಕ್ಕಿಳಿಸುವ ಮೂಲಕ ಎಡಪಕ್ಷಗಳು ಒಮ್ಮತಾಭಿಪ್ರಾಯದಿಂದ ದೂರಸರಿದಿದೆಯೇ?

ಹಿಂದಿನಿಂದಲೂ ಒಮ್ಮತಾಭಿಪ್ರಾಯದಿಂದ ದೂರ ಸರಿದಿದ್ದು ಬಿಜೆಪಿ ಎಂಬುದನ್ನು ಗಮನಿಸಬೇಕಾಗಿದೆ. ಹಿಂದಿನ ರಾಷ್ಟ್ರಪತಿ ಚುನಾವಣೆಗಳ ಸಂದರ್ಭದಲ್ಲಿ ಬಿಜೆಪಿ ಮತ್ತು ಕೇಸರಿ ಪಡೆಗಳು ಸ್ಪರ್ಧಿಸಿದ್ದವು ಎಂಬುದನ್ನು ನೆನಪಿಸಿಕೊಳ್ಳಬೇಕು. 1992 ರಲ್ಲಿ ಒಮ್ಮತದ ಅಭ್ಯರ್ಥಿ ಡಾ.ಶಂಕರ್ ದಯಾಳ್ ಶರ್ಮ ಅವರ ವಿರುದ್ಧ ಬಿಜೆಪಿಯು ಜಿ.ಜಿ.ಸ್ವೆಲ್ ಅವರನ್ನು ಬೆಂಬಲಿಸಿತ್ತು. 1997 ರಲ್ಲಿ ಕೆ.ಆರ್.ನಾರಾಯಣನ್ ಅವರ ವಿರುದ್ಧ ಬಿಜೆಪಿಯ ಅತ್ಯಂತ ನಿಕಟ ಮಿತ್ರ ಪಕ್ಷ ಶಿವಸೇನೆಯು ಟಿ.ಎನ್.ಶೇಷನ್ ಅವರನ್ನು ಕಣಕ್ಕಿಳಿಸಿತ್ತು.

ಇಂದಿನ ಸಂದರ್ಭದಲ್ಲಿ ಒಮ್ಮತಾಭಿಪ್ರಾಯದ ಕುರಿತು ಹೇಳುವುದಾದರೆ ಬಿಜೆಪಿ ನೇತೃತ್ವದ ಎನ್‌ಡಿಎ ಅದನ್ನು ಮುರಿದುಹಾಕಿತ್ತು. ಆರಂಭದಲ್ಲಿ ಪ್ರಧಾನ ಮಂತ್ರಿಗಳು ಕೆಲವು ಪ್ರತಿಪಕ್ಷಗಳೊಡನೆ ಸಮಾಲೋಚನೆ ನಡೆಸಿದರು. ಎಡಪಕ್ಷಗಳು ಮತ್ತು ಕಾಂಗ್ರೆಸ್ ಕೂಡಾ ನಾರಾಯಣನ್ ಅವರು ರಾಷ್ಟ್ರಪತಿಗಳಾಗಿ ಎರಡನೇ ಅವಧಿಗೆ ಮುಂದುವರೆಯುವಂತೆ ಕೇಳಿಕೊಳ್ಳಬೇಕು ಎಂದು ಸೂಚಿಸಿದವು. ಭಾರತದ ಈಗಿನ ಪರಿಸ್ಥಿತಿಯಲ್ಲಿ ಇದು ಜನಗಳ ಐಕ್ಯ ಇಚ್ಛಾಶಕ್ತಿಯನ್ನು ಬಿಂಬಿಸುವ ಒಂದು ಅತ್ಯುತ್ತಮ ದಾರಿಯಾಗಿರುತ್ತಿತ್ತು. ಪ್ರತಿಪಕ್ಷಗಳಿಗೆ ಈ ಬಗ್ಗೆ ತಿಳಿಸುವುದಾಗಿ ಭರವಸೆ ನೀಡಿದ ಪ್ರಧಾನಮಂತ್ರಿಗಳು, ಅದರ ಬದಲು ನೇರವಾಗಿ ನಾರಾಯಣನ್ ಬಳಿಗೆ ಹೋಗಿ ತಾವು ಮತ್ತು ಎನ್‌ಡಿಎ ಅವರನ್ನು ಎರಡನೇ ಅವಧಿಗೆ ಮುಂದುವರಿಸುವುದರ ಪರವಾಗಿ ಇಲ್ಲ ಎಂದು ಅವರಿಗೆ ತಿಳಿಸಿದರು. ಇದು ಅಭೂತಪೂರ್ವವೂ ಆಗಿತ್ತು, ಅಸಭ್ಯತನವೂ ಆಗಿತ್ತು. ಶ್ರೀ ನಾರಾಯಣನ್ ಕುರಿತಂತೆ ಸಾಧ್ಯವಿದ್ದ ಒಮ್ಮತಾಭಿಪ್ರಾಯವನ್ನು ಬಿಜೆಪಿ/ಎನ್‌ಡಿಎ ಮುರಿಯಿತು.

ನಂತರ ಉಪಾಧ್ಯಕ್ಷರಾಗಿರುವ ಕೃಷ್ಣ ಕಾಂತ್‌ರನ್ನು ರಾಷ್ಟ್ರಪತಿಯಾಗಿ ಮಾಡುವ ಬಗ್ಗೆ ಒಂದು ಒಮ್ಮತಾಭಿಪ್ರಾಯ ಮೂಡಿಬರುತ್ತಿತ್ತು. ಇದರ ಬಗ್ಗೆ ಎಡಪಕ್ಷಗಳಿಗೆ ಬಹಳ ಸಂತೋಷವೇನೂ ಇರದಿದ್ದರೂ ಒಬ್ಬ ಒಮ್ಮತದ ಅಭ್ಯರ್ಥಿ ಇರಲಿ ಎಂದು ಒಪ್ಪಿದವು. ಇದನ್ನೂ ಕೂಡಾ ಪಿ.ಸಿ.ಅಲೆಕ್ಸಾಂಡರ್‌ರವರ ಹೆಸರನ್ನು ಏಕಪಕ್ಷೀಯವಾಗಿ ಪ್ರಕಟಿಸಿ ಬಿಜೆಪಿ/ಎನ್‌ಡಿಎ ಬುಡಮೇಲು ಮಾಡಿತು. ಈ ಸನ್ನಿವೇಶದಲ್ಲಿ ಎಲ್ಲಾ ಪ್ರತಿಪಕ್ಷಗಳು ರಾಷ್ಟ್ರಪತಿ ನಾರಾಯಣನ್ ಬಳಿಗೆ ಹೋಗಿ ಅವರನ್ನು ಸ್ಪರ್ಧೆಗಿಳಿಯುವಂತೆ ಕೇಳಿಕೊಂಡಾಗ ಮಾತ್ರವೇ ಬಿಜೆಪಿ/ಎನ್‌ಡಿಎ ಭಯಭೀತರಾದರು, ಅಬ್ದುಲ್ ಕಲಾಂ ಹೆಸರನ್ನು ಪ್ರಸ್ತಾವ ಮಾಡಿದರು. ಆದ್ದರಿಂದ ಕಲಾಂರವರ ಆಯ್ಕೆ ಅವರ ಯೋಗ್ಯತೆ ಮತ್ತು ಸಾಧನೆಗಳ ಆಧಾರದಲ್ಲಿ ಅಲ್ಲ. ಈ ಆಯ್ಕೆ ನಡೆದದ್ದು ಪ್ರತಿಪಕ್ಷಗಳ ಐಕ್ಯತೆಯನ್ನು ಮುರಿಯುವ ಉದ್ದೇಶದಿಂದ ಮಾತ್ರ. ಇಂತಹ ಪಂಗನಾಮಗಳ ಮೇಲೆ ಬಿಜೆಪಿ/ಎನ್‌ಡಿಎ ದೇಶದ ಅತ್ಯುಚ್ಚ ಸ್ಥಾನಕ್ಕೆ ಒಬ್ಬ ಅಭ್ಯರ್ಥಿಯನ್ನು ಆರಿಸಿರುವುದು ಒಂದು ದುರಂತ.

5. ಅಭ್ಯರ್ಥಿಯನ್ನು ಕಣಕ್ಕಿಳಿಸುವ ಮೂಲಕ ಎಡಪಕ್ಷಗಳು ವಿರೋಧ ಪಕ್ಷಗಳ ಐಕ್ಯತೆಯನ್ನು ಒಡೆದಂತಾಗಲಿಲ್ಲವೇ? ಜನತಾ ರಂಗ(ಪೀಪಲ್ಸ್ ಫ್ರಂಟ್) ಛಿದ್ರವಾಗಲು ಕಾರಣವಾಗಲಿಲ್ಲವೇ?

ಇಲ್ಲ, ಬದಲಾಗಿ ಈ ವಿಷಯದಲ್ಲಿ ಎಡಪಕ್ಷಗಳು ಮತ್ತು ಅವುಗಳ ಮಿತ್ರಪಕ್ಷಗಳು ನಿಜವಾಗಿಯೂ ವಿರೋಧ ಪಕ್ಷದ ಪಾತ್ರವನ್ನು ನಿರ್ವಹಿಸುತ್ತಿವೆ. ಕಾಂಗ್ರೆಸ್ ಇಂದು ಆಡಳಿತಾರೂಢ ಪಕ್ಷದೊಂದಿಗೂ ಹೋಗಲಾಗದ, ವಿರೋಧ ಪಕ್ಷಗಳೊಂದಿಗೂ ಇರಲಾಗದ ವಿಚಿತ್ರ ಪರಿಸ್ಥಿತಿಯಲ್ಲಿದೆ.

ಪೀಪಲ್ಸ್ ಫ್ರಂಟ್ ಬಗ್ಗೆ ಹೇಳುವುದಾದರೆ, ಕೋಮುವಾದಿ ಶಕ್ತಿಗಳಿಗೆ ಒಂದು ಕಾಂಗ್ರೆಸ್ಸೇತರ ಪರ್ಯಾಯವನ್ನು ಒದಗಿಸುವ ಸಲುವಾಗಿ ಪೀಪಲ್ಸ್ ಫ್ರಂಟ್ ಸ್ಥಾಪನೆಯಾಗಿತ್ತು. ಸಮಾಜವಾದಿ ಪಕ್ಷದಂತಹ ಅದರ ಘಟಕ ಪಕ್ಷವೊಂದು ಬಿಜೆಪಿ ನೇತೃತ್ವದ ಎನ್‌ಡಿಎ ಅಭ್ಯರ್ಥಿಯನ್ನು ಬೆಂಬಲಿಸಲು ನಿರ್ಧರಿಸುವುದೆಂದರೆ ಪೀಪಲ್ಸ್ ಫ್ರಂಟ್ ಸ್ಥಾಪನೆಯ ಮೂಲ ಉದ್ದೇಶವನ್ನೇ ನಿರಾಕರಿಸಿದಂತೆ. ಸಮಾಜವಾದಿ ಪಕ್ಷದ ಈ ನಿರ್ಧಾರದಿಂದಾಗಿ ಅದುಉತ್ತರ ಪ್ರದೇಶದಲ್ಲಿ ಬಿಜೆಪಿ, ಬಿಎಸ್‌ಪಿ ಮತ್ತು ಕಾಂಗ್ರೆಸ್ ಜೊತೆಯಲ್ಲಿ ನಿಲ್ಲುವಂತಾಗಿದೆ. ಇದು ಪೀಪಲ್ಸ್ ಫ್ರಂಟ್ ಕಟ್ಟಲು ಹೊರಟ ರಾಜಕೀಯ ಪರ್ಯಾಯವಾಗಲು ಸಾಧ್ಯವಿಲ್ಲ.

ಕೋಮುವಾದಿ ಶಕ್ತಿಗಳನ್ನು ನಿಜವಾಗಿಯೂ, ನಿರಂತರವಾಗಿಯೂ ವಿರೋಧಿಸುವ ಕಾಂಗ್ರೆಸ್ಸೇತರ ರಾಜಕೀಯ ಶಕ್ತಿಗಳನ್ನು ಒಗ್ಗೂಡಿಸಿ ಪೀಪಲ್ಸ್ ಫ್ರಂಟ್‌ನ್ನು ಪುನರ್‌ರಚಿಸಲಾಗುವುದು.

6. ಎಡಪಕ್ಷಗಳು ತಮ್ಮ ಅಭ್ಯರ್ಥಿ ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್ ಅವರ ಹೆಸರನ್ನು ಪ್ರಕಟಿಸಲು ವಿಳಂಬ ಮಾಡಿದ್ದೇಕೆ?

ಮೊದಲೇ ಹೇಳಿದಂತೆ, ಎಡಪಕ್ಷಗಳು ಮೊದಲಿಂದಲೂ ಸರ್ವಸಮ್ಮತಿಗಾಗಿ ಪ್ರಯತ್ನಪಡುತ್ತಾ ಇದ್ದವು. ಆ ಪ್ರಯತ್ನವನ್ನು ಬಿಜೆಪಿ ನೇತೃತ್ವದ ಎನ್‌ಡಿಎ ವಿಫಲಗೊಳಿಸಿದಾಗ ವಿರೋಧ ಪಕ್ಷಗಳ ಪರವಾಗಿ ಜಂಟಿ ಅಭ್ಯರ್ಥಿಯೊಬ್ಬರನ್ನು ಕಣಕ್ಕೆ ಇಳಿಸಲು



ಯಾರ ಅಭ್ಯರ್ಥಿ?

ಆರ್‌ಎಸ್‌ಎಸ್‌ನ ಕೈದಾಳ ಡಾ. ಕಲಾಂ

ಎಡಪಕ್ಷಗಳು ನಿರ್ಧರಿಸಿದವು. ಜೂನ್ 9 ರ ಸಂಜೆ ಕಾಂಗ್ರೆಸ್, ಸಮಾಜವಾದಿ ಪಕ್ಷ, ಜನತಾದಳ(ಜಾತ್ಯಾತೀತ) ಮತ್ತು ಎಡಪಕ್ಷಗಳ ಪ್ರತಿನಿಧಿಗಳು ಜಂಟಿಯಾಗಿ ರಾಷ್ಟ್ರಪತಿ ಕೆ.ಆರ್.ನಾರಾಯಣನ್ ಅವರನ್ನು ಭೇಟಿಯಾಗಿ ಚುನಾವಣೆಯಲ್ಲಿ ಸ್ಪರ್ಧಿಸಲು ಒಪ್ಪಿಗೆ ನೀಡಬೇಕೆಂದು ಮನವಿ ಮಾಡಿಕೊಂಡಿದ್ದರಲ್ಲದೆ ಬಿಜೆಪಿ/ ಎನ್‌ಡಿಎ ಅಭ್ಯರ್ಥಿ ಪಿ.ಸಿ.ಅಲೆಕ್ಸಾಂಡರ್ ವಿರುದ್ಧ ಸ್ಪರ್ಧಿಸುವ ತಮ್ಮ ಅಭಿಪ್ರಾಯವನ್ನು ಬಹಿರಂಗವಾಗಿ ಘೋಷಿಸಿದ್ದರು. ಜೂನ್ 10 ರಂದು ಎನ್‌ಡಿಎ ತನ್ನ ನಿರ್ಧಾರವನ್ನು ಬದಲಾಯಿಸಿ ಅಬ್ದುಲ್ ಕಲಾಂ ಅವರ ಹೆಸರನ್ನು ಪ್ರಕಟಿಸಿತು. ಸಮಾಜವಾದಿ ಪಕ್ಷವು ಬಿಜೆಪಿ/ ಎನ್‌ಡಿಎ ಅಭ್ಯರ್ಥಿಗೆ ತನ್ನ ಬೆಂಬಲವನ್ನು ಘೋಷಿಸುವುದರೊಂದಿಗೆ ಪೀಪಲ್ಸ್ ಫ್ರಂಟ್ ಒಡೆದು ಹೋಯಿತು. ಜೂನ್ 11 ರಂದು, ಕಾಂಗ್ರೆಸ್ ಪಕ್ಷವು ಕಲಾಂ ಅವರಿಗೆ ಬೆಂಬಲವನ್ನು ಘೋಷಿಸಿತು.

ಮರುದಿನವೇ, ಎಡಪಕ್ಷಗಳು ರಾಷ್ಟ್ರಪತಿ ಚುನಾವಣೆಯಲ್ಲಿ ಸ್ಪರ್ಧಿಸುವ ತಮ್ಮ ನಿರ್ಧಾರವನ್ನು ಪ್ರಕಟಿಸಿದವು. ಜನತಾದಳ(ಜಾತ್ಯಾತೀತ)ದಂತಹ ಮಿತ್ರಪಕ್ಷಗಳು ಮತ್ತು ವಿ.ಪಿ.ಸಿಂಗ್ ಅವರ ಸಲಹೆ ಪಡೆದು ರಾಷ್ಟ್ರಪತಿ ಹುದ್ದೆಯ ಚುನಾವಣೆಗೆ ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್ ತಮ್ಮ ಅಭ್ಯರ್ಥಿ ಎಂದು ಪ್ರಕಟಿಸಲಾಯಿತು. ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್ ಅವರು 3 ದಿನಗಳ ನಂತರ ಅಂದರೆ ಜೂನ್ 17 ರಂದು ಎಡಪಕ್ಷಗಳ ಮತ್ತು ಅವುಗಳ ಮಿತ್ರ ಪಕ್ಷಗಳ ಅಭ್ಯರ್ಥಿಯಾಗಿ ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಿದರು.

ಈ ಘಟನಾವಳಿಗಳನ್ನು ಗಮನಿಸಿದರೆ, ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್ ಅವರು ಸ್ಪರ್ಧಿಸುವ ವಿಷಯವನ್ನು ಪ್ರಕಟಿಸುವಲ್ಲಿ ಯಾವುದೇ ವಿಳಂಬ ಆಗಿಲ್ಲ ಎಂದು ಯಾರಿಗಾದರೂ ಮನದಟ್ಟಾಗುವುದು.

7. ಎಡಪಕ್ಷಗಳು ಯಾಕೆ ದ್ವಂದ್ವ ಮಾನದಂಡಗಳನ್ನು ಬಳಸುತ್ತವೆ? ಲೋಕಸಭಾ ಅಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ಎಡಪಕ್ಷಗಳು ಬಿಜೆಪಿ/ ಎನ್‌ಡಿಎ ಅಭ್ಯರ್ಥಿಯನ್ನು ವಿರೋಧಿಸಲಿಲ್ಲ. ರಾಷ್ಟ್ರಪತಿ ಚುನಾವಣೆಯಲ್ಲಿ ಏಕೆ ವಿರೋಧಿಸುತ್ತವೆ?

ಲೋಕಸಭಾಧ್ಯಕ್ಷ ಸ್ಥಾನಕ್ಕೆ ಬಿಜೆಪಿ/ಎನ್‌ಡಿಎ ಬೆಂಬಲಿತ ಶಿವಸೇನಾ ಅಭ್ಯರ್ಥಿಯನ್ನು ಎಡಪಕ್ಷಗಳು ಬಹಿರಂಗವಾಗಿಯೇ ವಿರೋಧಿಸಿದ್ದವು. ಸಿಪಿಐ(ಎಂ) ಪೊಲಿಟ್‌ಬ್ಯೂರೋ ಮೇ 9, 2002 ರಂದು ಒಂದು ಪತ್ರಿಕಾಹೇಳಿಕೆಯನ್ನು ನೀಡಿ ಪಕ್ಷದ ತೀವ್ರ ವಿರೋಧವನ್ನು ದಾಖಲಿಸಿತ್ತು. ಲೋಕಸಭೆಯಲ್ಲಿ ಸಿಪಿಐ(ಎಂ) ನಾಯಕರಾದ ಸೋಮನಾಥ ಚಟರ್ಜಿಯವರು ಮೇಲ್ಮನೆಯಲ್ಲಿ ಮಾಡಿದ ಭಾಷಣದಲ್ಲಿ ಲೋಕಸಭಾಧ್ಯಕ್ಷ ಆದವರು 'ರಿಮೋಟ್ ಕಂಟ್ರೋಲ್' ಅಡಿಯಲ್ಲಿ ಕೆಲಸ ಮಾಡದಿರಲಿ ಎಂದು ಆಶಿಸಿದ್ದರು. (ಮನೋಹರ್ ಜೋಷಿ ಅವರು ಮಹಾರಾಷ್ಟ್ರದ ಮುಖ್ಯಮಂತ್ರಿ ಯಾಗಿದ್ದಾಗ, ಇವರ ರಿಮೋಟ್ ಕಂಟ್ರೋಲ್ ತನ್ನ ಕೈಯಲ್ಲಿದೆ ಎಂದು ಬಾಳಠಾಕ್ರೆ ಬಹಿರಂಗವಾಗಿ ಹೇಳಿದ್ದರು).

ಲೋಕಸಭಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಎಡಪಕ್ಷಗಳು ಎಷ್ಟು ಬಯಸಿದರೂ, ಲೋಕಸಭಾಧ್ಯಕ್ಷ ಸ್ಥಾನಕ್ಕೆ ಆಡಳಿತಾರೂಢ ಪಕ್ಷ ಅಭ್ಯರ್ಥಿಯನ್ನೂ, ಉಪಾಸಭಾಧ್ಯಕ್ಷರ ಸ್ಥಾನಕ್ಕೆ ವಿರೋಧ ಪಕ್ಷಗಳ ಅಭ್ಯರ್ಥಿಯನ್ನು ಆಯ್ಕೆ ಮಾಡುವ ಪರಂಪರಾಗತ ಸಂಪ್ರದಾಯ ಅಡ್ಡಿಯಾಗಿ ಬಂತು. ಉಪಸಭಾಧ್ಯಕ್ಷರು ಕಾಂಗ್ರೆಸ್ ಪಕ್ಷದವರಾಗಿದ್ದುದರಿಂದ ಕಾಂಗ್ರೆಸ್ ಈ ಸಂಪ್ರದಾಯದ ವಿರುದ್ಧ ಸ್ಪರ್ಧೆ ಮಾಡಲು ನಿರಾಕರಿಸಿತು. ಇತರ ವಿರೋಧ ಪಕ್ಷಗಳು ಸಹ ಇದೇ ಸಂಪ್ರದಾಯಕ್ಕೆ ಬದ್ಧರಾದುದರಿಂದ ಒಬ್ಬ ಅಭ್ಯರ್ಥಿಯನ್ನು ಕಣಕ್ಕೆ ಇಳಿಸುವುದು ಸಾಧ್ಯವಾಗಲಿಲ್ಲ. ಎಡಪಕ್ಷಗಳು ಬಿಜೆಪಿ/ಎನ್‌ಡಿಎ ಅಭ್ಯರ್ಥಿಯನ್ನು ಬೆಂಬಲಿಸಿದವು ಎಂದರೆ ತಪ್ಪಾಗುತ್ತದೆ. ಆದ್ದರಿಂದ ಲೋಕಸಭಾಧ್ಯಕ್ಷರ ಆಯ್ಕೆ ಸರ್ವಾನುಮತದ ಆಯ್ಕೆ ಆಗದೆ, ಪ್ರತಿಸ್ಪರ್ಧಿ ಇಲ್ಲದ ಆಯ್ಕೆಯಾಯಿತು ಎನ್ನಬಹುದು.

8. 1962 ರಲ್ಲಿ ಚೀನಾ-ಭಾರತ ಯುದ್ಧ ನಡೆದಾಗ ಆದಂತೆ ಎಡಪಕ್ಷಗಳು ಮುಖ್ಯ ಪ್ರವಾಹದಿಂದ ದೂರಸರಿಯುತ್ತಿವೆಯೇ?

1962 ರಲ್ಲಿ, ಅನಂತರ ಸಿಪಿಐ(ಎಂ) ಎಂದು ಬದಲಾವಣೆ ಹೊಂದಿದ ಎಡಪಕ್ಷವು ಚೀನಾ-ಭಾರತ ಯುದ್ಧದ ಬಗ್ಗೆ ಒಂದು ಸರಳವಾದ ನಿಲುಮೆಯನ್ನು ಅಂಗೀಕರಿಸಿತ್ತು. ಚೀನಾದೊಂದಿಗೆ ಇರುವ ವಿವಾದವನ್ನು ಮಾತುಕತೆಗಳ ಮೂಲಕ ಇತ್ಯರ್ಥಪಡಿಸಬಹುದಲ್ಲದೆ ಸಶಸ್ತ್ರ ಘರ್ಷಣೆಯ ಮೂಲಕವಲ್ಲ ಎಂಬುದೇ ಆ ನಿಲುಮೆಯಾಗಿತ್ತು. ಈಗ 40 ವರ್ಷಗಳ ನಂತರ ವಾಜಪೇಯಿ ಸರ್ಕಾರ ಏನು ಮಾಡುತ್ತಿದೆ? ಅಂದು ಸಿಪಿಐ(ಎಂ) ಪ್ರತಿಪಾದಿಸುತ್ತಿದ್ದ ಧೋರಣೆಯನ್ನೇ ಈ ಸರಕಾರ ಅನುಸರಿಸುತ್ತಿದೆ. ಇದನ್ನು ಒಪಿಕೊಳ್ಳುವಷ್ಟು ಪ್ರಾಮಾಣಿಕತನ ಅವರಲ್ಲಿಲ್ಲ. ಸಿಪಿಐ(ಎಂ) ಸೂಚಿಸಿದ ದಾರಿಯಲ್ಲಿ ಇವರು ಈಗ ಹೊರಟಿರುವುದು ರಾಷ್ಟ್ರೀಯ ಮುಖ್ಯ ಪ್ರವಾಹದಿಂದ ದೂರ ಸರಿಯಲೆಂದೆನ್ನಬಹುದೆ?

ಇಂದಿನ ಆರ್‌ಎಸ್‌ಎಸ್/ ಬಿಜೆಪಿಗಳು ರಾಜಕೀಯ ಕಪಟತನದ ಹೊಸ ಅವತಾರಗಳಷ್ಟೇ.

9. 1942 ರಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮವನ್ನು ವಿರೋಧಿಸಿ ಮೂಲೆಗುಂಪಾದಂತೆ ಈಗ ಮತ್ತೆ ಎಡಪಕ್ಷಗಳು ಮೂಲೆಗುಂಪಾಗಲು ಹೊರಟಿವೆಯೇ?

ಇದರಷ್ಟು ಸತ್ಯಕ್ಕೆ ದೂರವಾದ ಮಾತು ಬೇರೊಂದಿಲ್ಲ. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಎಡಪಕ್ಷಗಳ ಪಾತ್ರವನ್ನು ಶ್ರೀಮಂತವಾಗಿ ದಾಖಲಿಸಿಕೊಂಡಿರುವ ಇತಿಹಾಸದ ವಿವರಗಳಿಗೆ ಹೋಗಬೇಕಾಗಿಲ್ಲ. ದೇಶವು 'ಭಾರತ ಬಿಟ್ಟು ತೊಲಗಿ' ಚಳುವಳಿಯ 50ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿದ್ದಾಗ, ಅಂದಿನ ರಾಷ್ಟ್ರಪತಿ ಡಾ. ಶಂಕರ ದಯಾಳ ಶರ್ಮಾ ಅವರು ಅಂದು ಮಧ್ಯರಾತ್ರಿಯ ಸಂಸತ್ ಅಧಿವೇಶನವನ್ನು ಉದ್ದೇಶಿಸಿ ಮಾತನಾಡುತ್ತಾ "ಕಾನ್ಪುರ, ಜಮ್‌ಶೆಡ್‌ಪುರ ಮತ್ತು ಅಹಮ್ಮದ್ ಬಾದ್ ಗಿರಣಿಗಳಲ್ಲಿ ಜರುಗಿದ ದೊಡ್ಡ ಪ್ರಮಾಣದ ಮುಷ್ಕರಗಳ ನಂತರ, ಸೆಪ್ಟೆಂಬರ್ 5, 1942 ರಂದು ದೆಹಲಿಯಿಂದ ಲಂಡನ್ನಿನ ಬ್ರಿಟಿಷ್ ಸರ್ಕಾರಕ್ಕೆ ಕಳುಹಿಸಲಾದ ಮಾಹಿತಿಯಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷದ ಬಗ್ಗೆ ಹೀಗೆ ವರದಿ ಮಾಡಲಾಗಿದೆ - ಪಕ್ಷದ ಬಹಳಷ್ಟು ಸದಸ್ಯರ ನಡವಳಿಕೆಯಿಂದ ಸ್ಪಷ್ಟವಾಗುವ ವಿಷಯವೆಂದರೆ, ಮೊದಲಿನಿಂದಲೂ ಸ್ಪಷ್ಟ ಇರುವಂತೆ, ಅವರೆಲ್ಲರೂ ಬ್ರಿಟಿಷ್ ವಿರೋಧಿ ಕ್ರಾಂತಿಕಾರಿಗಳಾಗಿರುತ್ತಾರೆ".

ಇದಕ್ಕೆ ತದ್ವಿರುದ್ಧವಾಗಿ, ಸ್ವಾತಂತ್ರ್ಯ ಹೋರಾಟದಲ್ಲಿ ಆರ್‌ಎಸ್‌ಎಸ್‌ನ ಪಾತ್ರ ಎಲ್ಲರಿಗೂ ತಿಳಿದಿರುವ ಗುಟ್ಟು. 1942 ರ ಕ್ವಿಟ್ ಇಂಡಿಯಾ ಚಳುವಳಿ ಸಂದರ್ಭದಲ್ಲಿ ಮುಂಬೈ ಗೃಹ ಇಲಾಖೆಯು 'ಸಂಘವು ಪ್ರಜ್ಞಾಪೂರ್ವಕವಾಗಿ ಕಾನೂನಿನ ಚೌಕಟ್ಟಿನ ಒಳಗೆ ಕೆಲಸ ಮಾಡುತ್ತಿದೆ ಹಾಗೂ ವಿಶೇಷವಾಗಿ 1942 ರ ಗಲಭೆಯ ಸಂದರ್ಭದಲ್ಲಿ ಭಾಗವಹಿಸಲಿಲ್ಲ' ಎಂದು ಹೇಳಿತ್ತು. ಆರ್‌ಎಸ್‌ಎಸ್ ನ ಪ್ರಮುಖರಲ್ಲೊಬ್ಬರಾಗಿದ್ದ ನಾನಾಜಿ ದೇಶ್‌ಮುಖ್ ಕೂಡಾ ಒಮ್ಮೆ "ಸ್ವಾತಂತ್ರ್ಯ ಹೋರಾಟದಲ್ಲಿ ಆರ್‌ಎಸ್‌ಎಸ್ ಒಂದು ಸಂಘಟನೆಯಾಗಿ ಏಕೆ ಭಾಗವಹಿಸಲಿಲ್ಲ' ಎಂಬ ಪ್ರಶ್ನೆಯನ್ನೆತ್ತಿದ್ದರು. ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ, ಅದಕ್ಕೆ ಎದುರಾಗಿ ನಿಂತಿದ್ದ ಸಂಸ್ಥಾನಗಳ ರಾಜರೊಂದಿಗೆ ಆರ್‌ಎಸ್‌ಎಸ್ ಸೇರಿಕೊಂಡಿತ್ತು. ಅವರ ಆಪ್ತಮಿತ್ರ ಕಾಶ್ಮೀರದ ರಾಜ ಹರಿಸಿಂಗ್ ಭಾರತದೊಂದಿಗೆ ಸೇರಲು ಒಪ್ಪಿರಲಿಲ್ಲ.

ಮಹಾತ್ಮಗಾಂಧಿಯವರನ್ನು ಕೊಂದವರು, ಎಡಪಕ್ಷಗಳು ಹಾಗೂ ಸ್ವಾತಂತ್ರ್ಯ ಸೇನಾನಿ ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್ ಅವರ ಮೇಲೆ ನೀಚ ಆರೋಪ ಹೊರಿಸುತ್ತಿರುವುದು ಭಾರತದ ದುರಂತವೇ ಸರಿ.

ಇಂಡಿಯನ್ ನ್ಯಾಶನಲ್ ಆರ್ಮಿಯ ನಾಯಕ, ನಾಯಕಿಯರಾಗಿದ್ದವರಾಗಲೀ, ಭಗತ್‌ಸಿಂಗರವರ ಸಹಯೋಗಿಗಳಾಗಿದ್ದ ಶಿವವರ್ಮಾ ಮತ್ತು ಕಿಶೋರಿಲಾಲ್‌ರವರಾಗಿರಲಿ ಎಲ್ಲರೂ ಸ್ವತಂತ್ರ ಭಾರತದಲ್ಲಿ ಸಿಪಿಐ(ಎಂ) ಮುಖಂಡರಾಗಿ ಜನತೆಯ ವಿಮೋಚನೆಗಾಗಿ ದುಡಿದರು.

ಈ ಸಂದರ್ಭದಲ್ಲಿ ಸಂಘ ಪರಿವಾರದ ಸ್ವಘೋಷಿತ ಹೀರೋ ಸಾವರ್ಕರ್ ಅವರ ಚರಿತ್ರೆಯನ್ನು ತಿಳಿದುಕೊಳ್ಳಬೇಕು. 1913, ನವೆಂಬರ್ 14 ರಂದು ಅಂಡಮಾನ್ ಜೈಲಿನಿಂದ ಬರೆದ ತಮ್ಮ ಪತ್ರದಲ್ಲಿ ತನ್ನನ್ನು ಬಿಡುಗಡೆ ಮಾಡಬೇಕೆಂದು ಬೇಡಿಕೊಂಡಿದ್ದರು. ಇಂದು ಸಾರ್ವಜನಿಕ ದಾಖಲೆಯಾಗಿರುವ ಈ ಪತ್ರದಲ್ಲಿ, ಸಾವರ್ಕರ್ ಅವರು ವಿನಯಪೂರ್ವಕವಾಗಿ ಕೇಳಿಕೊಂಡಿದ್ದೇನೆಂದರೆ "ನಾನು ಯಾವುದೇ ವಿಧದಲ್ಲಾದರೂ ಸರಕಾರದ ಸೇವೆಗೆ ಸಿದ್ಧನಾಗಿದ್ದೇನೆ. ಪ್ರಜ್ಞಾಪೂರ್ವಕವಾದ ನನ್ನ ಈ ಬದಲಾವಣೆ ಮುಂದೆಯೂ ಮುಂದುವರಿಯುತ್ತದೆ".

ಇದಕ್ಕೆ ವ್ಯತಿರಿಕ್ತವಾಗಿ, ಅಮಾನುಷವಾಗಿ ಸೆಲ್ಯೂಲರ್ ಜೈಲಿನಲ್ಲಿ ಪೂರ್ಣ ಅವಧಿಯನ್ನು ಮುಗಿಸಿದ ಕ್ರಾಂತಿಕಾರಿಗಳು, ಕಮ್ಯುನಿಸ್ಟ್ ಚಳುವಳಿಯ ಗೌರವಾನ್ವಿತ ಮುಖಂಡರಾದರು. ಅವರುಗಳಲ್ಲಿ ಹರೇಕೃಷ್ಣ ಕೊನಾರ್, ಸಿಪಿಐ(ಎಂ)ನ ಉನ್ನತ ಮುಖಂಡರಾಗಿದ್ದು, ಸತೀಶ್ ಪಕ್ರಾಶಿ, ಗಣೇಶ್‌ಘೋಷ್, ಸುಭೋಧ ರೈ, ಲೋಕನಾಥ ಬಾಲಿ, ಅನಂತಸಿಂಗ್, ಸುಬೋದ್ ಚೌಧರಿ, ಫಣಿ ನಂದಿ, ಹರಿಪಾದ ಭಟ್ಟಾಚಾರ್ಯ, ರಣಧೀರ್ ದಾಸ್ ಗುಪ್ತಾ, ಆನಂದಗುಪ್ತ ಮತ್ತು ಇನ್ನು ಹಲವರು ಸೇರಿದ್ದಾರೆ.


ಡಾ. ಕಲಾಂ ಯಾರಿಗೆ ಸಲಾಂ?

ಸ್ವಾತಂತ್ರ್ಯ ಚಳುವಳಿಗೆ ವಂಚನೆ ಮಾಡಿದವರು ಹಾಗೂ ಬ್ರಿಟಿಷರೊಂದಿಗೆ ಶಾಮೀಲಾದವರು ಯಾರೆಂದು ಎಲ್ಲರೂ ನೋಡಬಹುದಾಗಿದೆ.

10. ಭಾರತದ ವಿಭಜನೆಗೆ ಕಾರಣವಾದ ಎರಡು ರಾಷ್ಟ್ರ ಸಿದ್ಧಾಂತವನ್ನು ಬೆಂಬಲಿಸಿದ ರೀತಿಯಲ್ಲಿಯೇ ಎಡ ಪಂಥೀಯರು ವರ್ತಿಸುತ್ತಿದ್ದಾರೆಯೇ?

ಭಾರತವನ್ನು ಕೋಮು ಆಧಾರದಲ್ಲಿ ವಿಭಜಿಸುವುದು ಒಂದು ವಿನಾಶಕಾರಿ ಘಟನೆ ಎಂದು ಎಡಪಂಥೀಯರು ಸದಾ ಹೇಳುತ್ತಿದ್ದರು. ಅದರ ಪರಿಣಾಮ ಇಂದು ಕೂಡಾ ಅನುಭವಕ್ಕೆ ಬರುತ್ತಿದೆ. ಈ ವಿಭಜನೆ ಬ್ರಿಟಿಶ್ ಸಾಮ್ರಾಜ್ಯಶಾಹಿ ಅನುಸರಿಸುತ್ತಾ ಬಂದ ಧೋರಣೆಗಳು ಹಾಗೂ ಭಾರತೀಯ ಜನತೆಗೆ ಅಧಿಕಾರ ಹಸ್ತಾಂತರಗೊಂಡ ನಿಜವಾದ ಸನ್ನಿವೇಶಗಳ ಪರಿಣಾಮ.

ಬ್ರಿಟಿಶ್ ಪ್ರಯತ್ನಗಳಲ್ಲಿ ಸಮಗ್ರವಾಗಿ ನೆರವಾದವರು ಯಾರು? ಎರಡು ರಾಷ್ಟ್ರ ಸಿದ್ಧಾಂತವನ್ನು ಮೊದಲು ವ್ಯಕ್ತಪಡಿಸಿದ್ದವರು ಬೇರಾರೂ ಅಲ್ಲ, ಖಾವಿ ಪಡೆಗಳು ತಮ್ಮ ಹೀರೋ ಆಥವಾ 'ವೀರ' ಎಂದು ಅಂಗೀಕರಿಸಿದ ವಿ.ಡಿ. ಸಾವರ್ಕರ್. ಮುಸ್ಲಿಂ ಲೀಗ್ ಮತ್ತು ಜಿನ್ನಾ ಈ ಬೇಡಿಕೆಯನ್ನು ಎತ್ತುವ ಮೂರು ವರ್ಷಗಳ ಮೊದಲೇ ಸಾರ್ವರ್ಕರ್ ಹಿಂದೂ ಮಹಾಸಭಾದ ತನ್ನ ಅಧ್ಯಕ್ಷೀಯ ಭಾಷಣದಲ್ಲಿ ಹೀಗಂದಿದ್ದರು - "ನಾವು ಹಿಂದೂಗಳೇ ಒಂದು ರಾಷ್ಟ್ರ.... ನಾವು ಹಿಂದೂಗಳೇ ಸ್ವತಃ ಒಂದು ಶಾಶ್ವತವಾಗಿ ಉಳಿಯುವ ರಾಷ್ಟ್ರವಾಗಿ ಗುರುತಿಸಲ್ಪಟ್ಟಿದ್ದೇವೆ (ಇಂಡಿಯನ್ ಅನ್ಯುವಲ್ ರಿಜಿಸ್ಟರ್, 1939 ಸಂಪುಟ 2) ಮತ್ತೆ ಅವರು ಇದನ್ನು ಹೀಗೆ ಪುನರುಚ್ಚರಿಸಿದರು - "ಜಿನ್ನಾರ ಎರಡು ರಾಷ್ಟ್ರ ಸಿದ್ಧಾಂತದ ಬಗ್ಗೆ ನನಗೇನೂ ಜಗಳವಿಲ್ಲ. ನಾವು ಹಿಂದೂಗಳು ನಾವೇ ಸ್ವತಃ ಒಂದು ರಾಷ್ಟ್ರವಾಗಿದ್ದೇವೆ ಮತ್ತು ಹಿಂದೂಗಳು ಹಾಗೂ ಮುಸ್ಲಿಮರು ಎರಡು ರಾಷ್ಟ್ರಗಳು ಎಂಬುದು ಒಂದು ಚಾರಿತ್ರಿಕ ಸಂಗತಿ" (ಇಂಡಿಯನ್ ಅನ್ಯುವಲ್

ಪುಟ 8



ಸ್ಪರ್ಧೆಯ ಮಹತ್ವ ಮುಂದೆ ದೇಶವೇ ಅರಿಯಲಿದೆ

ಜೀವನವೆಲ್ಲಾ ಉರಿದ ಈ ಜ್ವಾಲೆ ಕಾರ್ಮಿಕ ಚಳುವಳಿಯ ಚೈತನ್ಯದ ಎರಕ



ಇಂದು ಕರ್ನಾಟಕದ ಕಾರ್ಮಿಕ ಚಳುವಳಿಗೆ ಎರಗಿದೆಯೊಂದು ಅಘಾತ. ಕಡಲನ್ನು ಕಾಣದ ಬೆಂಗಳೂರಿನಲ್ಲಿ ನೆರೆಯುತ್ತಲಿದೆ ಕಾರ್ಮಿಕ ಸಂದಣಿಯ ಕಡಲು. ಹತ್ತಾರು ಸಾವಿರ ಕಾರ್ಮಿಕರ ಎದೆಗಳಲ್ಲಿ ದುಗುಡ, ದುಮ್ಮಾನಗಳು ಹೆಪ್ಪುಗಟ್ಟಿವೆ. ಕರ್ನಾಟಕದ ಲಕ್ಷಾಂತರ ಕಾರ್ಮಿಕರಿಗೆ ಹೋರಾಟದ ಸ್ಫೂರ್ತಿ ಸಂಕೇತವಾದ ಕಾಂ. ಸೂರಿ ಇನ್ನಿಲ್ಲ. ಕಾರ್ಮಿಕ ಚಳುವಳಿಯ ಸಮರಧೀರತೆಯ ಮೂರ್ತಿ ರೂಪದ ಕಾಂ. ಸೂರಿ ಇನ್ನಿಲ್ಲ. ಕರ್ನಾಟಕದ ಕಾರ್ಮಿಕ ಚಳುವಳಿಯ ಇತಿಹಾಸದಲ್ಲಿ ರಕ್ತಾಕ್ಷರಗಳಲ್ಲಿ ದಾಖಲಾದ ಹಲವು ಹೋರಾಟಗಳ ಕಲಿ, ಕೆಚ್ಚೆದೆಯ ಭಂಟ ಕಾಂ. ಸೂರಿ ಇನ್ನಿಲ್ಲ. ವಿದ್ಯಾರ್ಥಿ ಚಳುವಳಿಯ ನಾಯಕನಾಗಿ ಬೆಳೆದು ಸ್ವಾತಂತ್ರ್ಯ ಚಳುವಳಿಯ ಧೀರ ನಾಯಕರಾಗಿ ಬೆಳಗಿದ ಕಾಂ. ಸೂರಿಯವರ ಸಿಂಹ ಗರ್ಜನೆ ಇನ್ನು ಕರ್ನಾಟಕದಲ್ಲಿ ಮೊಳಗದು ಎಂಬ ಸಂಗತಿಯೇ ಬರಸಿಡಿಲಾಗಿ ಬಂದೆರಗಿದೆ ಇಂದು. ಕಾರ್ಮಿಕ ಚಳುವಳಿಯ ನಾಯಕರಾಗಿ ಇಡೀ ಜೀವನ ಸವೆಸಿದರೂ ಲಕ್ಷಾಂತರ ರೈತರ ನೆನಪಿನ ಪುಟಗಳಲ್ಲಿ ಅಚ್ಚೊತ್ತಿರುವ ಕಾಂ. ಸೂರಿಯವರನ್ನು ನರಗುಂದ, ನವಲಗುಂದ ಹೋರಾಟದಲ್ಲಿ ಬೆಂಗಳೂರಿಗೆ ಧಾವಿಸಿದ ಲಕ್ಷಾಂತರ ಮಂದಿ ರೈತರಿಗೆ 'ಊಟವೆಲ್ಲಿ' ಎಂಬ ಪ್ರಶ್ನೆ ಬೃಹದಾಕಾರವಾಗಿ ದೇವರಾಜ ಅರಸುರಂತಹ ವರನ್ನೂ ಕಾಡಿದಾಗ ಬೆಂಗಳೂರಿನ ಕಾರ್ಮಿಕರಿಗೆ ರೈತ ಸಮುದಾಯಕ್ಕೆ ಊಟ ಹಾಕುವ ಶಕ್ತಿ ಇದೆ ಎಂದು ಸವಾಲಿಗೆ ಎದೆಯೊಡ್ಡಿದ ಕಾಂ. ಸೂರಿಯವರ ಆ ಹುಮ್ಮಸ್ಸು ಈಗ ನೆನಪಾಗಲಿದೆ.

1948 ರಿಂದ 1951 ರ ಸಮಯದಲ್ಲಿ ಕಮ್ಯುನಿಸ್ಟ್ ಪಕ್ಷದ ಮೇಲೆ 'ಬ್ಯಾನ್' ಹೇರಿದ್ದಾಗ ರೈಲ್ವೆ ಹಳಿಗಳ ಮೇಲೆಯೇ ನೂರಾರು ಕಿ.ಮಿ. ನಡೆದು ಉಪವಾಸ, ವನವಾಸಗಳನ್ನು ಅನುಭವಿಸುತ್ತಾ ಸ್ಮಶಾನದಲ್ಲಿ ಬಿಸಾಡಿ ಹೋದ ಅಕ್ಕಿಯನ್ನೇ ಅನ್ನ ಮಾಡಿ ಕಲ್ಲು ಬಂಡೆಯನ್ನೇ ತೊಳೆದು ತಟ್ಟೆ ಮಾಡಿ ಬಡಿಸಿಕೊಂಡು ತಿಂದು ಈ ಚೇತನ ಕಾರ್ಮಿಕ ಚಳುವಳಿಗಿಳಿಯಿತು. ಚಳುವಳಿಯ ಜೀವನದ ಆರಂಭ ಕಾಲದಿಂದ ಸರಿಸುಮಾರು 80ರ ದಶಕದವರೆಗೆ ಅತ್ಯಂತ ಕಷ್ಟ ಕಾರ್ಪಣ್ಯಗಳಲ್ಲಿ ಜೀವನವನ್ನು ತೇದ ಕಾಂ.ಸೂರಿ ಯವರ ಕುಟುಂಬ ಅನುಭವಿಸಿದ ಸಂಕಟಗಳು ಕೂಡ ಸ್ಮರಣಾರ್ಹ. ಅವರ ಪತ್ನಿ ಖಾಸಗಿ ಪ್ರಾಥಮಿಕ ಶಾಲೆಯೊಂದರಲ್ಲಿ ಅಲ್ಪಾದಾಯದ ಶಿಕ್ಷಕಿ ಹುದ್ದೆಯಲ್ಲಿ ದುಡಿದು ಕುಟುಂಬವನ್ನು ಸಲಹಿದ ಕಡುಯಾತನೆಯ ದಿನಗಳವು.

ಹೀಗೆ ದೀಪವೊಂದು ತಾನು ಬೆಂಕಿಯಲ್ಲಿ ಬೇಯುತ್ತಾ ಲೋಕಕ್ಕೆಲ್ಲಾ ಬೆಳಕನ್ನೀಯುವಂತೆ ಕಾಂ. ಸೂರಿ ಕಾರ್ಮಿಕರ ಮನಸ್ಸನಲ್ಲಿ ಬಂಡವಾಳ ಶಾಹಿಗಳ ಶೋಷಣೆಯ ವಿರುದ್ಧ ಉರಿಯುತ್ತಿದ್ದ ಕಿಚ್ಚಿಗೆ ಹೋರಾಟದ ಕಿಡಿ ಹತ್ತಿಸಿದವರು. ಬೆಂಗಳೂರು ನಗರದ ಅಷ್ಟೇ ಏಕೆ ಕರ್ನಾಟಕದ ಹಲವು ದಿಕ್ಕುಗಳಲ್ಲಿ ಬೆಂದು ಹೋಗುತ್ತಿದ್ದ ಕಾರ್ಮಿಕರ ಬಾಳಿಗೆ ನೀರೆರೆದವರು, ಅವರ ಜೀವನಮಟ್ಟ ಏರಿಸಿ ತೃಪ್ತಿಕರ ಬದುಕನ್ನು ಬಾಳಲು ನೆರವಾದವರು. ಇಂದು ಬೆಂಗಳೂರಿನಲ್ಲಿ ಹಲವು ಸಾವಿರ ಕಾರ್ಮಿಕರು ಅದರಲ್ಲಿಯೂ ಖಾಸಗಿ ಕಾರ್ಖಾನೆಗಳು ತಮ್ಮದೇ ಮನೆಗಳಲ್ಲಿ ವಾಸಿಸುತ್ತಾ ಎರಡು ಚಕ್ರದ ವಾಹನಗಳಲ್ಲಿ ಸಂಚರಿಸುತ್ತಾ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವ ಯತ್ನ ನಡೆಸುತ್ತಿರುವುದರಲ್ಲಿ ಸೂರಿಯವರ, ಅವರು ಭಾಗವಾಗಿದ್ದ ಸಿಐಟಿಯು ಕೊಡುಗೆ ಇದೆ.

ಹಲವು ಕಾರ್ಮಿಕ ಹೋರಾಟಗಳ ಕಲಿಯಾಗಿ ಕಾರ್ಮಿಕರ ನಾಡಿಮಿಡಿತವನ್ನು ಕ್ಷಣಮಾತ್ರದಲ್ಲಿ ಅರಿತು ಅವರನ್ನು ಹೋರಾಟದ ಕಣಕ್ಕೆ ಸೆಳೆದ ಸೂರಿ ಬೆಂಗಳೂರಿನ ಬಂಡವಾಳಶಾಹಿಗಳು ಹಳೆಯ ಶೆಟ್ಟರ ಲೆಕ್ಕಾಚಾರವನ್ನು ಕೈಬಿಟ್ಟು ಉತ್ತಮ, ಆಧುನಿಕ ನಿರ್ವಹಣೆಯನ್ನು ಕಲಿಯಲು ಅಪರೋಕ್ಷವಾಗಿ ಕಾರಣರಾದವರು.

ಕಾರ್ಮಿಕ ಚಳುವಳಿಯನ್ನು ದಿಕ್ಕು ಗೆಡಿಸಲು ಕುತಂತ್ರ ನಡೆಸುತ್ತಿದ್ದ ಆಳುವವರ್ಗಗಳ ಮತ್ತು ಅವರ ಏಜೆಂಟರುಗಳಿಗೆ ಸಿಂಹಸ್ವಪ್ನವಾಗಿದ್ದರು ಕಾಂ.ಸೂರಿ. ಮೈಕೊ ಹೋರಾಟದ ಸಮಯದಲ್ಲಿ ಕರ್ನಾಟಕದ ಅತ್ಯಂತ ದುಷ್ಟ ಸರ್ಕಾರವಾಗಿದ್ದ ಗುಂಡೂರಾವ್ ಮತ್ತು ಅವರ ನಿಕಟ ಮಿತ್ರ ಸಂಸತ್ ಸದಸ್ಯ ಎಫ್.ಎಂ.ಖಾನ್‌ರವರ ಜೋಡಿಯನ್ನು ಎದುರಿಸಿದ ಎದೆಗಾರಿಕೆ ಹಾಗೂ ಕಾರ್ಮಿಕ ಹೋರಾಟದ ತಂತ್ರಗಳು ಕರ್ನಾಟಕದ ಕಾರ್ಮಿಕ ನಾಯಕರೆಲ್ಲರಿಗೂ ಒಂದು ಪಾಠ. ಅವರ ತಂತ್ರಗಾರಿಕೆ ಅವರ ಶತ್ರುಗಳೂ ಮೆಚ್ಚುವಂಥದ್ದು. ಬಂಡವಾಳಶಾಹಿಗಳ ವಿರುದ್ಧ ಹೋರಾಟ ದಂತೆಯೇ ಅವರ ಏಜೆಂಟರಂತೆ ವರ್ತಿಸುತ್ತಿದ್ದ ಸುಧಾರಣಾವಾದಿ, ಅವಕಾಶವಾದಿ ಕಾರ್ಮಿಕ ನಾಯಕರನ್ನು ಕೂಡ ಸೂರಿ ಜಾಲಾಡುತ್ತಿದ್ದರು. ಕಾರ್ಮಿಕ ಚಳುವಳಿಯಲ್ಲಿ ಅವರು ತೋರುತ್ತಿದ್ದ ಸಮರಧೀರತೆಯೇ ಕಾರ್ಮಿಕರ ಹಿತರಕ್ಷಣೆಗೆ ಅವರ ಕಂಕಣಬದ್ಧತೆಯೇ ಅವರನ್ನು ಮಾರ್ಕ್ಸ್‌ವಾದಿ ಸಿದ್ಧಾಂತಕ್ಕೆ ನಿಷ್ಠರಾಗಿ ಉಳಿಯುವಂತೆ ಮಾಡಿತು. ಬೆಂಗಳೂರಿನಲ್ಲಂತೂ ಸೂರಿ ಎಂದರೆ ಸಿಪಿಐ(ಎಂ) ಎನ್ನುವಂತಾಯಿತು. ಯಾವುದೇ ರಾಜಕೀಯ ಪಕ್ಷದ ನಾಯಕರೂ ಕೂಡ ಸೂರಿಯವರ ಈ ಸಮರಧೀರತೆಗೆ ಮಾರ್ಕ್ಸ್‌ವಾದಿ ರಾಜಕೀಯ ನಿಷ್ಠೆಗೆ ಗೌರವ ಕೊಡುವಂತಾಯಿತು.

ಜೀವನದ ಕೊನೆಯ ಕ್ಷಣಗಳವರೆಗೂ ಬಿಡದೆ ಅವಿಶ್ರಾಂತವಾಗಿ ದುಡಿದ ಅವರ ಆರು ದಶಕಗಳ ನಿರಂತರ ಶ್ರಮಕ್ಕೆ ಇನ್ನೂ ಹಲವು ಪಟ್ಟು ಹೆಚ್ಚಿನ ಪ್ರತಿಫಲ, ಪಕ್ಷದ ಬೆಳವಣಿಗೆಗೆ ಸಾಧ್ಯವಾಗಬೇಕಾಗಿತ್ತು ಎನ್ನುವ ಕೊರಗು ನನ್ನಂತಹ ಅನೇಕರಲ್ಲಿದೆ. ತಮ್ಮ ಅವಿಶ್ರಾಂತ ಕೆಲಸದ ಜೊತೆ ಜೊತೆಗೆ ಮಾರ್ಕ್ಸ್‌ವಾದದ ಇನ್ನೂ ಹೆಚ್ಚಿನ ತಿಳುವಳಿಕೆ, ಅಳವಡಿಕೆಯನ್ನು ಸಾಧ್ಯ ಮಾಡಿಕೊಳ್ಳುವ ಮೂಲಕ ಈ ಯಶಸ್ಸನ್ನು ಪಕ್ಷದ ಕಾರ್ಯಕರ್ತರು ಕಾಣಬೇಕಾಗಿದೆ.

ಒಟ್ಟಿನಲ್ಲಿ ಜೀವನವೆಲ್ಲಾ ಉರಿದ ಈ ಕ್ರಾಂತಿ ಜ್ವಾಲೆ ಇಂದು ನಂದಿಹೋಗಿದೆ. ಆದರೆ ನಿಗಿನಿಗಿ ಕೆಂಡ ಹೊತ್ತಿಸಿದ ಹೋರಾಟದ ಬೆಳಕಿನಲ್ಲಿ ನಾವು ಮುನ್ನಡೆಯೋಣ.

ಜಿ.ಎನ್.ನಾಗರಾಜ್

○

ದುಡಿವ ವರ್ಗ

ಕರ್ನಾಟಕದ ಕಮ್ಯುನಿಸ್ಟ್ ಆಂದೋಲನದ ಧ್ರುವ
ಅವರ ಸಾವು ತಂದ ಅಘಾತ,

ಸಾವಿನ ನೆರಳಲ್ಲೂ ಕಾಡಿದ್ದ ಕರ್ತವ್ಯ

ಹೃದಯದ ತೊಂದರೆ ಎದುರಿಸುತ್ತಿದ್ದ ಕಾಂ। ಸೂರಿಯವರಿಗೆ ವೈದ್ಯರು ಶಸ್ತ್ರ ಚಿಕಿತ್ಸೆಗೆ ಸೂಚಿಸಿದ್ದರು. ಆದರೆ ರಾಷ್ಟ್ರೀಯ ಮಹತ್ವದ 'ರಾಷ್ಟ್ರಪತಿ' ಚುನಾವಣೆಯಲ್ಲಿ ಎಡ ಪಕ್ಷಗಳ ಅಭ್ಯರ್ಥಿ ಡಾ। ಲಕ್ಷ್ಮಿ ಸೆಹಗಲ್ ಜುಲೈ 7 ರಂದು ಬೆಂಗಳೂರಿಗೆ ಬರಬೇಕಿದ್ದ ಸಂದರ್ಭ ಇದ್ದದ್ದರಿಂದ ಪಕ್ಷದ ಪರವಾಗಿ ಈ ಸಂಬಂಧದ ಕರ್ತವ್ಯಗಳನ್ನು ಮುಗಿಸಿಯೇ ಶಸ್ತ್ರ ಚಿಕಿತ್ಸೆಗೆ ಹೊಗಲು ಅವರು ಒಪ್ಪಿದ್ದರು. ಈ ಕಾರ್ಯಕ್ರಮಗಳ ಸಿದ್ಧತೆಯ ನಡುವೆಯೇ ಹೃದಯಾಘಾತದಿಂದ ಆಸ್ಪತ್ರೆ ಸೇರಬೇಕಾಯಿತು. ತಜ್ಞ ವೈದ್ಯರ ಬರವಿಗಾಗಿ ಕಾದು ಜುಲೈ 2 ರಂದು ಅವರು ಶಸ್ತ್ರ ಚಿಕಿತ್ಸೆಗೆ ಹೋಗುವವರಿದ್ದರು. ಶಸ್ತ್ರ ಚಿಕಿತ್ಸೆಗೆ ಮುಂಚೆಯೇ ಇಡೀ ರಾಜ್ಯದ ಚಳುವಳಿಗೆ ಅಘಾತ ನೀಡಿದ ಮತ್ತೊಂದು ಹೃದಯಾಘಾತಕ್ಕೆ ಕಾಂ। ಸೂರಿ ಗುರಿಯಾದರು. ಇನ್ನಿಲ್ಲವಾದರು. ಸಾಯುವ ಹಂತದಲ್ಲಿಯೂ ಸನಿಹದಲ್ಲಿದ್ದ ಸಂಗಾತಿಗಳನ್ನು ಕರೆದು ಅವರು 'ಉಸಿರಿದ್ದು' ಪಕ್ಷವನ್ನು ಉಳಿಸಬೇಕು ಎಂದು.


ದೂರವಾಣಿ ಕರೆಗಳ ಸುರಿಮಳೆ

ಕಾಂ। ಸೂರಿ ನಮ್ಮಿಂದ ದೂರವಾದರೂ ಎಂಬ ಸುದ್ಧಿ ಮಾಧ್ಯಮಗಳಲ್ಲಿ ಪ್ರಕಟವಾಗುವ ಮುಂಚೆಯೇ ಈ ಅಘಾತಕರ ಸುದ್ಧಿ ರಾಜ್ಯದಲ್ಲಿ ಕಾಡ್ಗಿಚ್ಚಿನಂತೆ ಹರಡಿತು. ಪಕ್ಷದ ಕಛೇರಿಗೆ ಫೋನಿನ ಮೇಲೆ ಫೋನಿನ ಕರೆ. ಫೋನ್ ಕರೆಗಳ ಸುರಿಮಳೆ. ಪಕ್ಷಕ್ಕಿರುವ ಎಲ್ಲಾ ದೂರವಾಣಿ ಸಂಪರ್ಕದಲ್ಲಿಯೂ ಉತ್ತರಿಸಲಾರದಷ್ಟು ಫೋನ್‌ಗಳು. ಪತ್ರಿಕಾ ಕಛೇರಿಗಳಿಂದ, ದೂರದರ್ಶನ ಛಾನೆಲ್‌ಗಳಿಂದ, ಅಭಿಮಾನಿಗಳು, ಪಕ್ಷದ ಮುಖಂಡರು ರಾಜ್ಯದ ಸಮೀಪದ, ದೂರದ ವಿವಿಧ ಜಿಲ್ಲೆಗಳಿಂದ, ಕೇಂದ್ರ ಸಮಿತಿಯಿಂದ. ಕಛೇರಿಯಲ್ಲಿದ್ದ ಸಂಗಾತಿಗಳು ತಮ್ಮ ದುಃಖವನ್ನು ಎಲ್ಲರಿಗೂ ಹಂಚಿದರು.

ಹತ್ತಿರದಲ್ಲಿದ್ದವರು, ದುಃಖ ತಡೆಯಲಾರದವರು ಧಾವಿಸಿ ಪಕ್ಷದ ಕಛೇರಿಗೆ ಬಂದರು. ಸುದ್ದಿ ಏನಾದರೂ ಒಮ್ಮೆ ಅಕಸ್ಮಾತ್ ಸುಳ್ಳಾಗಿರಬಹುದೇ? ಎಂಬ ಎಂಥದ್ದೋ ಆಸೆ. ಮತ್ತೆ ಮತ್ತೆ ಕೇಳಿ ಧೃಡಪಡಿಸಿಕೊಳ್ಳುವವರು ಹಲವರಾದರೆ, ಮಾತೇ ಆಡಲಾರದವರು ಹತ್ತಾರು ಮಂದಿ.

ಜನವೋ ಜನ.... ಕಿಕ್ಕಿರಿದ ಜನ ..... ಮೈಲು ಮಿಕ್ಕಿದ ಜನ


ಸುದ್ದಿ ಹರಡಿದಂತೆ ಜನ ಜಮಾಯಿಸ ತೊಡಗಿದರು. ರಾತ್ರಿ ಪಾರ್ಥಿವ ಶರೀರವನ್ನು ಜಯನಗರದ ಸೂರಿಯವರ ಮನೆಯಲ್ಲಿಡಲಾಗಿತ್ತು. ಜನಪ್ರವಾಹ. ಪಕ್ಷದ ಮುಖಂಡರು, ಕಾರ್ಯಕರ್ತರು, ಕಾರ್ಮಿಕರು, ಅಭಿಮಾನಿಗಳು, ವಿವಿಧ ಪಕ್ಷಗಳ ಮುಖಂಡರು, ವಿರೋಧ ಪಕ್ಷಗಳ ಮುಖಂಡರು ತಂಡೋಪ ತಂಡವಾಗಿ ಮುತ್ತಿದರು ಅಗಲಿದ ನಾಯಕನ ಅಂತಿಮ ದರ್ಶನ ಪಡೆದರು. ಮನೆಯ ಮುಂದೆ ಸುಮ್ಮನೆ ನಿಂತರು. ಮತ್ತೆ ಮತ್ತೆ ಮನೆಯ ಒಳ ಹೊಕ್ಕು ಬಂದರು... ಮತ್ತೇನು ಮಾಡಬಹುದು? ಮನೆಯ ಅಕ್ಕ ಪಕ್ಕದ ರಸ್ತೆಗಳು, ಕಿಕ್ಕಿರಿದ ಜನ, ಹಾಗೂ ವಾಹನಗಳ ಸಂದಣಿಯಿಂದಾಗಿ ಬಂದ್ ಆದವು. ರಾತ್ರಿ ಬೆಳಿಗ್ಗೆ ನಿರಂತರ ಜನವೋ ಜನ.. ಜನ.



ಜುಲೈ 2 ಬೆಳಿಗ್ಗೆ 11.30ಕ್ಕೆ ಮೃತ ಶರೀರವನ್ನು ಪಕ್ಷದ ಕಛೇರಿಯ ಬಳಿ ತರಲಾಯಿತು. ಬೆಳಿಗ್ಗೆಯಿಂದಲೇ ಕಛೇರಿಯ ಬಳಿ ಜನ ಸಾಗರ. ಇಡೀ ಸಂಪಂಗಿ ರಾಮನಗರ ಜನರಿಂದ ತುಂಬಿ ಹೋದಂತಿತ್ತು. ಮೊದಲು ಕಛೇರಿ ಇರುವ 18ನೇ ಅಡ್ಡರಸ್ತೆ, ನಂತರ ಕಾರ್ಪೋರೇಷನ್ ವೃತ್ತದಿಂದ ಕಛೇರಿಯ ಕಡೆ ಬರುವ ಮುಖ್ಯ ರಸ್ತೆ ಬಂದ್ ಆಯಿತು. ಪೋಲೀಸರು ಅನಿವಾರ್ಯವಾಗಿ ಆ ರಸ್ತೆಯಲ್ಲಿ ಸಂಚಾರವನ್ನೇ ನಿಷೇಧಿಸಿದರು.

ಎಂಥ ಅಭಿಮಾನ ಏನು ಗೌರವ - ಎಂಥ ಭಾಗ್ಯ

ಜನ ಸಂದಣಿಯಲ್ಲಿ ಅಂತಿಮ ದರ್ಶನಕ್ಕೆ ಗೊಂದಲವಾಗಬಾರ ದೆಂದು ಸಂದರ್ಶಕರು ಒಂದು ಸಾಲಾಗಿ ಬರಲು ಅನುಕೂಲವಾಗುವಂತೆ ರಸ್ತೆಯ ಇಕ್ಕೆಲಗಳಲ್ಲಿ ಪಕ್ಷದ ಕಾರ್ಯಕರ್ತರು ಕೈಕೈ ಹಿಡಿದು ಮಾನವ ಸರಪಳಿ ನಿರ್ಮಿಸಿ ನಿಂತರು. ಜನರ ದುಃಖದ ಕಟ್ಟೆ ಒಡೆದಂತೆಲ್ಲಾ ಕಾರ್ಯಕರ್ತರು ಕಟ್ಟಿದ ಈ ಅಡ್ಡಗಟ್ಟೆಯೂ ಹಲವು ಬಾರಿ ಒಡೆಯಿತು.



ಅಂತಿಮಗೌರವ ಸಲ್ಲಿಸುವವರಲ್ಲಿ ಮೊದಲು ಪಕ್ಷದ ಪಾಲಿಟ್ ಬ್ಯೂರೋ ಸದಸ್ಯರು, ನಂತರ ಕೇಂದ್ರ ಸಮಿತಿ ಸದಸ್ಯರು, ನಂತರ ರಾಜ್ಯ ಮುಖಂಡರು.... ಹೀಗೆ ಪಕ್ಷದ ಪರವಾಗಿ ಧ್ವನಿ ವರ್ಧಕದ ಮೂಲಕ ಸೂಚನೆ ನೀಡಲಾಗುತ್ತಿತ್ತು. ಶಿಸ್ತು ಪಕ್ಷದ ಸದಸ್ಯರೂ ಕಾರ್ಯಕರ್ತರಿಗೆ! ಅಭಿಮಾನಿಗಳು, ಸ್ನೇಹಿತರಿಗೆ ಎಂಥ ಶಿಸ್ತು. 'ಅಭಿಮಾನದ ಸ್ನೇಹಿತ, ದಶಕಗಳ ಒಡನಾಡಿ' ನೆಚ್ಚಿನ ನಾಯಕನಿಗೆ ಮೊದಲು ಅಂತಿಮ ನಮನ ಸಲ್ಲಿಸಲು ನುಗ್ಗಾಟವೋ ನುಗ್ಗಾಟ.

ಸಾಲು, ಶಿಸ್ತು... ಎಂದು ಕ್ರಮ ಹೇಳಲು


ಆರ್.ರಾಮಕೃಷ್ಣ



ಮುಖ್ಯಮಂತ್ರಿ ಎಸ್.ಎಂ.ಕೃಷ್ಣ

ಸಿಂಹ ಧ್ವನಿ ಇನ್ನಿಲ್ಲ

, ದುಡಿವವರ್ಗದ ನೆಚ್ಚಿನ ನೇತಾರ ಕಾಮ್ರೇಡ್ ಸೂರಿಯವರು ಇನ್ನಿಲ್ಲ.
ರ ದುಃಖ, ಅಂತಿಮ ಯಾತ್ರೆಯ ನೆನಪುಗಳು ಇಲ್ಲಿವೆ.



ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯ ಕಾರ್ಯದರ್ಶಿ ಹಾಗೂ ಸಿಐಟಿಯು ವಿನ ರಾಜ್ಯ ಅಧ್ಯಕ್ಷರೂ ಆಗಿದ್ದ ಕಾಮ್ರೇಡ್ ಎಸ್.ಸೂರ್ಯ ನಾರಾಯಣ ರಾವ್ ಜುಲೈ 1, 2002 ರ ಸಂಜೆ ಬೆಂಗಳೂರಿನ ನಾರಾಯಣ ಹೃದಯಾಲಯದಲ್ಲಿ ಹೃದಯಾಘಾತದಿಂದ ನಿಧನರಾದರು. ಕಾಮ್ರೇಡ್ ಸೂರಿಯೆಂದೇ ರಾಜ್ಯದ ಕಾರ್ಮಿಕ ಆಂದೋಲನದಲ್ಲಿ ಜನಪ್ರಿಯರಾಗಿದ್ದ ಅವರು ಸಿಐಟಿಯು ನ ಅಖಿಲಭಾರತ ಉಪಾಧ್ಯಕ್ಷರೂ ಹಾಗೂ ಸಿಪಿಐ(ಎಂ)ನ ಕೇಂದ್ರ ಸಮಿತಿಯ ಸದಸ್ಯರೂ ಆಗಿದ್ದರು. ಅವರು ಪತ್ನಿ ಲೀಲಾ ರಾವ್, ಮಕ್ಕಳಾದ ರೇಖಾ ಮತ್ತು ಮೀರಾ ಹಾಗೂ 4 ಮೊಮ್ಮಕ್ಕಳನ್ನೂ ಹಾಗೂ ಅಸಂಖ್ಯಾತ ಪಕ್ಷದ ಸಂಗಾತಿಗಳನ್ನು, ಅಭಿಮಾನಿಗಳನ್ನು ಅಗಲಿ ಹೋಗಿದ್ದಾರೆ.

ಕಾಂ. ಸೂರಿಯವರ ಜನನ ಆಗಸ್ಟ್ 24, 1924 ರಂದು ಹಾಸನ ಜಿಲ್ಲೆಯ ಅರಕಲಗೂಡಿನಲ್ಲಿ ಆಯಿತು. ಈ ನಡುವೆ ದೇಶದ್ಧ ಇತರೆಡೆಯಂತೆ ರಾಜ್ಯದಲ್ಲೂ ವಿದ್ಯಾರ್ಥಿ, ಯುವಜನರ ನಡುವೆ ಕೈಗಾರಿಕೋದ್ಯಮಿಯಾಗಿದ್ದರೂ ಸೂರಿಯವರು ತನ್ನ ಕಾಲ ಮೇಲೆಯೇ ನಿಂತು ಬದುಕಲು ನಿರ್ಧರಿಸಿ ಹೆಚ್.ಎ.ಎಲ್.ನಲ್ಲಿ ಕೆಲಸಕ್ಕೆ ಸೇರಿದರು.

ಅವರ ಉತ್ಸಾಹ, ಕಾರ್ಯಶೀಲತೆ, ಬದ್ಧತೆ ಯನ್ನು ಕಂಡ ಆಗಿನ ರಾಜ್ಯ ಕಾಂಗ್ರೆಸ್ ಅಧ್ಯಕ್ಷರು ಅವರನ್ನು ಕಾಂಗ್ರೆಸ್ ಪಕ್ಷಕ್ಕೆ ಆಹ್ವಾನಿಸಿದರು. ಆದರೆ ಸೂರ್ಯನಾರಾಯಣ ರಾವ್ 1948 ರಲ್ಲಿ ಕಮ್ಯುನಿಸ್ಟ್ ಪಕ್ಷ ಸೇರಲು ನಿರ್ಧರಿಸಿದರು. ಅಂದಿನಿಂದ ತಮ್ಮ ಇಡೀ ಜೀವನವನ್ನು ರಾಜ್ಯದ ದುಡಿಯುವ ವರ್ಗಕ್ಕೆ, ಪ್ರಜಾಪ್ರಭುತ್ವ ಆಂದೋಲನಕ್ಕೆ ಮುಡಿಪಿಟ್ಟರು. ಸುಮಾರು ಆರು ದಶಕಗಳ ಅವರ ಸಾರ್ವಜನಿಕ ಜೀವನ ಒಂದು ಹೋರಾಟಮಯ ಜೀವನ.

1956-58 ರ ಅವಧಿಯಲ್ಲಿ, ನಂತರ 1960-62 ರಲ್ಲಿ ಅವರು ಅವಿಭಜಿತ ಕಮ್ಯುನಿಸ್ಟ್ ಪಕ್ಷದ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಮಂಡಳಿ

ಕುಮಾರ್ ಮಿಲ್ ಹೋರಾಟ, 1967 ರ ಐತಿಹಾಸಿಕ ಹೋಟೆಲ್ ಕಾರ್ಮಿಕರ ಹೋರಾಟ, 1979 ರಲ್ಲಿ ಬೆಂಗಳೂರನ್ನು ನಡುಗಿಸಿದ ಮೈಕೊ ಕಾರ್ಮಿಕರ ಹೋರಾಟ, ನಂತರ 1980 ರ ಐಟಿಸಿ ಕಾರ್ಮಿಕರ ಹೋರಾಟ, 1981 ರ ಬೆಂಗಳೂರಿನ ಸಾರ್ವಜನಿಕ ವಲಯದ ಕಾರ್ಮಿಕ ಎರಡೂ ತಿಂಗಳಿಗೂ ಹೆಚ್ಚು ಕಾಲ ನಡೆದ ಐತಿಹಾಸಿಕ ಮುಷ್ಕರ, 1991 ರ ಎಸ್ಕಾರ್ಟ್ಸ್ ಕಾರ್ಮಿಕರ ಹೋರಾಟ, ಇತ್ತೀಚೆಗೆ 3 ತಿಂಗಳು ನಡೆದ ಎಲ್

ಕಾಮ್ರೇಡ್ ಸೂರಿ : ಹೋರಾಟದ ಬದುಕು

ಸ್ವಾತಂತ್ರ್ಯ ಹೋರಾಟದ ಭಾಗವಾಗಿ ವಿದ್ಯಾರ್ಥಿ ಆಂದೋಲನ ಹರಡಲಾರಂಭಿಸಿದಾಗ ಸೂರಿ ಯವರು ವಿದ್ಯಾರ್ಥಿ ಚಳುವಳಿಗೆ ಧುಮುಕಿದರು. ಇನ್ನೊಬ್ಬ ಕಮ್ಯುನಿಸ್ಟ್ ಮುಂದಾಳುವಾಗಿ ಬೆಳೆದ ಎಂ.ಎಸ್.ಕೃಷ್ಣನ್‌ರವರ ಜತೆ ರಾಜ್ಯದಲ್ಲಿ ಎಐಎಸ್‌ಎಫ್(ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್) ನ ಪ್ರಮುಖ ಮುಖಂಡರಾಗಿ ಬೆಳೆದು ಬಂದರು. 1942 ರಲ್ಲಿ ಗಾಂಧೀಜಿಯ 'ಕ್ವಿಟ್ ಇಂಡಿಯಾ' ಕರೆ ಬಂದಾಗ ಸಕ್ರಿಯವಾಗಿ ಭಾಗವಹಿಸಿದ ಸೂರ್ಯನಾರಾಯಣ ರಾವ್‌ರವರು ಇದಕ್ಕಾಗಿ 18 ತಿಂಗಳು ಬ್ರಿಟಿಷರ ಜೈಲು ವಾಸ ಅನುಭವಿಸಬೇಕಾಯಿತು.

ಪ್ರಧಾನಿ ಇಂದಿರಾಗಾಂಧಿಯವರ ಸಲಹಾ



ದುಃಖತಪ್ತ ಕುಟುಂಬ

ಕಾರರಾದ ಶ್ರೀ ಹೆಚ್.ವೈ.ಶಾರದಾ ಪ್ರಸಾದ್, ಡಾ.ಎಚ್.ನರಸಿಂಹಯ್ಯ ಮೊದಲಾದವರು ಈ ಹೋರಾಟದಲ್ಲಿ ಇವರ ಸಹಯೋಗಿಗಳು.

ವಿದ್ಯಾರ್ಥಿ ಮುಖಂಡರಾಗಿ ಅವರು ಚಳುವಳಿಗೆ ನೇತೃತ್ವ ನೀಡಿದ್ದಷ್ಟೇ ಅಲ್ಲ, ಆಗ ಬೆಂಗಳೂರಿಗೆ ಹೊರ ಊರುಗಳಿಂದ ಬರುತ್ತಿದ್ದ ಬಡ ವಿದ್ಯಾರ್ಥಿಗಳಿಗಾಗಿ 'ವಿದ್ಯಾರ್ಥಿ ನೆರವು ಸಮಿತಿ' ಹಾಗೂ ಒಂದು ಹಾಸ್ಟೆಲ್‌ನ್ನು ಸೂರ್ಯನಾರಾಯಣ ರಾವ್ ನಡೆಸಿದ್ದರು.

ಅವರ ತಂದೆ ಸ್ವಾಮಿರಾವ್

ಸದಸ್ಯರಾಗಿ ಆಯ್ಕೆಗೊಂಡರು. ಕಮ್ಯುನಿಸ್ಟ್ ಆಂದೋಲನದಲ್ಲಿ ಸೈದ್ಧಾಂತಿಕ ಭಿನ್ನಾಭಿಪ್ರಾಯ ಬಂದು 1964 ರಲ್ಲಿ ತೆನಾಲಿಯಲ್ಲಿ ವಿಶೇಷ ಅಧಿವೇಶನ ನಡೆದಾಗ ಅದರಲ್ಲಿ ಕರ್ನಾಟಕ ಪ್ರತಿನಿಧಿಗಳ ಮುಖಂಡರಾಗಿದ್ದವರು ಕಾಮ್ರೇಡ್ ಸೂರಿಯವರು.

ಪರಿಷ್ಕರಣವಾದದ ವಿರುದ್ಧ ಯಶಸ್ವಿ ಹೋರಾಟ ಸಾರಿದ ಅವರು 1964 ರಲ್ಲಿ ಸಿಪಿಐ(ಎಂ) ಸ್ಥಾಪನೆಗೊಂಡಾಗ ರಾಜ್ಯದಲ್ಲಿ ಸಿಪಿಐ(ಎಂ) ನ್ನು ಬುಡದಿಂದ ಕಟ್ಟಿ ಬೆಳೆಸಿದವರಲ್ಲಿ ಪ್ರಮುಖರು. ಆಗಿನ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರಕಾರಕ್ಕಾಗಿ ನಡೆದ ಪ್ರಜಾಪ್ರಭುತ್ವ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಮೂರು ತಿಂಗಳ ಭೂಗತವಾಸವನ್ನು ಅನುಭವಿಸಿದರು.

1998 ರಲ್ಲಿ ಅವರು ಕಾಂ. ಪಿ.ರಾಮಚಂದ್ರರಾವ್‌ರವರ ನಿಧನದ ನಂತರ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಯಾಗಿ ಚುನಾಯಿತರಾದರು. ನಂತರ ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರೂ ಆದರು. ಇತ್ತೀಚೆಗೆ ನಡೆದ ಸಿಪಿಐ(ಎಂ) 17ನೇ ಮಹಾಧಿವೇಶನದಲ್ಲಿ ಅವರು ಕೇಂದ್ರ ಸಮಿತಿಗೆ ಮರು ಆಯ್ಕೆಗೊಂಡರು.

1975 ರಲ್ಲಿ ತುರ್ತುಪರಿಸ್ಥಿತಿಯ ಕಾಲದಲ್ಲಿ ಸೂರ್ಯನಾರಾಯಣ ರಾವ್ ಮತ್ತೆ ಜೈಲುವಾಸ ಅನುಭವಿಸಬೇಕಾಯಿತು.

ಈ ಮೊದಲೇ ಹೇಳಿದಂತೆ ರಾಜ್ಯದ ಕಾರ್ಮಿಕ ಆಂದೋಲನದಲ್ಲಿ ಕಾಮ್ರೇಡ್ ಸೂರಿಯವರದ್ದು ಅಚ್ಚಳಿಯದ ಹೆಸರು. ರಾಜ್ಯದ ಅಸಂಘಟಿತ ಕಾರ್ಮಿಕರನ್ನು ಸಂಘಟಿತರಾಗಿಸಿ ಸಮರಶೀಲ ಹೋರಾಟಗಳಿಗೆ ಇಳಿಸಿದ ಅವರು ನೇತೃತ್ವ ನೀಡಿದ ಹೋರಾಟಗಳು ಹಲವಾರು. 1965 ರ ರಾಮ್

ಅಂಡ್ ಟಿ ಕಾರ್ಮಿಕರ ಹೋರಾಟ ಇವುಗಳಲ್ಲಿ ಕೆಲವಷ್ಟೆ.

1983 ರಲ್ಲಿ ಬೆಂಗಳೂರಿನ ವರ್ತೂರು ಕ್ಷೇತ್ರದಿಂದ ರಾಜ್ಯ ವಿಧಾನಸಭೆಗೆ ಆರಿಸಲ್ಪಟ್ಟ ಕಾಮ್ರೇಡ್ ಸೂರಿ ವಿಧಾನಸಭೆಯಲ್ಲಿ ರಾಜ್ಯದ ಕಾರ್ಮಿಕ ವರ್ಗದ ದನಿಯಾದರು.

ಕಾಮ್ರೇಡ್ ಸೂರ್ಯನಾರಾಯಣ ರಾವ್ ಕರ್ನಾಟಕ ಕಾರ್ಮಿಕರ ಪ್ರತಿನಿಧಿಯಾಗಿ ಹಲವು ಅಂತರ್ರಾಷ್ಟ್ರೀಯ ಸಮ್ಮೇಳನಗಳಲ್ಲಿ ಭಾಗವಹಿಸಿ ದರು. ಇದರ ಭಾಗವಾಗಿ ಅವರು ಚೀನಾ, ಪ್ಯಾರಿಸ್, ಸೋವಿಯತ್ ಒಕ್ಕೂಟ, ಕ್ಯೂಬಾ ಹಾಗೂ ಇತ್ತೀಚೆಗೆ ದಕ್ಷಿಣ ಕೊರಿಯಾದ ರಾಜಧಾನಿ ಸೋಲ್‌ನಲ್ಲಿ ನಡೆದ ಜಾಗತೀಕರಣದ -ವಿರೋಧಿ ಸಮ್ಮೇಳನದಲ್ಲಿ ಅವರು ಭಾಗವಹಿಸಿದರು.

ಕಳೆದ ಒಂದು ದಶಕದಲ್ಲಿ ಉದಾರೀಕರಣ - ಖಾಸಗೀಕರಣ-ಜಾಗತೀಕರಣ ಕಾರ್ಮಿಕ ವರ್ಗದ, ಜನಸಾಮಾನ್ಯರ ಬದುಕಿನ ಮೇಲೆ ಸತತ ಧಾಳಿ ನಡೆಸುತ್ತಿರುವಾಗ ಜತೆಗೆ ಕೋಮುವಾದ ದುಡಿಯುವ ಜನಗಳನ್ನು ವಿಭಜಿಸುವ ಹುನ್ನಾರ ನಡೆಸುತ್ತಿರುವಾಗ ಇವುಗಳ ವಿರುದ್ಧ ಕಾರ್ಮಿಕರ, ಜನಸಾಮಾನ್ಯರ ಪ್ರತಿರೋಧಕ್ಕೆ ನೇತೃತ್ವ ನೀಡುವಲ್ಲಿಯೂ ಅವರು ಮುಂಚೂಣಿಯಲ್ಲಿದ್ದರು.

ಕಾಮ್ರೇಡ್ ಸೂರಿಯವರು ತಮ್ಮ ಹೋರಾಟಮಯ ಬದುಕು ಹಾಗೂ ಧೀಮಂತ ನೇತೃತ್ವದ ಗುಣಗಳಿಂದಾಗಿ ಕಾರ್ಮಿಕ ವರ್ಗದಲ್ಲಿ ಅಪಾರ ಅನುಯಾಯಿಗಳನ್ನು ಗಳಿಸಿದ್ದರು. ತಮ್ಮ ಪ್ರಾಮಾಣಿಕ ರಾಜಕೀಯ ಜೀವನದಿಂದಾಗಿ ಕಾರ್ಮಿಕ ಆಂದೋಲನದ ಹೊರಗೂ, ರಾಜ್ಯದ ಪ್ರಜಾಪ್ರಭುತ್ವ ಚಳುವಳಿಯಲ್ಲಿ ಹಲವಾರು ಅಭಿಮಾನಿಗಳನ್ನು ಪಡೆದಿದ್ದರು.

ಅವರ ನಿಧನ ರಾಜ್ಯದ ಕಾರ್ಮಿಕ ಆಂದೋಲನ ಹಾಗೂ ಪ್ರಜಾಪ್ರಭುತ್ವ ಆಂದೋಲನ ಒಂದು ಧೀಮಂತ ಚೇತನವನ್ನು ಕಳೆದುಕೊಂಡಿದೆ. ○

...ಷ್ಣ



...ನಂತರ

ಪ್ರಯತ್ನಿಸಿದರು ಸಿಟ್ಟಿಗೆದ್ದವರಿಗೇನೂ ಕಡಿಮೆ ಇಲ್ಲ. ಹಿಂದೆ ಪಕ್ಷ ನಿಷೇಧಕ್ಕೆ ಗುರಿಯಾಗಿದ್ದಾಗ, ಕಾಂ। ಸೂರಿಯಂತಹ ಮುಖಂಡರು, ಹಲವು ಬಾರಿ ಊಟ, ತಿಂಡಿ, ಅರ್ಧ ಟೀಗೆ ಸಹ ಹಣವಿಲ್ಲದೆ ಭೂಗತರಾಗಿ ದುಡಿಯುತ್ತಿದ್ದ ಕಾಲದಲ್ಲಿ ಅವರೊಂದಿಗೆ ಒಡನಾಡಿದ ಸ್ನೇಹಿತರು ಗತಕಾಲದ ತಮ್ಮ ಸ್ನೇಹಿತ, ಒಡನಾಡಿಗೆ ಅಂತಿಮ ಗೌರವ ಸಲ್ಲಿಸುವ ಹಕ್ಕಿಗಾಗಿ ಪಂಚೆ ಕೊಡವಿ ನಿಂತಂತೆ ಕಾಣುತ್ತಿತ್ತು.

ಮಧ್ಯಾಹ್ನ 12 ರಿಂದ 3.00 ಗಂಟೆಯವರೆಗೆ ಒಂದೇ ಸಮನೆ ಹರಿದ ಜನ ಪ್ರವಾಹ. ಒಬ್ಬರ ಹಿಂದೊಬ್ಬರು ಬರುವ ಒಂದು ಸಾಲಿನಲ್ಲಿ ಅಂತಿಮ ದರ್ಶನಕ್ಕೆ ಅಂತ್ಯವೇ ಇಲ್ಲ ಎಂದು ಕಂಡುಕೊಂಡ ಜನ ಹಲವು ಬಾರಿ ಗುಂಪು ಗುಂಪಾಗಿ ನುಗ್ಗಿಯೇ ನುಗ್ಗಿದರು! ಕೊನೆ ಕೊನೆಗೆ ಮುಗಿಯುವುದೋ ಎಂದು ನೋಡಿದರೆ, ಇಲ್ಲ. 'ಕ್ಯೂ ಸುಬ್ಬಯ್ಯ ಸರ್ಕಲ್ ದಾಟಿ ಆಚೆಗೂ ಇದೆ' ಎಂಬ ವರದಿ. ಕೊನೆಯ ಬಾರಿ ನೆಚ್ಚಿನ ಮುಖಂಡನ ಮುಖ ನೋಡಲು ಅವಕಾಶ ಸಿಗದೇ ಹೋದರೆ ಎಂಬ ಆತಂಕ. ಎಷ್ಟು ಜನ, ಎಂಥ ಗೌರವ, ಎಂಥ



ಅಭಿಮಾನ. ಬದುಕಿನ ಕೊನೆಯಲ್ಲಿ ಇಂಥ ಅಭಿಮಾನ, ಪ್ರೀತಿಯನ್ನು ನೋಡಿದಾಗ ಕಾಂ। ಸೂರಿ ಎಂತಹ ಜನನಾಯಕ ಎಂಬುದು ಅರಿವಾಗುತ್ತಿತ್ತು.

ಧಾರಾಕಾರ ಕಣ್ಣೀರು ಸುರಿಸುವವರು, ಕೆಂಪು ವಂದನೆ ಸಲ್ಲಿಸುವವರು, ಹೂಗುಚ್ಛ, ಗಂಧದ ಹಾರದ ರೂಪದಲ್ಲಿ ಗೌರವ ಸೂಚಿಸುವವರು, ಪಕ್ಷದ ಮಿತಿಗಳನ್ನು ಮೀರಿ ಹರಿದು ಬಂದ ಗೌರವ.

ಪಕ್ಷದ ಪಾಲಿಟ್ ಬ್ಯೂರೋ ಸದಸ್ಯರಾದ, ಕಾಂ। ಪಿ. ರಾಮಚಂದ್ರನ್, ಕಾಂ। ಪಿ. ರಾಮಚಂದ್ರ ಪಿಳ್ಳೈ, ಕಾಂ। ಎಂ. ಕೆ. ಪಂಧೆ, ಪಕ್ಷದ ತಮಿಳು ನಾಡು ಕಾರ್ಯದರ್ಶಿ ಕಾಂ। ಎನ್. ವರದರಾಜನ್, ಪಕ್ಷದ ಪಶ್ಚಿಮ ಬಂಗಾಳ ರಾಜ್ಯ ಸಮಿತಿಯ ಪರವಾಗಿ ಸಚಿವರಾದ ಕಾಂ। ಕಾಂತಿ ಗಂಗುಲಿ, ಕಲ್ಕತ್ತದ ಮಾಜಿ ಮೇಯರ್ ಕಾಂ। ಪ್ರಶಾಂತ್ ಸೂರ್ ಮುಂತಾದವರು.

ರಾಜ್ಯದ ಮುಖ್ಯ ಮಂತ್ರಿ ಎಸ್. ಎಂ. ಕೃಷ್ಣ ಗೃಹಮಂತ್ರಿ ಮಲ್ಲಿಕಾರ್ಜುನ ಖರ್ಗೆ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಪ್ರೊ. ಬಿ.ಕೆ. ಚಂದ್ರಶೇಖರ್, ಕಾನೂನು ಸಚಿವ ಚಂದ್ರೇಗೌಡ, ಬೃಹತ್ ಕೈಗಾರಿಕಾ ಮಂತ್ರಿ ಆರ್.ವಿ. ದೇಶಪಾಂಡೆ, ಸಚಿವರಾದ ಕೃಷ್ಣಪ್ಪ, ರಾಮಲಿಂಗಾರೆಡ್ಡಿ, ಮಾಜಿ ಸಚಿವರಾದ ಕೃಷ್ಣಾರೆಡ್ಡಿ, ಬಿ. ಸೋಮಶೇಖರ್, ವೈಜನಾಥ ಪಾಟೀಲ್, ವಿ. ಸೋಮಣ್ಣ, ಶಾಸಕರಾದ ಪಿ. ಸುದರ್ಶನ್, ರಾಜ್ಯ ವಿಧಾನಪರಿಷತ್‌ನ

ಪುಟ 10 ಕ್ಕೆ

......ವಾಸ್ತವ ಮತ್ತು ಹಲವು ಪ್ರಶ್ನೆಗಳು

ಪುಟ 5 ರಿಂದ

ರಿಜಿಸ್ಟರ್ 1943, ಸಂಪುಟ 2)

ನಿರಂತರವಾಗಿ ಭಾರತೀಯ ಜನತೆಯ ಹಿತಾಸಕ್ತಿಗಳಿಗೆ ವಿರುದ್ಧವಾಗಿದ್ದವರು ದೇಶದ ಎಡ ಚಳುವಳಿಯ ಪ್ರಮುಖರ ದೇಶಪ್ರೇಮವನ್ನು, ಅವರ ಅಸಂಖ್ಯ ತ್ಯಾಗಗಳನ್ನು ಶಂಕಿಸುವ, ರೂಪಿಸುವ ಭಂಡತನವನ್ನು ಈಗ ಪ್ರದರ್ಶಿಸುತ್ತಿದ್ದಾರೆ.

11. 1975ರಲ್ಲಿ ಇಂದಿರಾ ಗಾಂಧಿ ಹೇರಿದ ಆಂತರಿಕ ತುರ್ತು ಪರಿಸ್ಥಿತಿಯನ್ನು ಬೆಂಬಲಿಸಿದಾಗ ಸಿಪಿಐ(ಎಂ) ಮತ್ತೊಮ್ಮೆ ತನ್ನನ್ನು ಎಲ್ಲರಿಂದ ದೂರ ಸರಿಸಿಕೊಳ್ಳುತ್ತಿದೆಯೇ?

ರಾಜಕೀಯ ಅಜ್ಞಾನಿಗಳು ಅಥವಾ ರಾಜಕೀಯ ಅನಕ್ಷರಸ್ತರು ಮಾತ್ರವೇ ಸಿಪಿಐ(ಎಂ) ಬಗ್ಗೆ ಇಂತಹ ದೂಷಣೆ ಮಾಡಿಯಾರು. ದೇಶಾದ್ಯಂತ ಸಾವಿರಾರು ಸಿಪಿಐ(ಎಂ) ಕಾರ್ಯಕರ್ತರು ಬಂಧಿತರಾದರು. ಅವರಲ್ಲಿ ಹಲವರು ಇಡೀ ತುರ್ತುಪರಿಸ್ಥಿತಿಯ ಅವಧಿಯಲ್ಲಿ ಕರಾಳಶಾಸನ 'ಮೀಸಾ' (ಆಂತರಿಕ ಭದ್ರತಾ ಶಾಸನ) ದಡಿ ಜೈಲಿನಲ್ಲಿದ್ದರು. ಸಿಪಿಐ(ಎಂ) ಮತ್ತು ಸಾಮೂಹಿಕ ಸಂಘಟನೆಗಳು ಸಂಘಟಿಸಿದ ಭೂಗತ ಪ್ರತಿರೋಧ ಪ್ರಜಾಪ್ರಭುತ್ವದ ಪುನಃಸ್ಥಾಪನೆಗಾಗಿ ಜನತಾ ಆಂದೋಲನ ಕಟ್ಟುವಲ್ಲಿ ಒಂದು ಪ್ರಧಾನ ಪಾತ್ರ ವಹಿಸಿತು. ಸಿಪಿಐ(ಎಂ)ನ ಅತ್ಯಂತ ಪೂರ್ವಾಗ್ರಹಪೀಡಿತ ಹಾಗೂ ರಾಜಕೀಯ ದುರುದ್ದೇಶದ ಶತ್ರುವೂ ಇದನ್ನು ನಿರಾಕರಿಸಲಾರ.

ತದ್ವಿರುದ್ಧವಾಗಿ ತುರ್ತುಪರಿಸ್ಥಿತಿಯ ಕಾಲದಲ್ಲಿ ಆರ್‌ಎಸ್‌ಎಸ್ ನ ಮತ್ತು ಕಾವಿಪಡೆಗಳ ಪಾತ್ರವೇನು?

ಅವರು ಇಂದಿರಾಗಾಂಧಿಯೊಂದಿಗೆ ರಾಜಿಯಾಗಲು ನಡೆಸದ ಪ್ರಯತ್ನಗಳಿಲ್ಲ. ಆರ್‌ಎಸ್‌ಎಸ್ ಮುಖ್ಯಸ್ಥ ದೇವರಸ್ ಶ್ರೀಮತಿ ಗಾಂಧಿಯವರಿಗೆ ಎರಡು ಬಾರಿ ಪತ್ರ ಬರೆದಿದ್ದರು - ಆರ್‌ಎಸ್‌ಎಸ್ ಮೇಲಿನ ನಿಷೇಧವನ್ನು ತೆಗೆಯಬೇಕೆಂದು ಬಿನ್ನಹ ಮಾಡಿಕೊಳ್ಳುತ್ತಾ. ಅಲಹಾಬಾದ್ ಹೈಕೋರ್ಟ್ ಆಕೆಯ ಚುನಾವಣೆಯನ್ನು ರದ್ದುಗೊಳಿಸಿದ್ದಕ್ಕೆ ತುರ್ತುಪರಿಸ್ಥಿತಿ ಹೇರಿದ್ದಕ್ಕಾಗಿ ಇಡೀ ದೇಶ ಆಕೆಯ ವಿರುದ್ಧ ಎದ್ದು ನಿಂತಿದ್ದಾಗ ಬಾಳಾ ಸಾಹೇಬ್ ದೇವರಸ್ ಯೆರವಾಡ ಜೈಲಿನಿಂದ ಬರೆದ ದಿ. 10.11.1975 ರ ಪತ್ರ ಹೀಗೆ ಹೇಳಿತ್ತು - "ಸುಪ್ರಿಂ ಕೋರ್ಟ್‌ನ ಐವರು ನ್ಯಾಯಾಧೀಶರು ನಿಮ್ಮ ಚುನಾವಣೆ ಸಿಂಧುವಾಗಿದೆ ಎಂದು ಘೋಷಿಸಿದ್ದಕ್ಕಾಗಿ ನಿಮ್ಮನ್ನು ಅಭಿನಂದಿಸಲು ನನಗೆ ಅವಕಾಶ ಕೊಡಿ". ಇಂದಿರಾಗಾಂಧಿ ಕಾನೂನನ್ನು ತಿರುಚಿ, ಸಂವಿಧಾನವನ್ನು ತಿದ್ದುಪಡಿ ಮಾಡಿ ತನ್ನ ಚುನಾವಣೆಯನ್ನು ಕಾನೂನು ಬದ್ಧಗೊಳಿಸಿಕೊಂಡ ರೀತಿಯನ್ನು ಇಡೀ ದೇಶ ಪ್ರತಿಭಟಿಸುತ್ತಿದ್ದಾಗ ಅವರು ಹೀಗೆಂದಿದ್ದರು! ಆಚಾರ್ಯ ವಿನೋಬಾ ಭಾವೆಯವರಿಗೆ ಬರೆದ ಇನ್ನೊಂದು ಪತ್ರದಲ್ಲಿ ಬಾಳಾಸಾಹೇಬ್ ದೇವರಸ್ ಹೇಳುತ್ತಾರೆ - "... ಪ್ರಧಾನಮಂತ್ರಿಗಳಲ್ಲಿ ಸಂಘದ ಬಗ್ಗೆ ಇರುವ ತಪ್ಪು ಕಲ್ಪನೆಯನ್ನು ಹೋಗಲಾಡಿಸಲು ಪ್ರಯತ್ನಿಸಿ ಎಂದು ನಿಮ್ಮನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಸಂಘದ ಮೇಲಿನ ನಿಷೇಧ ಹೋಗುತ್ತದೆ ಹಾಗೂ ಅವರು ಪ್ರಧಾನಮಂತ್ರಿಗಳ ನೇತೃತ್ವದಲ್ಲಿ ದೇಶದ ಪ್ರಗತಿ ಮತ್ತು ಸಮೃದ್ಧಿಗೆ ಸಂಬಂಧಪಟ್ಟ ಯೋಜಿತ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಸಾಧ್ಯವಾಗುತ್ತದೆ". ಈ 'ಯೋಜಿತ ಕಾರ್ಯಕ್ರಮ' ಎಂದರೆ ತುರ್ತುಪರಿಸ್ಥಿತಿಯ ಕಾಲದಲ್ಲಿ ಇಂದಿರಾಗಾಂಧಿಯವರು ತಂದ ಕುಖ್ಯಾತ ಇಪ್ಪತ್ತಂಶದ ಕಾರ್ಯಕ್ರಮ ಎಂಬುದು ಸ್ವಯಂವೇದ್ಯ! ಭಾರತದ ಪ್ರಜಾಪ್ರಭುತ್ವವಾದಿ ಜನಸಮೂಹಗಳು ಇದನ್ನು ಟೀಕಿಸುತ್ತಿದ್ದಾಗ ಆರ್‌ಎಸ್‌ಎಸ್ ಇಂದಿರಾಗಾಂಧಿಯವರ ಮುಖಂಡತ್ವವನ್ನು ಸ್ವೀಕರಿಸಲು ಸಿದ್ಧವಾಗಿತ್ತು!

'ಸೆಕ್ಯುಲರ್ ಡೆಮಾಕ್ರಸಿ' ಪತ್ರಿಕೆಯಲ್ಲಿ ದಿವಂಗತ ಮಧು ಲಿಮಯೆಯವರು ಹೀಗೆ ಬರೆದಿದ್ದರು - "ತುರ್ತು ಪರಿಸ್ಥಿತಿ ವಿರೋಧಿ ಹೋರಾಟದ ಮುಂಚೂಣಿಯಲ್ಲಿ ತಾವೇ ಇದ್ದುದಾಗಿ ಆರ್‌ಎಸ್‌ಎಸ್ ಜನ ಹೇಳಿಕೊಳ್ಳುತ್ತಾರೆ. ಆದರೆ ಸತ್ಯಕ್ಕೆ ದೂರವಾದ ಮಾತು ಬೇರೊಂದಿರಲಿಕ್ಕೆ ಸಾಧ್ಯವಿಲ್ಲ. ಆರ್‌ಎಸ್‌ಎಸ್ ಮೇಲೆ ನಿಷೇಧ ಅವರನ್ನು ನಡುಗಿಸಿ ಬಿಟ್ಟಿತು. ತುರ್ತುಪರಿಸ್ಥಿತಿ ಘೋಷಣೆಯ ಕೆಲವೇ ದಿನಗಳೊಳಗೆ ಅವರಲ್ಲಿ ಬಂಧಿತರಾದವರ ಮನೋಬಲ ಕುಸಿಯಿತು. ಅವರಲ್ಲಿ ಬಹುಪಾಲು ಬಂಧಿತರು ಅಧಿಕಾರಿಗಳೆದುರು ಹೀನ ರೀತಿಯಲ್ಲಿ ಕ್ಷಮೆಕೋರಿದರು. ಹಲವರು ಬಂಧನ ತಪ್ಪಿಸಿಕೊಳ್ಳಲು ಆರ್‌ಎಸ್‌ಎಸ್ ಮತ್ತು ಜನಸಂಘವನ್ನು ತೊರೆದರು".

ಹೀಗಿದೆ ಸರ್ವಾಧಿಕಾರಶಾಹಿಯ ಎದುರು, ಇಂದಿರಾಗಾಂಧಿಯವರ ತುರ್ತುಪರಿಸ್ಥಿತಿಯೆದುರು ಮಂಡಿಯೂರಿದ ಆರ್‌ಎಸ್‌ಎಸ್ ದಾಖಲೆ.

12. ಒಬ್ಬ ಪ್ರಸಿದ್ಧ ವಿಜ್ಞಾನಿಯನ್ನು ಎಡಪಕ್ಷಗಳು ವಿರೋಧಿಸುವುದೇಕೆ? ಡಾ. ರಾಧಾಕೃಷ್ಣನ್‌ರಂತಹ ಸಕ್ರಿಯ ರಾಜಕೀಯದಿಂದ ಬಹಳ ದೂರವಿದ್ದ ವ್ಯಕ್ತಿಗಳು ರಾಷ್ಟ್ರಪತಿಗಳಾಗಲಿಲ್ಲವೇ?

ಎಡಪಕ್ಷಗಳು ಅಬ್ದುಲ್ ಕಲಾಂರನ್ನು ವಿರೋಧಿಸುತ್ತಿರುವುದು ಅವರು ಬಿಜೆಪಿ/ಎನ್‌ಡಿಎ ಯ ಅಭ್ಯರ್ಥಿ ಎಂಬ ಕಾರಣಕ್ಕೆ ಎಂಬುದನ್ನು ಮತ್ತೊಮ್ಮೆ ಹೇಳಬೇಕಾಗುತ್ತದೆ. ಒಬ್ಬ ಕ್ಷಿಪಣಿ ತಂತ್ರಜ್ಞನಾಗಿ ಕಲಾಂಗೆ ಇಡೀ ದೇಶ ಗೌರವ ಸಲ್ಲಿಸಿದೆ. 'ಭಾರತ ರತ್ನ' ಪದವಿಯನ್ನು ನೀಡಿದೆ. ಇದನ್ನು ಅವರಿಗೆ ನೀಡಿದ್ದು 1997 ರಲ್ಲಿ ಸಂಯುಕ್ತ ರಂಗದ ಸರ್ಕಾರದ ಸಮಯದಲ್ಲಿ.

ರಾಷ್ಟ್ರಪತಿಗಳ ಸ್ಥಾನ ಸಾಧನೆಗಳಿಗಾಗಿ ನೀಡುವ ಬಹುಮಾನವೇನಲ್ಲ. ರಾಷ್ಟ್ರಪತಿಗಳು ಹಲವು ಪ್ರಮುಖ ಜವಾಬ್ದಾರಿಗಳನ್ನು ನಿರ್ವಹಿಸಬೇಕಾಗುತ್ತದೆ. ಮಾಜಿ ರಾಷ್ಟ್ರಪತಿ ವೆಂಕಟರಾಮನ್‌ರವರು ಹೇಳಿದಂತೆ ರಾಷ್ಟ್ರಪತಿಯ ಪಾತ್ರ ಒಂದು ತುರ್ತು ದೀಪ(ಎಮೆರ್ಜೆನ್ಸಿ ಲ್ಯಾಂಪ್)ದಂತೆ. ವಿದ್ಯುತ್ ವಿಫಲವಾದಾಗ ಅದು ತಂತಾನೇ ಹತ್ತಿಕೊಳ್ಳುತ್ತದೆ, ವಿದ್ಯುತ್ ಮತ್ತೆ ಬಂದಾಗ ಅದು ಆರಿಹೋಗುತ್ತದೆ. ವಿದ್ಯುತ್ ವಿಫಲವಾದಾಗ ತುರ್ತುದೀಪ ಉರಿಯದಿದ್ದರೆ ಅದು ದೇಶಕ್ಕೊಂದು ದೊಡ್ಡ ಗಂಡಾಂತರವಾಗುತ್ತದೆ.

ಒಬ್ಬ ರಾಜಕಾರಣಿಯನ್ನೇ ರಾಷ್ಟ್ರಪತಿಯಾಗಿ ಮಾಡಬೇಕೆಂದೇನಿಲ್ಲ. ಆದರೆ ಭಾರತದ ರಾಷ್ಟ್ರಪತಿಗೆ ರಾಜಕೀಯ ಸೂಕ್ಷ್ಮಗಳ ಒಳ್ಳೆಯ ಪರಿಜ್ಞಾನ ಇರಬೇಕು - ಅದು ಕೂಡಾ ಅಸ್ಪಷ್ಟ ಜನತಾ ತೀರ್ಪುಗಳೇ ಬರುತ್ತಿರುವಾಗ, ಭಾರತೀಯ ಸಂವಿಧಾನವನ್ನು ಉದ್ದೇಶಪೂರ್ವಕವಾಗಿ ಉಲ್ಲಂಘಿಸುವವರಿಗೆ ಸರಕಾರದ ಪೋಷಣೆ ದೊರೆಯುತ್ತಿರುವಾಗ ಹಾಗೂ ರಾಜ್ಯ ಸರ್ಕಾರಗಳ ಅಧಿಕಾರಗಳನ್ನು ತುಳಿಯುತ್ತಿರುವಾಗ ಇದು ಇನ್ನಷ್ಟು ಅಗತ್ಯ.

ಡಾ. ರಾಧಾಕೃಷ್ಣನ್ ಉದಾಹರಣೆ ಕೊಡುವುದು ಸಂಪೂರ್ಣ ತಪ್ಪು. ಡಾ. ರಾಧಾಕೃಷ್ಣನ್ ಸ್ವಾತಂತ್ರ್ಯ ಹೋರಾಟದ ಭಾಗವಾಗಿದ್ದವರು, ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿದ್ದರು; ಎರಡನೇ ಮಹಾಯುದ್ಧ ಮುಗಿದ ಕೂಡಲೇ ಸ್ಟಾಲಿನ್‌ರ ಸೋವಿಯತ್ ಒಕ್ಕೂಟಕ್ಕೆ ಭಾರತದ ರಾಯಭಾರಿಗಳಾಗಿದ್ದರು; ಎರಡು ಪೂರ್ಣ ಅವಧಿಗೆ ಭಾರತದ ಉಪರಾಷ್ಟ್ರಪತಿಗಳಾಗಿದ್ದರು. ಆಮೇಲೆಯೇ ಅವರು ರಾಷ್ಟ್ರಪತಿಗಳಾದದ್ದು. ಡಾ. ರಾಧಾಕೃಷ್ಣನ್‌ರು ಅಭ್ಯರ್ಥಿಯಾದಾಗ ಅವರ ಹಿಂದೆ ಈ ಅಪಾರ ಅನುಭವವಿತ್ತು.

13. ಆದರೆ ಕಲಾಂರವರು ಬಿಜೆಪಿಯ ವ್ಯಕ್ತಿಯೇನಲ್ಲ. ಹಾಗಿರುವಾಗ ಎಡಪಕ್ಷಗಳೇಕೆ ಸ್ಪರ್ಧೆಗೆ ಒತ್ತಾಯಿಸುತ್ತಿವೆ?

ಅಬ್ದುಲ್ ಕಲಾಂ ಆರ್‌ಎಸ್‌ಎಸ್ ಅಥವಾ ಬಿಜೆಪಿಯ ಸದಸ್ಯರಾಗಿರಲಿಕ್ಕಿಲ್ಲ. ಆದರೆ ಕಲಾಂರವನ್ನು ತನ್ನ ವ್ಯಕ್ತಿಯಾಗಿಸಲು ಆರ್‌ಎಸ್‌ಎಸ್ ಸರ್ವಪ್ರಯತ್ನ ಮಾಡಿದೆ. ಮಾರ್ಚ್ 12, 2000 ದ ವೇಳೆಗೆ ಆರ್‌ಎಸ್‌ಎಸ್ ನ ಮುಖವಾಣಿ 'ಪಾಂಚಜನ್ಯ'ದ ಸಂಪಾದಕ 'ದಿ ಪಯನೀರ್' ಪತ್ರಿಕೆಯಲ್ಲಿ ಬರೆಯುತ್ತಾ 'ಅಬ್ದುಲ್ ಕಲಾಂ ಮತ್ತು ಹನೀಫುದ್ದೀನ್‌ರ ಭಾವ ಚಿತ್ರಗಳನ್ನು ಈ ದಿನಗಳಲ್ಲಿ ಆರ್‌ಎಸ್‌ಎಸ್ ಕಚೇರಿಗಳಲ್ಲಿ ಗುರುಗೋವಿಂದ್ ಸಿಂಗ್, ಶಿವಾಜಿ, ಲಚ್ಚಿತ್ ಬೋರ್ಫುಕಾನ್, ಬಿರ್ಸಾ ಮತ್ತು ಗಾಂಧೀಜಿಯ ಭಾವಚಿತ್ರಗಳೊಂದಿಗೆ ಕಾಣಬಹುದು' ಎಂದಿದ್ದರು.

ಮುಂದುವರೆದು ಅವರೆನ್ನುತ್ತಾರೆ - "ಇಲ್ಲಿರುವ ಪ್ರಶ್ನೆ ದೇಶದ ಸಂಸ್ಕೃತಿ, ವರ್ತನೆ ಮತ್ತು ಕಣ್ಣೋಟದ್ದು. ಬೇರೆ ಮಾತುಗಳಲ್ಲಿ ಹೇಳುವುದಾದರೆ ಭಾರತೀಯತ್ವ. ಇದೇ ಹಿಂದುತ್ವ ಎಂದರೆ ಇದೇ. ಇದರರ್ಥ ಮುಸ್ಲಿಮರು ಹಿಂದೂಗಳಾಗಿ ಮತಾಂತರ ಹೊಂದಬೇಕು ಅಥವಾ ಕ್ರಿಶ್ಚಿಯನ್ನರು ದೇವಸ್ಥಾನಗಳಿಗೆ ಹೋಗಬೇಕು ಎಂದಲ್ಲ. ನೀವು ಏನಾಗಬಯಸುತ್ತಿರೋ ಅದೇ ಆಗಬಹುದು. ಆದರೆ ಡಾ.ಅಬ್ದುಲ್ ಕಲಾಂ ಹಾಗೂ ಹುತಾತ್ಮ ಹನೀಫುದ್ದೀನ್‌ರ ಕಣ್ಣೋಟವನ್ನೇ ಹೊಂದಿರಬೇಕು. ಈ ಕಣ್ಣೋಟ ಆರ್‌ಎಸ್‌ಎಸ್‌ನ ಚಾಲಕ ಶಕ್ತಿ".

ಬೇರೆ ಮಾತುಗಳಲ್ಲಿ ಹೇಳುವುದಾದರೆ ಅಬ್ದುಲ್ ಕಲಾಂರ ಕಣ್ಣೋಟ ನಿಜವಾಗಿ ತನ್ನದೇ ಕಣ್ಣೋಟ ಎಂದು ಆರ್‌ಎಸ್‌ಎಸ್ ಹೇಳಿಕೊಳ್ಳುತ್ತದೆ. ಆರ್‌ಎಸ್‌ಎಸ್ ಕಣ್ಣೋಟ ಏನು ಎಂಬುದು ನಮ್ಮ ಕಣ್ಮುಂದೆಯೇ ಪ್ರಕಟಗೊಳ್ಳುತ್ತಿದೆ - ಒಂದು ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಭಾರತೀಯ ಗಣತಂತ್ರದ ಸ್ಥಾನದಲ್ಲಿ ಫ್ಯಾಸಿಸ್ಟ್ ಮಾದರಿಯ 'ಹಿಂದೂ ರಾಷ್ಟ್ರ' ಹಾಗೂ ಗುಜರಾತಿನಲ್ಲಿ ಕಂಡುಬಂದ ರಕ್ತಸಿಕ್ತ ನರಮೇಧ ಕಾರ್ಯಕ್ರಮಗಳು ಮತ್ತು ಅಭೂತಪೂರ್ವ ರಾಕ್ಷಸೀ ಕೃತ್ಯಗಳ ರೂಪದಲ್ಲಿ.

ಒಬ್ಬ ಅಭ್ಯರ್ಥಿಯಾದ ಮೇಲೆ ಕಲಾಂರವರ ಮೊದಲ ಪತ್ರಿಕಾ ಸಮ್ಮೇಳನದಲ್ಲಿ ಅವರ ಪಕ್ಕದಲ್ಲಿ ಇದ್ದದ್ದು ಬಿಜೆಪಿಯ ಪ್ರಮೋದ್ ಮಹಾಜನ್. ಕಲಾಂ ಮೂಲತಃ ತನ್ನ ಅಭ್ಯರ್ಥಿ ಎಂದು ಹೇಳಿಕೊಳ್ಳುವ ಮುಲಾಯಂಸಿಂಗ್ ರಂತವರನ್ನಾಗಲೀ, ವಿನೀತರಾಗಿ ಅವರಿಗೆ ಬೆಂಬಲ ಪ್ರಕಟಿಸಿದ ಕಾಂಗ್ರೆಸ್ ಮುಖಂಡರನ್ನಾಗಲೀ ಕಲಾಂ ಬಳಿ ಸುಳಿಯಲೂ ಬಿಟ್ಟಿಲ್ಲ. ಕಲಾಂರವರು ಕೂಡಾ ಇದುವರೆಗೆ ತಾನು ಎನ್‌ಡಿಎ, ಸಮಾಜವಾದಿ ಪಕ್ಷ ಹಾಗೂ ಕಾಂಗ್ರೆಸ್‌ನ ಒಬ್ಬ ಜಂಟಿ ಅಭ್ಯರ್ಥಿಯೆಂದು ಪ್ರಕಟಿಸಿಲ್ಲ. ಬದಲಿಗೆ ಅವರು ತನ್ನ ಹಲವು ಸಂದರ್ಶನಗಳಲ್ಲಿ ತನ್ನನ್ನು ಅಭ್ಯರ್ಥಿಯನ್ನಾಗಿ ನೇಮಿಸಿದ್ದಕ್ಕೆ ಎನ್‌ಡಿಎಗೆ ಕೃತಜ್ಞತೆ ಸಲ್ಲಿಸಿದ್ದಾರೆ.

ಆದ್ದರಿಂದ ಎನ್‌ಡಿಎ/ ಬಿಜೆಪಿ ಮತ್ತು ಕಲಾಂ ಇಬ್ಬರೂ ಈ ಉಮೇದುವಾರಿಕೆಯ ಹೂರಣ ಮತ್ತು ರಾಜಕೀಯ ಸ್ವರೂಪವನ್ನು ದೃಢಪಡಿಸಿದ್ದಾರೆ.



ಜನರ ನಡುವಿನಿಂ...

ಶ್ರೀನಿವಾಸರನ್ನು ಕೊಲೆಗೈದ ಹಿಂದು ಯುವ ಸೇನೆ

ಪುಟ 3 ರಿಂದ

ಮನ ಗೆಲ್ಲಲಾಗುತ್ತಿಲ್ಲ. ಚುನಾವಣೆಯಲ್ಲಿ ಸೋಲಿನ ಸರಮಾಲೆ ಧರಿಸುತ್ತಿದ್ದು, ಈಗ ಹತಾಶೆಯ ಅಂಚಿನಲ್ಲಿದ್ದಾರೆ. ಇಂತಹ ಸಂದರ್ಭದಲ್ಲಿ ಎಂತಹ ಹೀನ ಕೃತ್ಯಕ್ಕೂ ಹೇಸರು. ಅದರ ಒಂದು ಭಾಗವೆ ಪ್ರಗತಿಪರ ವ್ಯಕ್ತಿಗಳನ್ನು ದೈಹಿಕವಾಗಿ ಇಲ್ಲವಾಗಿಸುವುದು. ತಮ್ಮ ಕೋಮುವಾದಿ ಅಜೆಂಡಾಗಳಿಗೆ ಅಡ್ಡವಾಗಿದ್ದ ಶ್ರೀನಿವಾಸ್ ರನ್ನು ಮುಗಿಸಲು ಹಲವ ದಿನಗಳಿಂದಲೇ ಈ ಪಡೆ ಯೋಜನೆ ರೂಪಿಸಿತ್ತು ಎಂಬುದು ಈಗ ಬಯಲಾಗಿದೆ.



ದಕ್ಷಿಣ ಕನ್ನಡ ಜಿಲ್ಲೆಯಲ್ಲೇ ನಿರುದ್ಯೋಗಿಗಳ ಗೂಂಡಾ ಪಡೆಯೆಂದು ಹೆಸರುವಾಸಿಯಾಗಿರುವ ಹಿಂದೂ ಯುವ ಸೇನೆಯ ಬಜಾಲ್ ಪ್ರದೇಶದ ಮುಖಂಡ ಲೋಕೇಶ, ಆರೋಪಿಗಳಾದ ಸ್ಥಳೀಯ ಭವಾನಿ ಶಂಕರ್, ಜಗ್ಗ ಯಾನೆ ಜಗದೀಶ, ತಾರಾಯಿ ಸುರೇಶ ಹಾಗೂ ಮಂಜೇಶ್ವರದ ಸುರೇಶ ಜೊತೆಗೂಡಿ ಕೊಲೆ ಸಂಚು ನಡೆಸಿದ್ದಾರೆ. ಸದಾ ಜನರ ಮಧ್ಯೆ ಇರುತ್ತಿದ್ದ ಶ್ರೀನಿವಾಸ್‌ರನ್ನು ಮುಗಿಸಲು ಬೆಳಗಿನ ಸಮಯವೇ ಸೂಕ್ತವೆಂದು ಈ ಗೂಂಡಾ ಪಡೆ ನಿರ್ಧರಿಸಿದೆ. ಇದಕ್ಕಾಗಿ ಎರಡು ದಿನಗಳಿಂದಲೂ ಆ ಸ್ಥಳದಲ್ಲಿ ಕಾದು ಹೊಂಚುಹಾಕಿದ್ದಾರೆ.

ತನ್ನ ಕಾರ್ಖಾನೆಯ ಸಹೋದ್ಯೋಗಿಯೊಬ್ಬರಿಗೆ ರಕ್ತದಾನ ಮಾಡಲೆಂದು ಜೂನ್ 24 ರ ಬೆಳಿಗ್ಗೆ 7.30 ಕ್ಕೆ ಮನೆ ಬಿಟ್ಟು ಸ್ವಲ್ಪದೂರ ಸಾಗಿದ ಮೇಲೆ ಮರೆಯಲ್ಲಿ ಹೊಂಚು ಹಾಕಿ ಕುಳಿತಿದ್ದ ಈ ನಾಲ್ಕು ಗೂಂಡಾಗಳು ಮೂರು ತಲವಾರು ಹಾಗೂ ಚಾಕುವಿನಿಂದ 29 ಬಾರಿ ಇರಿದು ಕೊಲೆ ಮಾಡಿ ಪರಾರಿಯಾಗಿದ್ದಾರೆ.

ಕೊಲೆಗಡುಕರ ಬಂಧನ

ಕೊಲೆಯ ಸಂಚು ರೂಪಿಸಿದ ಕುಡ್ತಕ್ಕದ ಹಿಂದು ಯುವ ಸೇನೆಯ ಲೋಕೇಶ್ ತಾನು ನಿರಪರಾಧಿ ಎಂದು ಸಾಧಿಸಲು ಘಟನೆ ನಡೆಯುವ ನಾಲ್ಕು ದಿನ ಮುಂಚಿತವಾಗಿ ಜಿಲ್ಲಾ ವೆನ್‌ಲಾಕ್ ಸರಕಾರಿ ಆಸ್ಪತ್ರೆಯಲ್ಲಿ ದಾಖಲಾಗಿದ್ದ. ಈತ ಈ ಕೊಲೆ ನಡೆಸಲು ಹತ್ತು ಸಾವಿರ ರೂಗಳಿಗೆ ತನ್ನ ಸಹಚರರಿಗೆ ಸುಪಾರಿ ನೀಡಿದ್ದ.

ಕೊಲೆ ನಡೆದ ತಕ್ಷಣ ಡಿವೈಎಫ್‌ಐ ಸಂಘಟನೆ ಇವರ ಮೇಲೆ ದೂರು ನೀಡಿತ್ತು. ಇದರ ಆಧಾರದಲ್ಲಿ ಜಿಲ್ಲಾ ಪೋಲಿಸರು ಜೂನ್ 26 ರಂದು ಮಂಜೇಶ್ವರದ ಹರಿಬೈಲ್ ಸಮೀಪದ ಪಾಳು ಬಿದ್ದ ಮನೆಯೊಂದರಲ್ಲಿ ಅಡಗಿದ್ದ ಆರೋಪಿಗಳನ್ನು ಬಂಧಿಸಿದ್ದಾರೆ. ಬಂಧಿತರು ತಾವೇ ಕೊಲೆ ಮಾಡಿದ್ದಾಗಿ ಹಾಗೂ ತಾವು ಹಿಂದೂ ಯುವ ಸೇನೆಯ ಕಾರ್ಯಕರ್ತರೆಂದೂ ಒಪ್ಪಿಕೊಂಡಿದ್ದಾರೆ.

ನ್ಯಾಯಾಂಗ ಬಂಧನದಲ್ಲಿಡಬೇಕು

ಕೊಲೆ ಆರೋಪಿಗಳಿಗೆ ಜಿಲ್ಲೆಯ ಪ್ರಭಾವಿ ರಾಜಕೀಯ ಆಶ್ರಯವಿದ್ದು ಹಾಗೂ ಇವರ ಇಡೀ ಸಂಘಟನೆ ಗೂಂಡಾಪಡೆಯೆಂದು ಕುಖ್ಯಾತಿಗಳಿಸಿರುವುದರಿಂದ ಇವರನ್ನು ಜಾಮೀನಿನ ಮೇಲೆ ಬಿಡದೆ ನ್ಯಾಯಾಂಗ ಬಂಧನದಲ್ಲಿರಿಸಬೇಕಾಗಿದೆ. ಇಲ್ಲವೇ ಇವರು ಸಾಕ್ಷಿಗಳನ್ನು ಇಲ್ಲವಾಗಿಸಿ ಇಡೀ ಪ್ರದೇಶದಲ್ಲಿ ಅಶಾಂತಿ ಸೃಷ್ಟಿಸಿ ಮತ್ತಷ್ಟು ಕೊಲೆ ಸಂಚು ರೂಪಿಸುವ ಸಾಧ್ಯತೆ ಇದೆ.

ಸಂಗಾತಿ ಶ್ರೀನಿವಾಸ್‌ಗೆ ಲಾಲ್ ಸಲಾಂ

ಸಂಗಾತಿ ಶ್ರೀನಿವಾಸ್‌ರ ದಾರುಣ ಹತ್ಯೆಯ ಸುದ್ದಿ ತಿಳಿಯುತ್ತಿದ್ದಂತೆ ಅವರ ಹುಟ್ಟೂರಾದ ಬಜಾಲ್ ಪಕ್ಕಲಡ್ಕ ನಿವಾಸಿಗಳು ಆಘಾತಕ್ಕೊಳಗಾದರು. ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡಿ ಶೋಕಸಾಗರದಲ್ಲಿ ಮುಳುಗಿದರು. ಶವಪರೀಕ್ಷೆಗೆಂದು ಮಂಗಳೂರಿಗೆ ಹೋದ ತಮ್ಮ ಪ್ರೀತಿಯ, ನಲ್ಮೆಯ ಸಂಗಾತಿಯ ಶವವು ಮರಳಿ ಬರುವುದನ್ನು ಕಾಯುತ್ತಾ ಶೋಕಿಸತೊಡಗಿದರು. ಮುಂದಿನ ಭಾನುವಾರದಂದು DYFI ಯು ಪ್ರದರ್ಶಿಸಲು ಯೋಜಿಸಿದ್ದ 'ಭಗತ್‌ಸಿಂಗ್' ಚಲನಚಿತ್ರವನ್ನು ಎಲ್ಲರಿಗೂ ತೋರಿಸಲು ಉತ್ಸಾಹ ಚಿಲುಮೆಯಂತಾಗಿದ್ದ ಕಾಂ.ಶ್ರೀನಿವಾಸ್ ರವರು ಭಗತ್‌ಸಿಂಗ್‌ನ ವೀರ ಹುತಾತ್ಮರ ಪರಂಪರೆಗೆ ಮತ್ತೊಂದು ಕೊಂಡಿಯಾದಾನೆಂಬುದನ್ನು ಯಾರೂ ನಿರೀಕ್ಷಿಸಿರಲಿಲ್ಲ.

ಮಂಗಳೂರಿನಲ್ಲಿ ಮರಣೋತ್ತರ ಪರೀಕ್ಷೆ ಮುಗಿದು ಸಂಜೆ 4ಕ್ಕೆ ಸರಿಯಾಗಿ ಮನೆಯತ್ತ ಕಾಂ/ ಶ್ರೀನಿವಾಸ್‌ರ ಶವದ ಮೆರವಣಿಗೆ ಹೊರಟಿತು. DYFI ನ ಶ್ವೇತ ಪತಾಕೆ ಮತ್ತು ಕಪ್ಪುಪತಾಕೆಯನ್ನು ಹೊತ್ತುಕೊಂಡ ಆಂಬ್ಯುಲೆನ್ಸ್ ಹಿಂದೆ DYFI ಹಿತೈಷಿಗಳ ವಾಹನಗಳ ಸಾಲು. ವಾಹನ ಪಕ್ಕಲಡ್ಕ ತಲುಪಿದಾಗ ಇಡೀ ಊರಿಗೆ ಊರೇ ನೆರೆದಿತ್ತು. ಯುವಕರು ಯುವತಿಯರು ಮಾತ್ರವಲ್ಲದೆ ವೃದ್ಧರೂ ಕೂಡಾ ಕಣ್ಣೀರ ಕೋಡಿ ಹರಿಸುತ್ತಾ ನೆರೆದಿದ್ದರು. ಮುಸ್ಲಿಂ ಮಹಿಳೆಯರೂ ಅಪಾರ ಸಂಖ್ಯೆಯಲ್ಲಿ ನೆರೆದಿದ್ದರು. ತಾನು ಅಪಾರವಾಗಿ ಪ್ರೀತಿಸುತ್ತಿದ್ದ ತನ್ನ ಪ್ರತಿಭೆಯನ್ನು ಧಾರೆಯೆರೆದು ಪೋಷಿಸಿದ ಪಕ್ಕಲಡ್ಕ ಯುವಕ ಮಂಡಲದ ಆವರಣದಲ್ಲಿ ಶವವನ್ನು ಸಾರ್ವಜನಿಕ ದರ್ಶನಕ್ಕೆ ಇಟ್ಟಾಗ ನೂರಾರು ಮಂದಿ ಕಕ್ಕಿರಿದು ಅಂತಿಮದರ್ಶನ ಪಡೆದರು. ಆ ಬಳಿಕ ಶವವನ್ನು ಸಂಗಾತಿಯ ಮನೆಗೆ ಕೊಂಡೊಯ್ಯಲಾಯಿತು. ನೂಕುನುಗ್ಗಲಿನಲ್ಲಿ ಕಾಲಿಡಲೂ ಸಾಧ್ಯವಿಲ್ಲದ ಪರಿಸ್ಥಿತಿಯಲ್ಲಿ ಮನೆಗೆ ಶವವನ್ನು ತಂದಾಗ ಹೆತ್ತಾಕೆಯ ಮತ್ತು ಮನೆಯವರ ಆಕ್ರಂದನ ಎಂತಹ ಕ್ರೂರಿಗಳ ಮನಸ್ಸನ್ನೂ ಕರಗಿಸುವಂತಿತ್ತು. ಮನೆಯ ಮತ್ತು ಊರಿನ ಬಾಂಧವರು ತಮ್ಮ ನೆಚ್ಚಿನ ಶೀನಣ್ಣನಿಗೆ ಅಂತಿಮ ವಿದಾಯ ಕೋರಿದರು. DYFI ಮುಂದಾಳುಗಳು ಕೆಂಪು ನಕ್ಷತ್ರಾಂಕಿತ ಶ್ವೇತ ಪತಾಕೆಯನ್ನು ಸಂಗಾತಿಗೆ ಹೊದಿಸಿದರು. ಮನೆಯಿಂದ ಸ್ಮಶಾನಕ್ಕೆ ತೆರೆದ ವಾಹನದಲ್ಲಿ ಶವವು ಹೊರಟು ನಿಂತಾಗ ಗದ್ಗದ ಕಂಠಗಳಲ್ಲಿ 'ಸಂಗಾತಿ ಶ್ರೀನಿವಾಸ್‌ಗೆ ಲಾಲ್ ಸಲಾಂ' ಎಂಬ ಘೋಷಣೆಗಳು ಮುಗಿಲು ಮುಟ್ಟಿದವು. ಮಳೆಯ ವಾತಾವರಣವಿದ್ದರೂ ನೂರಾರು ಸಂಖ್ಯೆಯಲ್ಲಿ ಸ್ನೇಹಿತರು, ಹಿತೈಷಿಗಳು, ಸಂಗಾತಿಗಳು ಶವ ವಾಹನದ ಹಿಂದೆ ಹೆಜ್ಜೆಯಿಟ್ಟರು. ಸುಮಾರು 5 ಕಿ.ಮೀ.ನಷ್ಟು ನಡೆದ ಶವ ಮೆರವಣಿಗೆಯ ಉದ್ದಕ್ಕೂ ಎರಡೂ ಬದಿಯಲ್ಲಿ ಕಿಕ್ಕಿರಿದು ನೆರೆದ ನೂರಾರು ಮಂದಿ ಶ್ರದ್ಧಾಂಜಲಿ ಅರ್ಪಿಸಿದರು. ದಾರಿಯುದ್ದಕ್ಕೂ ಅಲ್ಲಲ್ಲಿ ಜನರು ತಡೆದು ನಿಲ್ಲಿಸಿ ಶ್ರದ್ಧಾಂಜಲಿ ಅರ್ಪಿಸುತ್ತಿದ್ದ ಕಾರಣ ಸ್ಮಶಾನ ತಲುಪಲು ಬಹಳಷ್ಟು ವಿಳಂಬವಾಯಿತು.

ಸ್ಮಶಾನ ತಲುಪುತ್ತಿದ್ದಂತೆ ಆದಾಗಲೇ ನೂರಾರು ಮಂದಿ ಗುಂಪಾಗಿ ನೆರೆದಿದ್ದರು. ನೆರೆದ ಸಹಸ್ರಾರು ಮಂದಿಯ ಸಮ್ಮುಖದಲ್ಲಿ 'ಕಾಂ/ ಶ್ರೀನಿವಾಸ್ ಚಿರಾಯುವಾಗಲಿ' 'ಕಾಂ/ ಶ್ರೀನಿವಾಸ್ ಲಾಲ್ ಸಲಾಂ' ಎಂಬ ಘೋಷಣೆಗಳು ಮೊಳಗುತ್ತಿರುವಂತೆ ಚಿತೆಗೆ ಅಗ್ನಿ ಸ್ಪರ್ಶ ಮಾಡಲಾಯಿತು. DYFIಯ ಶ್ವೇತಪತಾಕೆಯು ಮತ್ತಷ್ಟು ಕೆಂಪಾಗಿ ಹಾರಾಡುತ್ತಿತ್ತು. ಭಗತ್‌ಸಿಂಗ್‌ನ ಪರಂಪರೆಗೆ ಸೇರಿಕೊಂಡ ಶ್ರೀನಿವಾಸ್ ಈಗ ಮರೆಯಲಾಗದ ನೆನಪು ಮಾತ್ರ.

ಜೂನ್- 30 ಹತ್ಯೆ ನಡೆದ ಸ್ಥಳದಲ್ಲೇ ಬೃಹತ್ ಪ್ರತಿಭಟನಾ ಸಭೆ ಹುತಾತ್ಮನ ಕುಟುಂಬಕ್ಕೆ ನಿಧಿ ಸಂಗ್ರಹಕ್ಕೆ ನಿರ್ಧಾರ

ಪಕ್ಕಲಡ್ಕ ಜನರ ಪ್ರೀತಿಯ ಮಗ, ಜನಾನುರಾಗಿ, ಕಲೆ, ಕ್ರೀಡಾ, ಸಾಹಿತ್ಯ ಪ್ರತಿಭೆ, ಸದಾ ಪರರಿಗಾಗಿ ಮಿಡಿಯುತ್ತಿದ್ದ ಹೃದಯ, ಪ್ರಾಮಾಣಿಕ ಕೆಲಸಗಾರ, ಚತುರ ಸಂಘಟಕ, ಅನ್ಯಾಯ, ಆಕ್ರಮಣ, ದೌರ್ಜನ್ಯಗಳ ವಿರುದ್ಧ ಸದಾ ಧೈರ್ಯದಿಂದ ಮುನ್ನುಗ್ಗುತ್ತಿದ್ದ ಬಜಾಲ್ ಪ್ರದೇಶದ ನೂರಾರು ಡಿ.ವೈ.ಎಫ್.ಐ ಕಾರ್ಯಕರ್ತರ ಹೃದಯಗಳನ್ನು ಪ್ರೀತಿಯಿಂದ ಗೆದ್ದಿದ್ದ, ಅವರೆಲ್ಲರಿಗೂ ಸದಾ ಬೆನ್ನೆಲುಬಾಗಿ ಬೆಂಗಾವಲಾಗಿ ಇರುತ್ತಿದ್ದ ಸಂಗಾತಿ ಶ್ರೀನಿವಾಸ್ ಇನ್ನಿಲ್ಲವೆಂದುಕೊಳ್ಳಲು ಪಕ್ಕಲಡ್ಕ ಬಜಾಲ್ ಪ್ರದೇಶದ ಜನ, ಯುವಕರು, ಸಿದ್ದರಿಲ್ಲ.



ಶ್ರೀನಿವಾಸನ ತಾಯಿ ಮತ್ತು ಅಕ್ಕ

ಸಂಗಾತಿ ಶ್ರೀನಿವಾಸ್ ಸತ್ತಿಲ್ಲ ಅವರು ಸದಾ ಸಮ್ಮೊಂದಿಗಿದ್ದಾರೆ. ಅವರು ಸದಾ ನಮ್ಮೊಂದಿಗೆ ಇರುತ್ತಾರೆ. ಅದನ್ನು ನೋಡಲು ಜೂನ್-30ಕ್ಕೆ ಸಂಜೆ ಪಕ್ಕಲಡ್ಕಕ್ಕೆ ಬನ್ನಿ ಎಂದರು ನೂರಾರು ಉತ್ಸಾಹಿ ಯುವಕರು. ಅವರ ವಿಶ್ವಾಸ ಕುಗ್ಗಿಲ್ಲ ಬಲಗೊಂಡಿದೆ. ಅವರು ನಿರಾಶರಾಗಿಲ್ಲ.. ಆಶಾವಾದಿಗಳಾಗಿದ್ದಾರೆ. ಬಡತನದ ಬೇಗೆಯಲ್ಲಿ ನಿಂತಿರುವ ಸಂಗಾತಿ ಶ್ರೀನಿವಾಸ್ ಕುಟುಂಬವನ್ನೇ ನಿರ್ವಹಿಸಲು ಆಧಾರಕಲ್ಪಿಸುವ ಹೊಣೆ ಹೊತ್ತಿದ್ದಾರೆ. ಹಿಂದೂ ಯುವ ಸೇನೆ, ಬಜರಂಗದಳಗಳ ದೇಶ ದ್ರೋಹಿ ಕೃತ್ಯಗಳಿಗೆ ಸಮರ್ಥ ಉತ್ತರ ನೀಡಲು ಮುಂದಾಗಿದ್ದಾರೆ. ಅದಕ್ಕಾಗಿಯೇ ನೂರಾರು ಸಾವಿರಾರು ಯುವಕರು ಪ್ರತಿಭಟನಾ ಸಭೆಯನ್ನು ನಡೆಸಿ ದೇಶದ್ರೋಹಿಗಳಿಗೆ, ಕೋಮುವಾದಕ್ಕೆ ಧಿಕ್ಕಾರ ಹೇಳಿದರು.

ಶ್ರೀನಿವಾಸ್ ಬಜಾಲ್‌ರ ಕಗ್ಗೊಲೆಯನ್ನು ಖಂಡಿಸಿ ಜುಲೈ 30 ರಂದು ಭಾರಿ ಪ್ರತಿಭಟನಾ ಸಭೆ ಹತ್ಯೆ ನಡೆದ ಬಜಾಲು ಪ್ರದೇಶಲ್ಲೇ ಜರುಗಿತು. ಪಡೀಲು ಮತ್ತು ಜಪ್ಪಿನಮೊಗರು ಪ್ರದೇಶಗಳಿಂದ ಪಾದಯಾತ್ರೆಯಲ್ಲಿ ಬಂದ ಸಾವಿರಾರು ಜನತೆ ಬಹಿರಂಗಸಭೆಯ ಸ್ಥಳಕ್ಕೆ ತಲುಪುವಾಗ ಎರಡು ಸಾವಿರದಷ್ಟಾಗಿದ್ದರು. ಇದರಲ್ಲಿ ಯುವಜನ, ಅದರಲ್ಲೂ ಮಹಿಳೆಯರು ಅಪಾರ ಸಂಖ್ಯೆಯಲ್ಲಿ ನೆರೆದಿದ್ದರು. ಕೊಲೆಗಡುಕರ, ಕೋಮುವಾದಿ ಮಾಫಿಯಾ ಗೂಂಡಾಗಳ ವಿರುದ್ಧ ವ್ಯಾಪಕ ಘೋಷಣೆಯನ್ನು ಕೂಗುತ್ತಾ, ಹಿಂದೂ ಯುವಸೇನೆಗೆ ಸವಾಲು ಹಾಕಿದರು.

ಈ ಪ್ರತಿಭಟನಾ ಸಭೆಯಲ್ಲಿ ಡಿವೈಎಫ್‌ಐ ನ ರಾಜ್ಯ ಉಪಾಧ್ಯಕ್ಷರಾದ ಎಸ್.ವೈ.ಗುರುಶಾಂತ್, ಕಾಸರಗೋಡು ಕಾರ್ಯದರ್ಶಿ ಜಯಚಂದ್ರನ್, ಜನತಾದಳ(ಎಸ್)ನ ಐನಾಸ್ ಡಿಸೋಜ, ಸಿಪಿಐ(ಎಂ)ನ ನಾಯಕರಾದ ಕೆ.ಆರ್.ಶ್ರೀಯಾ, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಉಪಾಧ್ಯಕ್ಷೆ ಎಸ್.ಸತ್ಯಾ, ಲೇಖಕ, ಕೋಮುವಾದಿ ವಿರೋಧಿ ವೇದಿಕೆಯ ಫಣಿರಾಜ್, ಯಾದವಶೆಟ್ಟಿ ಮುಂತಾದವರು ಮಾತನಾಡಿದರು. ಈ ಹತ್ಯೆಯನ್ನು ಉಗ್ರವಾಗಿ ಖಂಡಿಸಲಾಯಿತಲ್ಲದೆ ಕೋಮುವಾದಿ ಕೊಲೆಗಡುಕರ ವಿರುದ್ಧ ಹೋರಾಟವು ಪಣತೊಟ್ಟರು. ಹುತಾತ್ಮ ಶ್ರೀನಿವಾಸರ ಕುಟುಂಬಕ್ಕೆ ನೆರವು ನೀಡಲು ಹಣ ಸಂಗ್ರಹಿಸಲು ನಿರ್ಧರಿಸಲಾಯಿತು. ಈ ಸಭೆಗೆ ಮುನ್ನ ಮಂಗಳೂರಿನಾದ್ಯಂತ ವ್ಯಾಪಕ ಪ್ರಚಾರ ಕೈಗೊಳ್ಳಲಾಗಿತ್ತು.

ಹತ್ಯೆ ಖಂಡಿಸಿ ರಾಜ್ಯಾದ್ಯಂತ ಭಾರಿ ಪ್ರತಿಭಟನೆ

ಕಾ। ಶ್ರೀನಿವಾಸ್ ಹತ್ಯೆಯ ಸುದ್ದಿ ಬೆಂಗಳೂರನ್ನು ತಲುಪುತ್ತಿದ್ದಂತೆ ದಿಗ್ಭ್ರಾಂತರಾದ ಡಿ.ವೈ.ಎಫ್.ಐ - ಜೆ.ಎಂ.ಎಸ್. ಮತ್ತು ಎಸ್.ಎಫ್.ಐ ಸಂಗಾತಿಗಳು ತಕ್ಷಣವೇ ಡಿ.ವೈ.ಎಫ್.ಐ. ರಾಜ್ಯ ಕಛೇರಿಯಲ್ಲಿ ಸಭೆ ಸೇರಿ ಎರಡು ನಿಮಿಷ ಶ್ರದ್ಧಾಂಜಲಿ ಸಲ್ಲಿಸಿದರು. ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಈ ಹತ್ಯೆಯನ್ನು ಖಂಡಿಸಿ ಪ್ರತಿಭಟನಾ ಪ್ರದರ್ಶನ ನಡೆಸಿದ ನೂರಾರು ಡಿವೈಎಫ್‌ಐ, ಜೆಎಂಎಸ್-ಎಸ್‌ಎಫ್‌ಐ ಕಾರ್ಯಕರ್ತರುಗಳು ಸುಮಾರು 25 ನಿಮಿಷಗಳ ಕಾಲ ರಸ್ತೆ ತಡೆ ಚಳುವಳಿ ನಡೆಸುವುದರ ಮೂಲಕ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಮಳವಳ್ಳಿಯಲ್ಲಿ ಸುಮಾರು 200 ಜನರ ಪ್ರತಿಭಟನಾ ಮೆರವಣಿಗೆ ರಸ್ತೆ ತಡೆ, ಮಾನವ ಸರಪಳಿ ನಡೆಸಲಾಯಿತು.

ತುಮಕೂರಿನಲ್ಲಿ ಸುಮಾರು 100 ಜನರಷ್ಟಿದ್ದ ಎಸ್.ಎಫ್.ಐ-ಡಿ.ವೈ.ಎಫ್.ಐ ಕಾರ್ಯಕರ್ತರು ಟೌನ್‌ಹಾಲ್‌ನಿಂದ ಜಿಲ್ಲಾಧಿಕಾರಿ ಕಛೇರಿಯವರೆಗೂ ಪ್ರತಿಭಟನಾ ಮೆರವಣಿಗೆ ಮತ್ತು ಪ್ರದರ್ಶನ ನಡೆಸಿ ಮನವಿ ಸಲ್ಲಿಸಿದರು.

ಇದಲ್ಲದೆ, ಕೋಲಾರ, ಹಾಸನ, ಗುಲ್ಬರ್ಗಾ, ಗದಗ, ಉತ್ತರ ಕನ್ನಡ, ಚಿಕ್ಕ ಮಗಳೂರು, ಕುಂದಾಪುರ, ಕೊಡಗು, ದೊಡ್ಡಬಳ್ಳಾಪುರ ಮುಂತಾದ ಕಡೆಗಳಲ್ಲಿ ಶ್ರೀನಿವಾಸ್ ಹತ್ಯೆ ಖಂಡಿಸಿ ಪ್ರತಿಭಟನೆಗಳನ್ನು ನಡೆಸಿ ಮನವಿ ಸಲ್ಲಿಸಿರುವ ವರದಿಗಳು ಬಂದಿವೆ.




ಶ್ರೀನಿವಾಸನನ್ನು ಹತ್ಯೆಗೈದ ಹಿಂದು ಯುವ ಸೇನೆಯ ಕೊಲೆಗಡುಕರು

..........ಸಿಂಹ ಧ್ವನಿ ಇನ್ನಿಲ್ಲ

ಪುಟ 7 ರಿಂದ

ಸಭಾಪತಿಗಳಾದ ಬಿ.ಎಲ್. ಶಂಕರ್, ಉಪಸಭಾಪತಿಗಳಾದ ಡೇವಿಡ್ ಸಿಮೇಯೋನ್, ಮೋಹನ್ ಕೊಂಡಜ್ಜಿ, ಜನತಾದಳ(ಯು)ನ ಮುಖಂಡರಾದ ಪಿ.ಜಿ.ಆರ್.ಸಿಂಧ್ಯಾ, ವಿ.ಎಸ್. ಕೃಷ್ಣಯ್ಯರ್, ಆರ್.ವಿ.ಹರೀಶ್, ಬಿಜೆಪಿ ಶಾಸಕರಾದ ಸುರೇಶ್ ಕುಮಾರ್, ರಾಮಚಂದ್ರೇಗೌಡ, ಜಾತ್ಯಾತೀತ ಜನತಾದಳದ ರಾಜ್ಯ ಅಧ್ಯಕ್ಷರಾದ ಸಿದ್ದರಾಮಯ್ಯ, ಸಿ. ನಾರಾಯಣಸ್ವಾಮಿ, ಎಚ್.ಎನ್. ನಂಜೇಗೌಡ, ಮಾಜಿ ಸಂಸದ ಎಚ್.ಡಿ. ಕುಮಾರಸ್ವಾಮಿ, ಎಂ.ಶ್ರೀನಿವಾಸ್, ಮಾಜಿ ಶಾಸಕರಾದ ರಾಜಣ್ಣ, ಯುವಜನತಾದಳದ ಆರ್. ವಿ. ಚಕ್ರಪಾಣಿ, ಮಾಜಿ ಶಾಸಕ ವಾಟಾಳ್ ನಾಗರಾಜ್, ಸಿಪಿಐನ ಕಾಂ. ವೆಂಕಟರಾಮು, ಕಾಂ. ಎಂ.ಸಿ. ನರಸಿಂಹನ್, ಕಾಂ. ಮಹದೇವ್, ಗೋವಾ ವಿಮೋಚನಾ ಚಳುವಳಿಯ ಹೋರಾಟಗಾರ ಮುನಿಯಪ್ಪ, ಎಐಡಿಎಂಕೆ ಶಾಸಕ ಭಕ್ತವತ್ಸಲನ್, ನಿಡುಮಾಮಿಡಿ ಮಠದ ಚನ್ನಮಲ್ಲ ಸ್ವಾಮೀಜಿ, ಸಾಹಿತಿ ಡಾ। ಸಿದ್ದಲಿಂಗಯ್ಯ, ನಾಟಕಕಾರ ಸಿ.ಜಿ. ಕೃಷ್ಣಸ್ವಾಮಿ, ಚಿಂತಕ ಜಿ. ರಾಮಕೃಷ್ಣ, ಪ್ರೊ. ನಗರಿ ಬಾಬಯ್ಯ, ಸಂಯುಕ್ತ ಕರ್ನಾಟಕ ಪತ್ರಿಕೆಯ

ತಾವಿಬ್ಬರೂ ವಿದ್ಯಾರ್ಥಿ ಚಳುವಳಿಯಲ್ಲಿ ಸಮಾನಾಂತರವಾಗಿ ಪಾಲ್ಗೊಂಡ, ಪರಸ್ಪರ ಸೌಹಾರ್ದ ಬೆಂಬಲ ಪಡೆದದ್ದನ್ನು ಸ್ಮರಿಸಿದರು. ಮತ್ತೊಬ್ಬ ಪೊಲಿಟ್ ಬ್ಯೂರೋ ಸದಸ್ಯರಾದ ಎಸ್. ರಾಮಚಂದ್ರ ಪಿಳ್ಳೆಯವರು ಮಾತನಾಡಿ ಕರ್ನಾಟಕ ರಾಜ್ಯದಲ್ಲಿ ಶೋಷಿತ ಜನತೆಯ ಅಭ್ಯುದಯಕ್ಕಾಗಿ ಅವಿಶ್ರಾಂತವಾಗಿ ಶ್ರಮಿಸುತ್ತಾ ಒಬ್ಬ ಮಾದರಿ ಕಮ್ಯುನಿಸ್ಟ್ ಮುಖಂಡನಾಗಿ ಬದುಕಿದ ಸೂರಿಯವರು ರಾಜ್ಯದ ದೇಶದ ಜನಪರ ಚಳುವಳಿಗೆ ನೀಡಿದ ಕೊಡುಗೆಯನ್ನು ಸ್ಮರಿಸಿದರು. ಮತ್ತೊಬ್ಬ ಪೊಲಿಟ್‌ಬ್ಯೂರೋ ಸದಸ್ಯರು, ಸಿಐಟಿಯು ಅಖಿಲ ಭಾರತ ಪ್ರಧಾನ ಕಾರ್ಯದರ್ಶಿಯವರಾದ ಕಾಮ್ರೇಡ್ ಎಂ.ಕೆ. ಪಂಧೆಯವರು ಮಾತನಾಡಿ ಕಾರ್ಮಿಕ ಆಂದೋಲನದಲ್ಲಿ ಕಾಮ್ರೇಡ್ ಸೂರಿಯವರು ಕರ್ನಾಟಕಕ್ಕೆ ಮಾತ್ರವಲ್ಲ ಇಡೀ ರಾಷ್ಟ್ರಕ್ಕೆ ಅಪ್ರತಿಮ ಎದೆಗಾರಿಕೆಯ ಶ್ರೇಷ್ಠ ನೇತಾರರಾಗಿದ್ದರು ಎಂದು ವಿವರಿಸಿದರು. ಚಳುವಳಿಯ ಹಲವು ಸಾಧನೆಗಳ ನಡುವೆಯೂ ಅವರು ಸದಾ ಕಾಲ ಅತೃಪ್ತರೂ - ಮಹಾತ್ವಾಕಾಂಕ್ಷಿಗಳೂ ಆಗಿ ದುಡಿದರು ಎಂದು ನುಡಿದರು.


ಶ್ರದ್ಧಾಂಜಲಿ ಸಭೆಯಲ್ಲಿ ಹಿರಿಯ ನಾಯಕರಾದ ಎಂ.ಕೆ.ಪಂಧೆ, ಎಸ್.ಆರ್.ಪಿಳ್ಳೆ, ಪಿ.ರಾಮಚಂದ್ರನ್, ಬೇಬಿ, ಬಿ.ಮಾಧವ

ವ್ಯವಸ್ಥಾಪಕ ಸಂಪಾದಕರಾದ ವಿ. ಎನ್. ಸುಬ್ಬರಾವ್, ಸನತ್ ಕುಮಾರ್ ಬೆಳಗಲಿ, ಎನ್. ಗಾಯತ್ರಿ, ಗಾಯತ್ರಿದೇವಿ ಮುಂತಾದವರು ಪಾಲ್ಗೊಂಡಿದ್ದರು.

ಎಸ್‌ಎಫ್‌ಐ., ಡಿವೈಎಫ್‌ಐ, ಜನವಾದಿ ಮಹಿಳಾ ಸಂಘಟನೆ, ಸಿಐಟಿಯು, ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ, ಸಿಪಿಐ, ಎಸ್‌ಯುಸಿಐ, ಎಐಟಿಯುಸಿ, ಯುಟಿಯುಸಿ, ಟಿಯುಸಿಸಿ, ಬಿಎಂಎಸ್, ಐಎನ್‌ಟಿಯುಸಿ, ಎಐವೈಎಫ್, ಎಐಎಸ್‌ಎಫ್, ಎಐಡಿಎಸ್‌ಓ, ಎಐಡಿವೈಓ, ಸಮುದಾಯ, ಶಾಂತಿ ಸೌಹಾರ್ದ ಸಂಘಟನೆ, ನವಕರ್ನಾಟಕ, ರಾಜ್ಯದ ನೂರಾರು ಕಾರ್ಮಿಕ ಸಂಘಗಳ ಮುಖಂಡರುಗಳು ಕಾರ್ಖಾನೆಯ ಆಡಳಿತ ಮಂಡಳಿಯ ಪ್ರತಿನಿಧಿಗಳು, ಸೂರಿಯವರ ಅಸಂಖ್ಯಾತ ಅಭಿಮಾನಿಗಳು ಅಗಲಿದ ನಾಯಕನಿಗೆ ಅಂತಿಮ ನಮನ ಸಲ್ಲಿಸಿ ಶ್ರದ್ಧಾಂಜಲಿ ಸಭೆಯಲ್ಲಿ ಪಾಲ್ಗೊಂಡರು.

ಸುಮಾರು ಮಧ್ಯಾಹ್ನ 3.00 ಗಂಟೆಯ ಹೊತ್ತಿಗೆ ಅಂತಿಮ ಯಾತ್ರೆ ಆರಂಭವಾಯಿತು. ಕಾಂ। ಸೂರಿ ಲಾಲ್ ಸಲಾಂ", "ಕಾಂ. ಸೂರಿ ಅಮರ್‌ರಹೇ", "ದುಡಿಯುವ ವರ್ಗದ ಸಿಂಹಧ್ವನಿ ಕಾಂ। ಸೂರಿಯವರಿಗೆ ಕೆಂಪು ವಂದನೆ" "ಸಮರ್ಪಿತ ಕ್ರಾಂತಿಕಾರಿ ಕಾಂ। ಸೂರಿಗೆ ವೀರವಂದನೆ" "ಸ್ವಾತಂತ್ರ್ಯ ಕ್ರಾಂತಿಯ ವೀರ ಯೋಧ ಕಾಂ। ಸೂರಿ ಲಾಲ್ ಸಲಾಂ" "ಕಾಂ। ಸೂರಿಯವರ ತೋರಿದ ದಾರಿಯಲ್ಲಿ ಮುನ್ನಡೆಯುತ್ತೇವೆ" ಎಂಬ ಘೋಷಣೆ, ಬದ್ಧತೆಯೊಂದಿಗೆ ಅಂತಿಮ ಯಾತ್ರೆ ಆರಂಭವಾದಾಗ ಪ್ರವಾಹ ತನ್ನ ದಿಕ್ಕು ಬದಲಿಸಿ ಪಕ್ಕಕ್ಕೆ ಹರಿದಂತೆ ಆಯಿತು. ಸಂಪಂಗಿ ರಾಮನಗರ, ಲಾಲ್ ಬಾಗ್ ರಸ್ತೆ, ಮಾರ್ಗವಾಗಿ ತೆರಳಿ ವಿಲ್ಸನ್ ಗಾರ್ಡನ್ ವಿದ್ಯುತ್ ಚಿತಾಗಾರಕ್ಕೆ ಪಾರ್ಥಿವ ಶರೀರವನ್ನು ಒಪ್ಪಿಸುವಾಗ ದುಃಖ ಉಮ್ಮಳಿಸಿ ಬಂದು ರೋದಿಸುವವರು, ಕುಸಿದವರು ಎಷ್ಟೋ ಮಂದಿ.

ದೂರದ ಊರಿನ ಪ್ರವಾಸದಲ್ಲಿದ್ದು ಸಮಯಕ್ಕೆ ಸರಿಯಾಗಿ ಸುದ್ದಿ ತಲುಪದೇ ತಡವಾಗಿ ಹೊರಟು ಲಾರಿ, ಬಸ್ಸು, ಟಾಕ್ಸಿಗಳಲ್ಲಿ ದೌಡಾಯಿಸಿ ಬಂದು, ಕಟ್ಟಕಡೆಯ ಗಳಿಗೆಯಲ್ಲಿ ದೊಬ್ಬಿಟ್ಟು ಅಂತಿಮ ದರ್ಶನ ಪಡೆದವರು. ಕಡೆಗೂ ತಡವಾಗಿಯೇ ಹೋಗಿ, ಅಂತಿಮ ದರ್ಶನ ಸಿಗಲಾರದೇ ಪರಿತಪಿಸುವರು.


ಮಸಣ ಭೂಮಿಯಲ್ಲಿ ಶ್ರದ್ಧಾಂಜಲಿ ಸಭೆ

ಪಕ್ಷದ ಪೊಲಿಟ್ ಬ್ಯೂರೋ ಸದಸ್ಯರಾದ ಪಿ. ರಾಮಚಂದ್ರನ್‌ರವರು ಸ್ವಾತಂತ್ರ್ಯ ಪೂರ್ವದಲ್ಲಿ ಮೈಸೂರು ಸಂಸ್ಥಾನ ಹಾಗೂ ಮದ್ರಾಸ್ ಪ್ರಾಂತ್ಯದಲ್ಲಿ

ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್. ನಾಗರಾಜ್ ಮಾತನಾಡಿ ಸೂರಿ ರಾಜ್ಯದಲ್ಲಿ ಕಾರ್ಮಿಕರನ್ನು ಶೋಷಿಸುವ ಬಂಡವಾಳಶಾಹಿ ವರ್ಗಕ್ಕೆ ಸಿಂಹಸ್ವಪ್ನವಾಗಿದ್ದರು, ಅಷ್ಟು ಮಾತ್ರವಲ್ಲ ಕಾರ್ಮಿಕ ಚಳುವಳಿಯ ಒಳಗೆ "ಸುಧಾರಣಾವಾದ - ಪರಿಷ್ಕರಣವಾದ"ದ ವಿರುದ್ಧ ಹೋರಾಟ ಹೂಡಿ ರಾಜಿ ರಹಿತವಾದ ಕ್ರಾಂತಿಕಾರಿ ಕಾರ್ಮಿಕ ಚಳುವಳಿ ಯನ್ನು ಹಾಗೂ ರಾಜ್ಯದಲ್ಲಿ ಸಿಪಿಐ(ಎಂ) ಪಕ್ಷವನ್ನು ಕಟ್ಟಿ ಬೆಳೆಸಿದರು ಎಂದು ಅವರ ಕೊಡುಗೆಯ ಮಹತ್ವವನ್ನು ವಿವರಿಸಿದರು.

ಹಿರಿಯ ಸ್ವಾತಂತ್ರ್ಯ ಹೋರಾಟಗಾರರೂ, ಗಾಂಧೀವಾದಿಗಳೂ, ಶಿಕ್ಷಣ ತಜ್ಞರೂ ಆದ ಎಚ್. ನರಸಿಂಹಯ್ಯನವರು ಮಾತನಾಡಿ 'ಕ್ವಿಟ್ ಇಂಡಿಯಾ ಚಳುವಳಿ'ಯಲ್ಲಿ ಕಾಮ್ರೇಡ್ ಸೂರಿಯವರೊಂದಿಗಿನ ತಮ್ಮ ಒಡನಾಟವನ್ನು ನೆನಪಿಸಿಕೊಂಡು ವಿದ್ಯಾರ್ಥಿ ಚಳುವಳಿಯಲ್ಲಿ ಸೂರಿಯವರು ತೋರುತ್ತಿದ್ದ ಧೀಮಂತತೆಯನ್ನು ಸ್ಮರಿಸಿದರು.

ಸಿಪಿಐ(ಎಂ) ಪಕ್ಷದ ಕೇಂದ್ರ ಸಮಿತಿ ಸದಸ್ಯರಾದ ಎಂ.ಎ.ಬೇಬಿ, ಕಾಂಗ್ರೆಸ್ ಮುಖಂಡರು, ವಿಧಾನ ಪರಿಷತ್ ಸದಸ್ಯರೂ ಆದ ವಿ. ಸುದರ್ಶನ್‌ರವರು, ಸಿಪಿಐ(ಎಂ) ತಮಿಳುನಾಡು ಕಾರ್ಯದರ್ಶಿ ಎನ್. ವರದರಾಜನ್, ಪಶ್ಚಿಮ ಬಂಗಾಳದ ಮಾಜಿ ಸಚಿವರಾದ ಪ್ರಶಾಂತ್ ಸೂರ್ ಹಾಗೂ ಸಚಿವರಾದ ಕಾಂತಿ ಗಂಗೂಲಿ ಶ್ರದ್ಧಾಂಜಲಿ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದರು. ಸಿಪಿಐ(ಎಂ) ಪಕ್ಷದ ಬೆಂಗಳೂರು ಜಿಲ್ಲಾ ಕಾರ್ಯದರ್ಶಿಯವರಾದ ಪ್ರಕಾಶ್ ಅವರು ಕಾರ್ಯಕ್ರಮವನ್ನು ನಿರೂಪಿಸಿದರು.


ಕಾಮ್ರೇಡ್ ಸೂರಿಯವರ ಅಂತಿಮಯಾತ್ರೆಯಲ್ಲಿ ಪಾಲ್ಗೊಂಡ ಜನಸಾಗರ

ಶ್ರದ್ಧಾಂಜಲಿ

ಕರ್ನಾಟಕದಲ್ಲಿ ದುಡಿವ ಜನರ ಆಂದೋಲನ ಕಟ್ಟಿದ ಹಿರಿಯ ಚೇತನ

— ಜ್ಯೋತಿ ಬಸು


ಜ್ಯೋತಿಬಸುರವರೊಂದಿಗೆ ಕೇಂದ್ರ ಸಮಿತಿ ಸಭೆಯ ಸಂದರ್ಭದಲ್ಲಿ

ಕಾಂ.ಎಸ್.ಸೂರ್ಯನಾರಾಯಣ ರಾವ್‌ರವರ ನಿಧನದ ಸುದ್ದಿಯ ಬಗ್ಗೆ ಆಘಾತ ವ್ಯಕ್ತ ಪಡಿಸುತ್ತಾ ದೇಶದ ಹಿರಿಯ ಕಮ್ಯುನಿಸ್ಟ್ ಮುತ್ಸದ್ದಿ ಹಾಗೂ ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿ ಜ್ಯೋತಿಬಸು ರವರು ಕರ್ನಾಟಕದಲ್ಲಿ ಅವರೊಬ್ಬ ಹಿರಿಯ ಕಾರ್ಮಿಕ ಮುಖಂಡರು ಎಂದಿದ್ದಾರೆ. ರಾಜ್ಯದಲ್ಲಿ ಕಮ್ಯುನಿಸ್ಟ್ ಆಂದೋಲನವನ್ನು ಕಟ್ಟುವಲ್ಲಿ ಅವರು ಸಕಾರಾತ್ಮಕ ಕೊಡುಗೆ ನೀಡಿದವರು ಎಂದು ಸ್ಮರಿಸಿಕೊಳ್ಳುತ್ತಾ ಕಾಂ. ಜ್ಯೋತಿಬಸು ಅವರ ದುಃಖ ತಪ್ತ ಕುಟುಂಬಕ್ಕೆ, ಸಂಗಾತಿಗಳಿಗೆ ಹಾಗೂ ಗೆಳೆಯರಿಗೆ ಹಾರ್ದಿಕ ಸಂತಾಪ ವ್ಯಕ್ತಪಡಿಸಿದ್ದಾರೆ.

ಅನಿಲ್ ಬಿಸ್ವಾಸ್ ಶ್ರದ್ಧಾಂಜಲಿ: ಕಾಂ. ಸೂರ್ಯನಾರಾಯಣ ರಾವ್‌ರವರ ನಿಧನದ ಬಗ್ಗೆ ದುಃಖ ವ್ಯಕ್ತಪಡಿಸುತ್ತಾ ಪಶ್ಚಿಮ ಬಂಗಾಳದ ಸಿಪಿಐ(ಎಂ) ರಾಜ್ಯ ಸಮಿತಿಯ ಕಾರ್ಯದರ್ಶಿ ಹಾಗೂ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಕಾಂ. ಅನಿಲ್ ಬಿಸ್ವಾಸ್ ಕರ್ನಾಟಕದಲ್ಲಿ ಪಕ್ಷ ಕಟ್ಟುವಲ್ಲಿ ಅವರ ಕೊಡುಗೆಗಳನ್ನು ನೆನಪಿಸಿಕೊಂಡಿದ್ದಾರೆ.

ಆಂಧ್ರ ರಾಜ್ಯ ಸಮಿತಿ ಸಂತಾಪ: ಕಾಂ. ಸೂರ್ಯನಾರಾಯಣ ರಾವ್‌ರವರ ನಿಧನ ಕರ್ನಾಟಕದ ಕಮ್ಯುನಿಸ್ಟ್ ಆಂದೋಲನಕ್ಕೆ ಒಂದು ಮಹಾನ್ ನಷ್ಟ ಎಂದು ಸಿಪಿಐ(ಎಂ) ಆಂಧ್ರಪ್ರದೇಶ ರಾಜ್ಯ ಸಮಿತಿಯ ಕಾರ್ಯದರ್ಶಿ ಕಾಂ. ಬಿ.ವಿ.ರಾಘವಲು ಹಾಗೂ ಪೊಲಿಟ್‌ಬ್ಯೂರೋ ಸದಸ್ಯರಾದ ಕಾಂ. ಕೊರಟಾಲ ಸತ್ಯನಾರಾಯಣ ಸಂತಾಪ ವ್ಯಕ್ತಪಡಿಸಿದ್ದಾರೆ.

'We must save the Party'

ಕಾಂ. ಸೂರಿಯವರ ಕೊನೆ ಮಾತು

ಜುಲೈ 1, ಸೋಮವಾರ ಮಧ್ಯಾಹ್ನ. ಹೊಸೂರು ರಸ್ತೆಯ ನಾರಾಯಣ ಹೃದಯಾಲಯದ ಹಾಸಿಗೆಯ ಮೇಲೆ ಮಲಗಿದ್ದಾರೆ ಸೂರಿಯವರು. ಉಸಿರಾಟ ಕಷ್ಟವಾಗಿದೆ. ಆಮ್ಲಜನಕ ಪೂರೈಸಲಾಗುತ್ತಿದೆ. ತಮ್ಮ ಜೀವನ ಸಂಗಾತಿ , ಮಡದಿ ಲೀಲಾ, ಮಕ್ಕಳು, ಅಳಿಯ, ಮೈಕೊ ಕಾರ್ಮಿಕ ಮುಖಂಡ ಕಾಂ. ಎಸ್.ಟಿ.ಅರಸು ಅಕ್ಕಪಕ್ಕ ಇದ್ದಾರೆ. ಕಾಂ. ಜಿ.ಸಿ.ಬಯ್ಯಾರೆಡ್ಡಿ ಎರಡು ಹೆಜ್ಜೆ ಹಿಂದೆ ನಿಂತಿದ್ದಾರೆ. ಎಲ್ಲರ ಕಣ್ಣುಗಳಲ್ಲಿ ಆತಂಕ, ದುಃಖ ಮಡುಗಟ್ಟಿದೆ. ಕಾಂ. ಸೂರಿಯವರು ಏನನ್ನೋ ಹೇಳಲು ಚಡಪಡಿಸುತ್ತಿದ್ದಾರೆ. ಆಮ್ಲಜನಕ ಪೂರೈಸುವ ಸಾಧನವನ್ನು ಪಕ್ಕಕ್ಕೆ ಸರಿಸಿದ ಕಾಂ. ಸೂರಿಯವರು ಕೈ ಸನ್ನೆ ಮಾಡಿ ಕಾಂ. ಜಿ.ಸಿ.ಬಯ್ಯಾರೆಡ್ಡಿಯವರನ್ನು ಪಕ್ಕಕ್ಕೆ ಕರೆಯುತ್ತಾರೆ. ಆತ್ಮೀಯವಾಗಿ ಅವರ ಕೈಗಳನ್ನು ಒತ್ತಿ ಹಿಡಿಯುತ್ತಾರೆ. ಬಹುಶಃ ಆ ಹೊತ್ತಿಗಾಗಲೇ ಅವರಿಗೆ ಮನದಟ್ಟಾಗಿದೆ. ತಾನು ಇನ್ನು ಹೆಚ್ಚು ಸಮಯ ಉಳಿಯಲಾರೆನೆಂದು. ಕಮ್ಯುನಿಸ್ಟ್ ಚಳುವಳಿಯ ಈ ಸಮರ್ಪಿತ ಕ್ರಾಂತಿಕಾರಿ ಕೊನೆಯದಾಗಿ ಹೇಳಿದ್ದು 'we must save the party......'

ಸಂಗಾತಿಗಳ ಹೃದಯ ಭಾರವಾಯಿತು. ಕಣ್ಣಂಚು ಒದ್ದೆಯಾಯಿತು. ನರ್ಸ್ ಬಂದು ಮಾತನಾಡಬಾರದೆಂದು ಸೂಚಿಸಿದರು. ಕಾಂ. ಸೂರಿಯವರು ಮುಂದೆ ಮಾತನಾಡಲಿಲ್ಲ. ಇದೇ ಸೂರಿಯವರ ಕೊನೆಯ ಮಾತಾಯಿತು.

ಜೂನ್ 30, ಭಾನುವಾರ ಕಾಂ. ಸೂರಿಯವರು ತಮ್ಮ ಮನೆಯಲ್ಲಿ ತಾವು ಪಕ್ಷದ ಚೆಕ್‌ಗೆ ಸಹಿ ಮಾಡಬೇಕೆಂದು ಚಡಪಡಿಸುತ್ತಿದ್ದರಂತೆ. ಅವರನ್ನು ಭೇಟಿಯಾದ ಸಂಗಾತಿಗಳ ಬಳಿ ಜೂನ್ 30 ರ 'ಪಶ್ಚಿಮ ಬಂಗಾಳ ಎಡರಂಗ ಸರ್ಕಾರದ ಬೆಳ್ಳಿಹಬ್ಬ' ಆಚರಣೆಯ ಕಾರ್ಯಕ್ರಮ ಬೆಂಗಳೂರಿನಲ್ಲಿ ಹೇಗೆ ನಡೆಯಿತು ಎಂದು ವಿಚಾರಿಸಿಕೊಂಡಿದ್ದಾರೆ. ಬಂದ ಜನಕ್ಕೆ ಎಡಿಎ ರಂಗಮಂದಿರದಲ್ಲಿ ಜಾಗ ಸಾಕಾಗಲಿಲ್ಲ ಎಂಬುದನ್ನು ಕೇಳಿಕೊಂಡಿದ್ದಾರೆ. ಸೂರಿಯವರ ಮನೆಯವರು 'ಚೆಕ್‌ಗೆ ಸಹಿ ಮಾಡಬಹುದು, ಮೊದಲು ಆರೋಗ್ಯ ಸುಧಾರಿಸಲಿ' ಎಂದರಂತೆ. ಅದಕ್ಕೆ ಕಾಂ. ಸೂರಿಯವರು ಕೊಟ್ಟ ಉತ್ತರ "ಇಲ್ಲ ಇಲ್ಲ, ಪಕ್ಷದ ಪೂರ್ಣಾವಧಿ ಕಾರ್ಯಕರ್ತರು ಕಷ್ಟದಲ್ಲಿರುತ್ತಾರೆ. ಪಕ್ಷ allowance ಕೊಡುವುದು ತಡವಾದರೆ ತುಂಬಾ ತೊಂದರೆಯಾಗುತ್ತದೆ". ಹೋರಾಟವೇ ಉಸಿರಾದ, ಕಮ್ಯುನಿಸ್ಟ್ ಪಕ್ಷವೇ ಬದುಕಾದ ಕಾಂ. ಸೂರಿಯವರಿಗೆ ಪಕ್ಷಕ್ಕಾಗಿ ಪೂರ್ಣಾವಧಿ ದುಡಿಯುವ ಸಂಗಾತಿಗಳ ಬಗೆಗೆ ಇದ್ದ ಕಾಳಜಿಯ ಸಾಕ್ಷಿಯಾಗಿ ಈ ಮಾತು ಉಳಿಯುತ್ತದೆ.

ಅಲಮತಿಯಲ್ಲಿ ಮಹತ್ವದ ಶೃಂಗಸಭೆ

ಅಮೆರಿಕನ್ ಅಧಿಪತ್ಯಕ್ಕೆ ಕಂಡುಬಂದ ವಿರೋಧದ ತುಡಿತ

ಇತ್ತೀಚೆಗೆ 16 ಏಶ್ಯನ್ ದೇಶಗಳ-ರಶ್ಯಾ, ಚೀನಾ, ಭಾರತ ಸೇರಿದಂತೆ-ಮಹತ್ವದ ಶೃಂಗಸಭೆ ನಡೆಯಿತು. ಕಝಾಕಿಸ್ತಾನದ ರಾಜಧಾನಿ ಅಲಮತಿಯಲ್ಲಿ. ಭಯೋತ್ಪಾದನೆ, ಮಾದಕದ್ರವ್ಯಗಳ ಪ್ರಸಾರ-ಇವುಗಳ ವಿರುದ್ಧ ಹೋರಾಟದಲ್ಲಿ ಪ್ರಾದೇಶಿಕ ಸಹಕಾರದ ಬಗ್ಗೆ ಮಹತ್ವದ ಚರ್ಚೆ, ನಿರ್ಣಯಗಳನ್ನು ಕೈಗೊಳ್ಳಲಾಯಿತು. ಬಹಿರಂಗವಾಗಿ ವ್ಯಕ್ತವಾಗದಿದ್ದರೂ, ಅಮೆರಿಕದ ಏಕಚಕ್ರಾಧಿಪತ್ಯಕ್ಕೆ ವಿರೋಧದ ತುಡಿತ ಶೃಂಗಸಭೆಯಲ್ಲಿ ಸ್ಪಷ್ಟವಾಗಿ ಕಂಡುಬಂತು. ಏಶ್ಯಾದ ಇನ್ನೂ ಹಲವು ದೇಶಗಳು ಭಾಗವಹಿಸಿದ್ದರೆ ಈ ಶೃಂಗಸಭೆಯ ಮಹತ್ವ ಇನ್ನಷ್ಟು ಹೆಚ್ಚುತ್ತಿತ್ತು. ಹೊರಗಿನವರ ಮಧ್ಯ ಪ್ರವೇಶಕ್ಕೆ ಅವಕಾಶ ಮಾಡಿಕೊಡದೆ ಪ್ರದೇಶದ ಸಮಸ್ಯೆಗಳನ್ನು ಸಹಕಾರದಿಂದ ಪರಿಹರಿಸುವ ತವಕ ಸಹ ಶೃಂಗಸಭೆಯಲ್ಲಿ ಕಂಡುಬಂತು. ಅಮೆರಿಕ ಮೂಗು ತೂರಿಸುವುದಕ್ಕೆ ಅವಕಾಶ ಮಾಡಿಕೊಡುತ್ತಿರುವ ಭಾರತ-ಪಾಕ್ ಸರ್ಕಾರಗಳ ಕ್ರಮಗಳ ಬಗ್ಗೆ ಈ ಹಿನ್ನೆಲೆಯಲ್ಲಿ ತೀವ್ರ ಆತಂಕ ಸಹ ಕಂಡುಬಂತು. ಬುಶ್-ಪುಟಿನ್ ಶೃಂಗಸಭೆಯಲ್ಲಿ ಆದ ಆತಂಕಕಾರಿ ಒಪ್ಪಂದಗಳ ಸಮಯದಲ್ಲೇ ಆದ ಈ ಅಲಮತಿ ಶೃಂಗಸಭೆ ಒಂದು ಉತ್ತಮ ಸಕಾರಾತ್ಮಕ ಬೆಳವಣಿಗೆ. ಎಲ್ಲಾ ಜನತೆಯ ಶಾಂತಿಯುತ ಸ್ವತಂತ್ರ ಬೆಳವಣಿಗೆಯ ದೃಷ್ಟಿಯಿಂದ. ಒಂದು ಹೊಸ ಪ್ರಾದೇಶಿಕ ಸಂಘಟನೆಯಾಗುವ ಸಾಧ್ಯತೆಯನ್ನು ಇದು ಒಳಗೊಂಡಿದೆ.

ಶರತ್‌ಚಂದ್ರ

ಕಝಾಕಿಸ್ತಾನದ (ಮಾಜಿ ಸೋವಿಯತ್ ಒಕ್ಕೂಟದ ಮಧ್ಯ ಏಶ್ಯನ್ ದೇಶಗಳಲ್ಲಿ ಒಂದು) ರಾಜಧಾನಿ ಅಲಮತಿಯಲ್ಲಿ ಒಂದು ಮಹತ್ವದ ಶೃಂಗಸಭೆ, ರಶ್ಯಾ, ಚೀನಾ ಮತ್ತು ಭಾರತ ಸೇರಿದಂತೆ 16 ಏಶ್ಯನ್ ದೇಶಗಳು ಈ ಶೃಂಗಸಭೆಯಲ್ಲಿ ಭಾಗವಹಿಸಿದ್ದವು. ಶೃಂಗಸಭೆ ಕೊನೆಯಲ್ಲಿ (ಜೂನ್ 4 ರಂದು) - 'ಭಯೋತ್ಪಾದನೆ ನಿರ್ಮೂಲನೆ ಮಾಡಲು ಮತ್ತು ನಾಗರಿಕತೆಗಳ ನಡುವೆ ಸಂವಾದಕ್ಕೆ ಘೋಷಣೆ' ಎಂಬ ಮಹತ್ವದ ಘೋಷಣೆಯನ್ನು ಅಂಗೀಕರಿಸಿತು. ಶೃಂಗಸಭೆಯ ಹೆಸರು 'ಏಶ್ಯಾದಲ್ಲಿ ಭರವಸೆ ಮೂಡಿಸುವ ಕ್ರಮಗಳು'

ಶೃಂಗಸಭೆ ಹೊರಡಿಸಿದ ಘೋಷಣೆಯಲ್ಲಿ "ನಾವು ಭಯೋತ್ಪಾದೆ ವಿರುದ್ಧದ ಹೋರಾಟದಲ್ಲಿ ಉಭಯ, ಪ್ರಾದೇಶಿಕ ಮತ್ತು ಅಂತರ್ರಾಷ್ಟ್ರೀಯ ಸಹಕಾರವನ್ನು ಬಲಪಡಿಸಲು ಬದ್ಧರಾಗಿದ್ದೇವೆ. ವಿಶ್ವಸಂಸ್ಥೆ, ಅದರ ಸಾಮಾನ್ಯ ಸಭೆ ಮತ್ತು ಭದ್ರತಾ ಸಮಿತಿ ಮುಂತಾದ ಸಂಸ್ಥೆಗಳಿಗೆ ಇದರಲ್ಲಿ ಕೇಂದ್ರ ಪಾತ್ರವಹಿಸಿ, ಈ ಸಹಕಾರಕ್ಕೆ ಚೌಕಟ್ಟು ಹಾಕಬೇಕು ಎಂದು ಒತ್ತಿ ಹೇಳಬಯಸುತ್ತೇವೆ". ಈ ಹೇಳಿಕೆಯಲ್ಲಿ ನೇರವಾಗಿ ಹೇಳದಿದ್ದರೂ, ವಿಶ್ವಸಂಸ್ಥೆ(ಎಲ್ಲಾ ದೇಶಗಳ ಪ್ರಾತಿನಿಧಿಕ ಸಂಘಟನೆಯಾಗಿ) ಮೇಲ್ವಿಚಾರಣೆಯಿಲ್ಲದೆ ಕೆಲವು ದೇಶಗಳು ಭಯೋತ್ಪಾದನೆ ವಿರುದ್ಧ ಹೋರಾಟದ ಹೆಸರಲ್ಲಿ ಎಲ್ಲಾ ಕಡೆ ಮೂಗು ತೂರಿಸುತ್ತಿವೆ. ಇದಕ್ಕೆ ಅವಕಾಶ ಕೊಡದಂತಹ ಸಹಕಾರ ಏರ್ಪಡಿಸಬೇಕು ಎಂಬ ತವಕ ಇದೆ. ಈ ಹೇಳಿಕೆಯಲ್ಲಿ ಭಯೋತ್ಪಾದನೆ ವಿರುದ್ಧ ಹೋರಾಟದ ಹೆಸರಲ್ಲಿ ತನ್ನ ಏಕಛಕ್ರಾಧಿಪತ್ಯ ಸ್ಥಾಪಿಸುವ ಅಮೆರಿಕದ ಪ್ರಯತ್ನಕ್ಕೆ ಪ್ರತಿರೋಧ ಒಡ್ಡಬೇಕು ಎಂಬ ತುಡಿತ ಘೋಷಣೆಯಲ್ಲೂ ಇಡೀ ಶೃಂಗಸಭೆಯ ಕಲಾಪಗಳಲ್ಲೂ ಕಂಡುಬಂತು.

'ಭಯೋತ್ಪಾದನೆ ಸಮರ್ಥಿಸುವ ಯಾವುದೇ ನೆಪ ಸಲ್ಲ'

ಏಶ್ಯಾದ ದೇಶಗಳ ಶೃಂಗಸಭೆಯಲ್ಲಿ ಚರ್ಚಿತವಾದ ಭಯೋತ್ಪಾದನೆಯ ಬಗ್ಗೆ ಆತಂಕ ಕಳೆದ ಸೆಪ್ಟೆಂಬರ್ 11 ರಂದು ವಿಶ್ವವಾಣಿಜ್ಯ ಕೇಂದ್ರದ ಮೇಲಿನ ಭಯೋತ್ಪಾದಕ ಕೃತ್ಯದ ನಂತರ ಆರಂಭವಾದ ಆತಂಕಕ್ಕಿಂತಲೂ ಹಳೆಯದು. ಏಶ್ಯಾದ ಹಲವು ದೇಶಗಳು - ಅದರಲ್ಲೂ ಈ ಶೃಂಗಸಭೆಯಲ್ಲಿ ಭಾಗವಹಿಸಿದ ಮೂರು ಪ್ರಮುಖ ದೇಶಗಳಿಗೆ ಇದು ಹಲವು ವರ್ಷಗಳಿಂದ ಆತಂಕಕಾರಿ ವಿಷಯವಾಗಿದೆ. ಭಾರತದಲ್ಲಿ ಕಾಶ್ಮೀರದಲ್ಲಿ ಪಾಕಿಸ್ತಾನಿ-ಬೆಂಬಲಿತ ಭಯೋತ್ಪಾದನೆ, ರಶ್ಯಾಕ್ಕೆ ಚೆಚೆನ್ಯಾದಲ್ಲಿನ ಪ್ರತ್ಯೇಕತವಾದಿ ಭಯೋತ್ಪಾದಕತೆ, ಹಲವು ಮಾಜಿ ಸೋವಿಯತ್ ಒಕ್ಕೂಟದ ಮಧ್ಯ ಏಶ್ಯಾದ ದೇಶಗಳಲ್ಲಿ ಮುಸ್ಲಿಂ ಮೂಲಭೂತವಾದಿ ಭಯೋತ್ಪಾದನೆ, ಚೀನಾದ ಪೂರ್ವ ತುರ್ಕಿಸ್ತಾನದಲ್ಲಿನ ಭಯೋತ್ಪಾದನೆ ಯಾವುದೇ ರೀತಿಯ ಭಯೋತ್ಪಾದನೆಯನ್ನು 'ತಯಾರಿಸುವ, ಸಹಾಯ ಮಾಡುವ, ಆರಂಭಿಸುವ ಮತ್ತು ಧನಸಹಾಯ ಮಾಡುವ' ಪ್ರಯತ್ನಗಳ ಮೇಲೆ ಪೂರ್ಣ ಪ್ರತಿಬಂಧ ಹಾಕಬೇಕು ಎಂದು ಘೋಷಣೆ ಹೇಳುತ್ತದೆ. 'ಭಯೋತ್ಪಾದನೆಯನ್ನು ಸಮರ್ಥಿಸುವ ಯಾವುದೇ ನೆಪ ಸಲ್ಲ' ಎಂದು ಘೋಷಣೆ ಸ್ಪಷ್ಟಪಡಿಸಿದೆ.


'ರೇಷ್ಮೆ ಹಾದಿ' ಯ ಜಂಟಿ ಕಾವಲು

ಮಾದಕ ದ್ರವ್ಯಗಳ ಪ್ರಸಾರ ಭಯೋತ್ಪಾದನೆಯ ಸಮೀಪದ ದಾಯಾದಿ. ಹೆಚ್ಚಿನ ಕಡೆ ಭಯೋತ್ಪಾದನೆಗೆ ಧನ ಬೆಂಬಲ ದೊರಕುವುದು, ಮಾದಕ ದ್ರವ್ಯಗಳ ಮಾರಾಟ, ಸಾಗಾಣಿಕೆಯಿಂದ. ಹೆಚ್ಚಿನ ಭಯೋತ್ಪಾದಕ ಗುಂಪುಗಳು ಆರ್ಥಿಕ ಸಂಪನ್ಮೂಲ ಸಂಗ್ರಹಿಸುವುದು ಇದರಿಂದ. ಕೆಲವು ದೇಶಗಳು ಇತರ ದೇಶಗಳಲ್ಲಿ ದಾಂಧಲೆ ಎಬ್ಬಿಸುವ ಭಯೋತ್ಪಾದಕ ಗುಂಪುಗಳಿಗೆ ಆರ್ಥಿಕ ಸಹಾಯ ಮಾಡುವುದು ಸಹ ಇದರ ಮೂಲಕವೇ. ಉದಾಹರಣೆಗೆ ಅಫಘಾನಿಸ್ತಾನ ದಲ್ಲಿ ತಾಲಿಬಾನ್ ಸರ್ಕಾರವಿದ್ದಾಗಲೂ, ವಿರೋಧಿ ಗುಂಪಾಗಿದ್ದಾಗಲೂ ಮಾದಕ ದ್ರವ್ಯಗಳ ವ್ಯಾಪಾರದ ಮೇಲೆ ಬಹಳ ಮಟ್ಟಿಗೆ ಅವಲಂಬಿಸಿತ್ತು. ಅಫಘಾನಿಸ್ತಾನದಲ್ಲಿ ಮಾದಕ ದ್ರವ್ಯಗಳ ಉತ್ಪಾದನೆ ಮಾಡಿ, ತನ್ನ ಜಾಲದ ಮೂಲಕ ಅದನ್ನು ಇತರ ದೇಶಗಳಿಗೆ ಸಾಗಿಸುತ್ತಿತ್ತು. ತಾಲಿಬಾನಿನ ಪತನದ ನಂತರ ಈ 'ಮಾದಕ - ಭಯೋತ್ಪಾದಕ' ಜಾಲ ಸುತ್ತಮುತ್ತಲಿನ ಮಧ್ಯಏಶ್ಯಾದ ದೇಶಗಳ ಮೇಲೆ ಇನ್ನಷ್ಟು ದುಷ್ಪರಿಣಾಮ ಬೀರಬಹುದು ಎಂಬ ತೀವ್ರ ಆತಂಕ ಇದೆ. ಈ ಬಗ್ಗೆ ಶೃಂಗಸಭೆಯ ಕಲಾಪದಲ್ಲಿ ತೀವ್ರ ಆತಂಕ ಮತ್ತು ಚರ್ಚೆ ಕಂಡುಬಂತು. ಈಗ 'ಪ್ರಾಚೀನ ರೇಷ್ಮೆ ಹಾದಿ'ಯ ಸುತ್ತಮುತ್ತ ಹರಡಿರುವ ಮಾದಕದ್ರವ್ಯ-ಶಸ್ತ್ರಾಸ್ತ್ರಗಳ ಕಳ್ಳಸಾಗಾಣಿಕೆಯ ಜಾಲವನ್ನು ನಿಗ್ರಹಿಸಲು ಜಂಟಿ ಕಾವಲು ಪಡೆ ರಚಿಸುವ ಬಗ್ಗೆ ಅನೌಪಚಾರಿಕ ಚರ್ಚೆ ಮಾಡಲಾಯಿತು. ಇದು ನಿರ್ದಿಷ್ಟ ನಿರ್ಣಯವಾಗಿ ಅಂಗೀಕೃತವಾಗಲಿಲ್ಲ.

ಹೊಸ ಪ್ರಾದೇಶಿಕ ಸಂಘಟನೆಯ ಸಾಧ್ಯತೆ

ಭಯೋತ್ಪಾದನೆ ವಿರುದ್ಧ ಘೋಷಣೆಯಲ್ಲದೆ 'ಅಲಮತಿ ಕ್ರಿಯೆ' ಎಂಬ ಇನ್ನೊಂದು ಘೋಷಣೆಯನ್ನು ಶೃಂಗಸಭೆ ಮಾಡಿತು. ಈ 'ಕ್ರಿಯೆ' ಏಶ್ಯಾದಲ್ಲಿ ಶಾಂತಿ, ಸುಭದ್ರತೆ ಮತ್ತು ಸುರಕ್ಷಿತತೆ ಏರ್ಪಡಿಸಲು' ಬಹು-ಪಕ್ಷೀಯ ಸಹಕಾರದ ಬಗ್ಗೆ ಒತ್ತು ಕೊಟ್ಟಿದೆ. ಎಲ್ಲಾ ಸಮೂಹ-ಸಂಹಾರದ ಅಣು, ಜೀವತಾಂತ್ರಿಕ ಮತ್ತು ರಾಸಾಯನಿಕ ಅಸ್ತ್ರಗಳನ್ನು ಜಗತ್ತಿನ ಎಲ್ಲೆಡೆ ನಾಶ ಮಾಡುವುದು, ಈ ಅಸ್ತ್ರಗಳ ಪ್ರಸಾರ ತಡೆಯುವುದು - ಇಲ್ಲಿ ಸೇರಿದ್ದ ದೇಶಗಳ ಉದ್ದೇಶ ಎಂದು ಸಾರಲಾಯಿತು. ಪ್ರತ್ಯೇಕತೆ ಮತ್ತು ಭಯೋತ್ಪಾದಕ ಗುಂಪುಗಳು ಧರ್ಮವನ್ನು ಒಂದು ನೆಪವಾಗಿ ಬಳಸುವುದನ್ನು ಶೃಂಗಸಭೆ ಬಲವಾಗಿ ವಿರೋಧಿಸಿತು.

ಈ ಶೃಂಗಸಭೆಯಲ್ಲಿ ಭಾಗವಹಿಸಿದ 16 ದೇಶಗಳ ಮುಖ್ಯಸ್ಥರು ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಸಭೆ ಸೇರಲಿದ್ದಾರೆ. ವಿದೇಶಮಂತ್ರಿಗಳು ಎರಡು ವರ್ಷಗಳಿಗೊಮ್ಮೆ ಸಭೆ ಸೇರಲಿದ್ದಾರೆ. ಇದರೊಂದಿಗೆ ಈ ಶೃಂಗಸಭೆ ಏಶ್ಯಾದಲ್ಲಿ ಪ್ರಾದೇಶಿಕ ಸಂಘಟನೆಯಾಗುವ ಸಾಧ್ಯತೆ ಕಂಡು ಬಂದಿದೆ. ಸದಸ್ಯತ್ವ ನಿಯಮಗಳ, ಸಂಘಟನೆಯ ನೀತಿಗಳನ್ನು ಚರ್ಚೆ ಮಾಡಿಲ್ಲವಾದರೂ ಇಂತಹ ನಿರ್ದಿಷ್ಟ ಸಾಧ್ಯತೆ ಇದೆ. ಈ ಸಂಘಟನೆ ಮೂರನೇ ಜಗತ್ತಿನ ದೇಶಗಳ ಸ್ವತಂತ್ರ ಬೆಳವಣಿಗೆ ಪಥದ ಹುಡುಕಾಟದ ಭಾಗವಾಗುವ ಸಾಧ್ಯತೆ ಇದೆ.



ಸಹಕಾರದ ಹೊಸ ಆಶಯದಲ್ಲಿ

ಈ ಶೃಂಗಸಭೆಯಲ್ಲಿ ಭಾಗವಹಿಸಿದ್ದು, ಇಂತಹ ಪ್ರಾದೇಶಿಕ ಸಂಘಟನೆಯ ಭಾಗವಾಗುವ ದೇಶಗಳೆಂದರೆ-ಅಫಘಾನಿಸ್ತಾನ, ಅಜರ್‌ಬೈಜಾನ್, ಚೀನಾ; ಈಜಿಪ್ಟ್, ಇಂಡಿಯಾ, ಇರಾನ್, ಇಸ್ರೇಲ್, ಕಝಾಕಿಸ್ತಾನ್, ಕಿರ್ಗಿಸ್ತಾನ್, ಮಂಗೋಲಿಯಾ, ಪಾಕಿಸ್ತಾನ, ಪ್ಯಾಲೆಸ್ಟೇನ್, ರಶ್ಯಾ, ತಾಜಕಿಸ್ತಾನ್, ತುರ್ಕಿ ಮತ್ತು ಉಜಬೇಕಿಸ್ತಾನ. ಪ್ಯಾಲೆಸ್ತೈನ್ ಮತ್ತು ಇತರ ಅರಬ್ ದೇಶಗಳು ಶೃಂಗಸಭೆಯಲ್ಲಿ ಇಲ್ಲದ್ದು ದೊಡ್ಡ ಕೊರತೆ. ಈ ದೇಶಗಳ ಮೇಲೆ ಭಯೋತ್ಪಾದನೆ ನಡೆಸುವ ಇಸ್ರೇಲ್ ಈ ಶೃಂಗಸಭೆಯಲ್ಲಿ ಇದ್ದದ್ದು ವಿಚಿತ್ರ. ದಕ್ಷಿಣ ಮತ್ತು ದಕ್ಷಿಣ-ಪೂರ್ವ ಏಶ್ಯಾದ ಹಲವು ದೇಶಗಳು ಭಾಗವಹಿಸದೇ ಇದ್ದದ್ದು ಈ ಶೃಂಗಸಭೆಯ ಕೊರತೆ. ಆದರೂ ಈ ಸಂಘಟನೆ ಅಮೆರಿಕನ್ ಸಾಮ್ರಾಜ್ಯಶಾಹಿಗೆ ಪ್ರತಿರೋಧ ಒಡ್ಡುವ ಪ್ರಕ್ರಿಯೆಯ ಭಾಗವಾಗಲಿದೆ. ಈ ಸಂಘಟನೆ ಮತ್ತು ಅದರ ಹಲವು ಸದಸ್ಯರು ಆಗಾಗ ಸಾಮ್ರಾಜ್ಯಶಾಹಿ ಜತೆ ಶಾಮೀಲಾಗಬಹುದು. ಒಡಂಬಡಿಕೆ ಮಾಡಬಹುದು. ಆರ್ಥಿಕ, ಮಿಲಿಟರಿ, ವಿದೇಶಿ ನೀತಿ ಕ್ಷೇತ್ರಗಳಲ್ಲಿ ಒಮ್ಮೆ ಒತ್ತಡಕ್ಕೆ ಬಲಿಯಾಗುವುದು - ಇನ್ನೊಮ್ಮೆ ವಿರೋಧಿಸುವುದು ಮಾಡಬಹುದು. ಆದರೆ ಇಂದಿನ ಸಂದರ್ಭದಲ್ಲಿ ಇಂತಹ ಶೃಂಗಸಭೆ ನಡೆಯಿತು ಎನ್ನುವುದೇ ಸಕಾರಾತ್ಮಕ ಬೆಳವಣಿಗೆ. ಈ ಪ್ರಕ್ರಿಯೆ ಏಳು-ಬೀಳುಗಳ ನಡುವೆ ಮುಂದೆ ಸಾಗುತ್ತದೆ. ಇದನ್ನು ಮುಂದೆ ಸಾಗಿಸುವುದರಲ್ಲಿ ಭಾರತ, ಚೀನಾ, ರಶ್ಯಾಗಳು ಹೆಚ್ಚಿನ ಮುತುವರ್ಜಿ ವಹಿಸಬೇಕು. ಇದರಲ್ಲಿ ಭಾರತದ ಜವಾಬ್ದಾರಿ ದೊಡ್ಡದು.

ಆತಂಕದ ಸ್ಥಿತಿ

ಅಲಮತಿಯ ಶೃಂಗಸಭೆಯಲ್ಲಿ ಭಾರತ, ಪಾಕಿಸ್ತಾನ ಯುದ್ಧ ಸಮಾನ ಸ್ಥಿತಿ ಆತಂಕಕ್ಕೆ ಕಾರಣವಾಗಿತ್ತು. ಆದರೆ ಶೃಂಗಸಭೆಯಲ್ಲಿ ದ್ವಿ-ಪಕ್ಷೀಯ ವಿಭಾಗಗಳು ಚರ್ಚಿಸಬಾರದು ಎಂಬ ನೀತಿ ಇದ್ದದ್ದರಿಂದ ಅದನ್ನು ಚರ್ಚಿಸಲಾಗಿಲ್ಲ. ಪಾಕಿಸ್ತಾನ ಅಲ್ಲಿ ಕಾಶ್ಮೀರ ಪ್ರಶ್ನೆ ಎಬ್ಬಿಸುವ ಪ್ರಯತ್ನ ನಡೆಸಿತು. ಆದರೆ ಸಫಲವಾಗಲಿಲ್ಲ. ಆದರೆ ದ್ವಿಪಕ್ಷೀಯ ಸಮಸ್ಯೆಗಳನ್ನು ಆದಷ್ಟು ಉಭಯತ್ರ ಮಾತುಕತೆಗಳಿಂದ ಬಗೆಹರಿಸಬೇಕು. ಇಲ್ಲದಿದ್ದರೆ ಅಮೆರಿಕನ್ ಸಾಮ್ರಾಜ್ಯಶಾಹಿ ಮಧ್ಯಪ್ರವೇಶಕ್ಕೆ ಆಹ್ವಾನವಿತ್ತಂತೆ ಆಗುತ್ತದೆ. ಅಂತರ್ರಾಷ್ಟ್ರೀಯ ಸಂಘಟನೆಗಳಲ್ಲಿ ಅನಗತ್ಯ ಆತಂಕಕ್ಕೆ ಕಾರಣವಾಗುತ್ತದೆ ಎಂಬುದನ್ನು ಅಲಮತಿ ಶೃಂಗಸಭೆಯ ಅನುಭವ ಸಹ ಸ್ಪಷ್ಟಪಡಿಸಿದೆ. ○

ಗುರಿ ಮುಟ್ಟದ 'ಸೈನಿಕ'ನ ಗುಂಡು

ಭಾರತ-ಪಾಕ್ ಗಡಿಯಲ್ಲಿ ಯುದ್ಧದಂತಹ ಸನ್ನಿವೇಶ ನಿರ್ಮಾಣವಾಗಿದ್ದರ ಹಿನ್ನಲೆಯಲ್ಲಿ ಬಿಡುಗಡೆಯಾಗಿರುವ ಚಿತ್ರ 'ಸೈನಿಕ' ಉನ್ಮಾದ, ಅತಿರೇಕಗಳಿಗೆ ಅಷ್ಟಾಗಿ ಒಯ್ಯದೇ ಕೆಲ ವಾಸ್ತವಾಂಶಗಳತ್ತ ಸೆಳೆಯುತ್ತದೆ. ಆದರೆ ನೈಜತೆಗೆ ಒತ್ತು ನೀಡದೇ ಸಿಕ್ಕ ಅವಕಾಶವನ್ನು ಪೂರ್ಣ ಬಳಸದೇ ಗುರಿಮುಟ್ಟದ ಗುಂಡಾಗಿದೇ ಈ ಚಿತ್ರ.


ಈ ದೇಶದ ಪ್ರಧಾನಿಗಳಾಗಲಿ, ಮಂತ್ರಿಗಳಾಗಲೀ ಅಥವಾ ಯಾವುದೇ ಮುಖ್ಯಮಂತ್ರಿಗಳಾಗಲೀ ದೇಶ ಕಾಯಲು ತಮ್ಮ ಮಕ್ಕಳನ್ನು ಸೇನೆಗೆ ಕಳಿಸಿದ್ದಾರೆಯೇ? ಉನ್ನತ ಅಧಿಕಾರಗಳಲ್ಲಿರುವ ಯಾವನಾದರೊಬ್ಬ ಐಎಎಸ್, ಐಪಿಎಸ್ ಅಧಿಕಾರಿ ತನ್ನ ಮಗನನ್ನು ದೇಶದ ಗಡಿ ಕಾಯಲು ಸೇನೆಗೆ ಕಳಿಸಿದ ಉದಾಹರಣೆ ಇದೆಯೇ? ಎರಡು ಹೊತ್ತಿನ ತುತ್ತಿಗೂ ಗತಿಯಿಲ್ಲದ ರೈತ ತನ್ನ ಬದುಕಿನ ಬವಣೆ ನೀಗಲು ತನ್ನ ಮಕ್ಕಳನ್ನು ಸೇನೆಗೆ ಸೇರಿಸುತ್ತಿದ್ದಾನೆ. ಕೈಗೆ ಹತ್ತದ ಬೇಸಾಯ, ಶಿಕ್ಷಣ ಮುಂದುವರೆಸಲು ಹಣವಿಲ್ಲ, ಜೀವನಾಧಾರಕ್ಕೆ ಉದ್ಯೋಗವಿಲ್ಲದ ರೈತನ ಮಕ್ಕಳು ಬೇರೆ ದಾರಿಕಾಣದೆ ಸೈನ್ಯಕ್ಕೆ ಜಮಾವಣೆಯಾಗಲು ಕ್ಯೂ ನಿಲ್ಲುತ್ತಿದ್ದಾರೆ. ದೇಶಕ್ಕೆ ಅನ್ನ ನೀಡುವುದೂ ಅಲ್ಲದೇ ದೇಶ ಕಾಯಲೂ ರೈತನ ಮಕ್ಕಳೇ ಬೇಕೆ? ಶಾಸ್ತ್ರಿಯವರು 'ಜೈವಾನ್, ಜೈ ಕಿಸಾನ್' ಎನ್ನುವ ಬದಲು 'ಜೈಕಿಸಾನ್' ಎಂದಿದ್ದರೆ ಸಾಕಿತ್ತೇನೋ, ಅಲ್ಲವೇ?. ಏಕೆಂದರೆ ಈಗಿರುವ ಜವಾನರಲ್ಲಿ ಬಹುತೇಕರು ರೈತರ ಮಕ್ಕಳೇ ಎಂಬುದು ಸತ್ಯ. ಇಂತಹ ವಸ್ತುವೊಂದನ್ನು ಎಳೆಯಾಗಿಟ್ಟುಕೊಂಡು ತೆರೆಗೆ ಬಂದಿರುವ ಚಿತ್ರವೇ 'ಸೈನಿಕ'.

ಬಡ ರೈತ ಕುಟುಂಬದ ಮಗನಾದ ಸೂರ್ಯ ತನ್ನ ಮನೆಯ ಬಡತನ ನೀಗುವ ಸಲುವಾಗಿ ಸೇನೆಯನ್ನು ಸೇರಿ ಕುಟುಂಬಕ್ಕೆ ಆಧಾರವಾಗಿ ನಿಲ್ಲುತ್ತಾನೆ. ರಜೆಯ ಮೇಲೆ ಊರಿಗ ಬರುವ ಸೂರ್ಯ ತಾನು ಮೆಚ್ಚಿದ ಮಾವನ ಮಗಳ ಕೈ ಹಿಡಿಯಲು ಇಚ್ಛಿಸುತ್ತಾನೆ. ಆದರೆ ಮಾವ ಸೈನಿಕನ ಬಗ್ಗೆ ಅಭಿಮಾನ ಇದ್ದರೂ ಅಕಸ್ಮಾತ್ ಯುದ್ಧದಲ್ಲಿ ಸಾವಿಗೀಡಾದರೆ ತನ್ನ ಮಗಳು ಎಳೆ ವಯಸ್ಸಿನಲ್ಲಿಯೇ ವಿಧವೆಯಾಗುವಳೆಂಬ ಭಯಕ್ಕೆ ಸೇನೆಯನ್ನು ಬಿಟ್ಟುಬಂದಲ್ಲಿ ಮದುವೆ ಮಾಡಿ ಕೊಡುವುದಾಗಿ ಹೇಳುತ್ತಾನೆ. ಆದರೆ ದೇಶಸೇವೆಗೆ ಪ್ರಥಮ ಆದ್ಯತೆ ಕೊಡುವ ಸೂರ್ಯ ಮದುವೆಯನ್ನು ದಿಕ್ಕರಿಸಿ ಸೇನೆ ವಾಪಸಾಗಲು ಅಣಿಯಾದಾಗ ಆತ ಮೆಚ್ಚಿದ ಹುಡುಗಿ ಅಪ್ಪನ ವಿರೋಧದ ನಡುವೆಯೂ ಆತನನ್ನೇ ಮದುವೆ ಯಾಗಲು ಇಚ್ಛಿಸಿ ಸೈನಿಕನ ಕೈ ಹಿಡಿಯುತ್ತಾಳೆ. ಮದುವೆ ಮಾರನೆ ದಿನವೇ ಸೈನ್ಯದ ತುರ್ತು ಕರೆಯ ಮೇರೆಗೆ ಸೂರ್ಯ ಸೇನೆಗೆ ತೆರಳುತ್ತಾನೆ.

ಆನಂತರದ ದಿನಗಳಲ್ಲಿ ಭಾರತ-ಪಾಕ್ ನಡುವಿನ ಘರ್ಷಣೆಯಲ್ಲಿ ಸೈನಿಕ ಸೂರ್ಯ ಹುತಾತ್ಮನಾದನೆಂದು ತಿಳಿದು ಸರ್ಕಾರ ಆತನ ಮನೆಯವರಿಗೆ ಅನೇಕ ಅನುಕೂಲಗಳನ್ನು ಮಾಡಿಕೊಡುವುದಲ್ಲದೇ ಆತನ ಹೆಸರಿನಲ್ಲಿ ಊರಿಗೇ ಅಭಿವೃದ್ಧಿ ಕಾರ್ಯಗಳನ್ನು ಮಂಜೂರು ಮಾಡುತ್ತದೆ. ಆದರೆ ಬದುಕುಳಿದಿದ್ದ ಸೈನಿಕ ವಿಕಲಾಂಗದೊಂದಿಗೆ ವಿಕೃತರೂಪದಲ್ಲಿ ಊರಿಗೆ ಆಗಮಿಸುತ್ತಾನೆ. ಊರಿನವರಿರಲಿ ಸ್ವತಃ ಅವನ ಮನೆಯವರೇ ಆತನನ್ನು ಗುರುತಿಸುವುದಿಲ್ಲ. ಆತನ ನೆನಪಲ್ಲೇ ದಿನದೂಡುತ್ತಿದ್ದ ಅವ ಮೆಚ್ಚಿದ ಹೆಂಡತಿಯೂ ಆತನ ಗುರುತು ಹಿಡಿಯುವುದಿಲ್ಲ. ಸಂತೋಷದಿಂದಿರುವ ತನ್ನ ಕುಟುಂಬವನ್ನು ಕಂಡ ಸೈನಿಕ ಸೂರ್ಯ ತಾನು ಬದುಕಿರುವುದು ತಿಳಿದು ಅವರಿಗೆ ನೀಡುವ ಸವಲತ್ತುಗಳು ವಾಪಸಾಗ ಬಹುದು ಅಥವಾ ವಿಕಾರ ರೂಪದ ತನ್ನನ್ನು ಸ್ವೀಕರಿಸದಿರಬಹುದು ಎಂದು ಭಾವಿಸಿ ತನ್ನನ್ನು ಸೂರ್ಯನ ಸ್ನೇಹಿತ ಚಂದ್ರನೆಂದು ಪರಿಚಯಿಸಿ ಕೊಳ್ಳುತ್ತಾನೆ.

ತನ್ನ ಕುಟುಂಬಕ್ಕೆ ಮತ್ತು ಊರಿಗೆ ದಕ್ಕಿರುವ ಅನುಕೂಲ ಗಳು ವಾಪಸಾಗಬಾರದೆಂದು ಭಾವಿಸಿ ಚಂದ್ರನಾಗಿಯೇ ಉಳಿದು ಊರನ್ನು ತೊರೆಯಲು ನಿರ್ಧರಿಸಿದಾಗ ಆತ ಸಾಕಿದ್ದ ನಾಯಿ ಆತನನ್ನು ಗುರುತಿಸುತ್ತದೆ. ಅದರ ಮೈದಡವುವಾಗ ಆತನ ಪತ್ನಿ ಅದನ್ನು ನೋಡಿ ಸೂರ್ಯನನ್ನು ಗುರುತಿಸುತ್ತಾಳೆ ಮತ್ತು ಅವಳೂ ಊರು ಬಿಟ್ಟು ಅವನೊಂದಿಗೆ ಹೊರಡು ತ್ತಾಳೆ. ಇದಿಷ್ಟು 'ಸೈನಿಕ' ಚಿತ್ರದ ಮೂಲ ಕಥೆ.

ಚಿತ್ರದ ಕಥೆ ಇದಿಷ್ಟೇ ಆಗಿದ್ದರೆ ಉತ್ತಮ ಚಿತ್ರವಾಗಬಹುದಿತ್ತೇನೋ. ಆದರೆ 'ಸೈನಿಕ' ಯೋಗೇಶ್ವರ್ ಹಾಕಿದ ಬಂಡವಾಳ ವಾಪಾಸು ಪಡೆಯಲೇಬೇಕೆಂದು ನಿರ್ಧರಿಸಿದಂತಿದೆ. ಸರಾಗವಾದ ರಸ್ತೆಯಲ್ಲಿ ಸಾಗುವಾಗ ದಿಢೀರನೆ ಉಬ್ಬು ಸಿಕ್ಕಿ ಮೈ ಕುಲುಕಿದಂತಾಗುತ್ತದೆ ಈ ಚಿತ್ರ ನೋಡುವಾಗ. ಹೃದಯಸ್ಪರ್ಶಿ, ಭಾವನಾತ್ಮಕ ಕಥನವಾಗಬಹುದಾಗಿದ್ದ ಚಿತ್ರವನ್ನು ನಿರ್ದೇಶಕ ಮಹೇಶ್ ಸುಖಧರೆ ನೈಜ ಸಮಸ್ಯೆಗೆ ಅಸಹಜ ಪರಿಹಾರ ನೀಡಿ ಮುಗ್ಗರಿಸಿದ್ದಾರೆ. ಸತ್ತ ಮಗ ಬದುಕಿದ್ದಾನೆಂದು ತಿಳಿದರೇ ಯಾವ ತಂದೆ ತಾಯಿಯಾಗಲೀ ಅಥವಾ ಹೆಂಡತಿಯಾಗಲೀ ಅವನು ಎಷ್ಟೇ ಕುರುಪಿಯಾಗಿದ್ದರೂ ತಿರಸ್ಕರಿಸಲಾರರು. ನಿರ್ದೇಶಕರ ಈ ಆಲೋಚನೆಗೆ ಸ್ಫೂರ್ತಿ ಎಲ್ಲಿಯದೋ? ನೈಜತೆಗೆ ಒತ್ತು ನೀಡಿದ್ದಲ್ಲಿ ಈ ಚಿತ್ರದ ಪರಿಣಾಮವೇ ಬೇರೆಯಾಗುತ್ತಿತ್ತೇನೋ?



ಕಡಲೇಬೀಜ ತಿನ್ನುವಾಗ ಕಡಲೇ ಗಾತ್ರದ ಕಲ್ಲು ಸಿಕ್ಕಂತಾಗುವ ದೃಶ್ಯಗಳು, ಹಾಡುಗಳು ಚಿತ್ರದ ಭಾವಕ್ಕೆ ಬೆಸುಗೆಯಾಗುವ ಕೊಂಡಿಗಳಾದೇ ಕಿರಿಕಿರಿ ಯಾಗುತ್ತದೆ. ಅಪ್ಪನ ವಿರೋಧದ ನಡುವೆಯೂ ಮದುವೆಯಾಗುವ ಹುಡುಗಿ ದುಃಖದಲ್ಲಿರು ವಾಗಲೇ ಮುಂದಿನ ದೃಶ್ಯದಲ್ಲಿ ತುಂಡುಬಟ್ಟೆ ತೊಟ್ಟು ಮೈಮೇಲೆ ದೆವ್ವ ಬಂದವಳಂತೆ ನಾಯಕನೊಂದಿಗೆ ಕುಣಿಯುವುದು ಇದಕ್ಕೊಂದು ಉದಾಹರಣೆ. ಗ್ಲಾಮರ್ ಗೊಂಬೆಯಾದ ಸಾಕ್ಷಿ ಶಿವಾನಂದರನ್ನು ಹಾಡುಗಳಲ್ಲಿ ಹುಚ್ಚಾಪಟ್ಟೆ ಕುಣಿಸಿ ಕ್ಯಾಶ್ ಮಾಡಿಕೊಳ್ಳುವ ಪ್ರಯತ್ನವನ್ನು ಬಿಟ್ಟರೆ ಉಳಿದಂತೆ ಸಾಕ್ಷಿ ತಮ್ಮ ಭಾವನಾತ್ಮಕ ಅಭಿನಯದಿಂದ ಗಮನ ಸೆಳೆದಿದ್ದಾರೆ. ಇದರ ಜೊತೆಯಲ್ಲಿ ದೊಡ್ಡಣ್ಣನವರೂ ಸಹ ತಮ್ಮ ಭಾವುಕ ಅಭಿನಯದಿಂದ ನೋಡಗರ ಕಣ್ಣಲ್ಲಿ ನೀರು ತುಂಬಿಸುತ್ತಾರೆ. ಆದರೆ 'ಸೈನಿಕ' ಯೋಗೇಶ್ವರ್! ಯಾವುದಾದರು ಮರವನ್ನು ನೋಡಿದರೆ ಬಹುಶಃ ಯಾವುದಾದರೂ ಭಾವ ಗೋಚರಿಸಬಹುದೇನೋ? ಅಭಿನಯಕ್ಕೆ ಉತ್ತಮ ಅವಕಾಶವಿದ್ದ ಈ ಪಾತ್ರದಲ್ಲಿ ಯೋಗಿಶ್ವರ್ ಸೋತಿದ್ದಾರೆ. ಚಿತ್ರದ ಕೊನೆಯಹಂತದಲ್ಲಿ ವಿಚಿತ್ರ ಮೇಕಪ್‌ನಿಂದ ಮುಖವೇ ಮುಚ್ಚಿ ಹೋಗಿರುವು ದರಿಂದ ಅದರಲ್ಲಿ ಯಾವ ಭಾವವೂ ಕಾಣುವುದಿಲ್ಲ.

ಆದರೆ ನಿರ್ಮಾಪಕನಾಗಿ ಯೋಗಿಶ್ವರ್ ಸಾಹಸವನ್ನು ಮೆಚ್ಚಲೇಬೇಕು. ಸುಮಾರು ನಾಲ್ಕು ಕೋಟಿಗೂ ಮೀರಿ ಹಣವನ್ನು ಖರ್ಚು ಮಾಡಿ ಭಾರತ-ಪಾಕ್ ಗಡಿಯಲ್ಲಿನ ದುರ್ಗಮ ಪ್ರದೇಶ ಗಳಲ್ಲಿ ಚಿತ್ರೀಕರಣ ನಡೆಸಿರುವುದು. ಅಲ್ಲಿ ಯಾವಾಗಲೂ ದಾಳಿಗೊಳಗಾಗುವ, ದಾಳಿಗೆ ಸನ್ನದ್ಧ ಸ್ಥಿತಿಯಲ್ಲಿರುವ ಸೈನಿಕರ ಸ್ಥಿತಿಯನ್ನು ಚಿತ್ರಿಸಿದ್ದಾರೆ. ಸೈನ್ಯದ ಕಾರ್ಯಾಚರಣೆಯ ವಿಧಾನವನ್ನು ಅಧ್ಯಯನ ಮಾಡಿ ಅದರಂತೆ ಅಳವಡಿಸಿ ಕೊಂಡಿದ್ದರೆ ಚಿತ್ರ ಇನ್ನೂ ಪರಿಣಾಮಕಾರಿಯಾಗ ಬಹುದಿತ್ತು (ಇದಕ್ಕೊಂದು ಒಳ್ಳೆಯ ಉದಾಹರಣೆ ಹಿಂದಿ ಚಿತ್ರ 'ಬಾರ್ಡರ್'). ಚಿತ್ರದಲ್ಲಿನ ಸೈನ್ಯದ ಕಾರ್ಯಾಚರಣೆ ಮಾಮೂಲಿ ಮಸಾಲೆ ಚಿತ್ರಗಳಂತೆ ಗುಂಡು-ಬಾಂಬುಗಳ ಆರ್ಭಟವಾಗಿದೆ. ಇನ್ನೊಂದು ಮೆಚ್ಚಬೇಕಾದ ಅಂಶವೆಂದರೆ ಭಯೋತ್ಪಾದಕರ ನುಸುಳುವಿಕೆಗೆ ಪಾಕ್ ಕುಮ್ಮಕ್ಕಿನ ಬಗ್ಗೆ, ಅವರ ಮಿದುಳಿಗೇರಿರುವ 'ಜೆಹಾದ್' ಕುರಿತು ಟೀಕಿಸುತ್ತಲೇ ಈಗಿನ ಭಾರತ-ಪಾಕ್‌ನ ನಡುವಿನ ಸೂಕ್ಷ್ಮ ಸನ್ನಿವೇಶವನ್ನು ಯಾವುದೇ ಅತಿರೇಕಕ್ಕೆ ಒಯ್ಯದೆ, ಉನ್ಮಾದಕ್ಕೆ ಆವಕಾಶ ನೀಡದೆ ಸಂಯಮ ತೋರಿರುವುದು.

ಇನ್ನುಳಿದಂತೆ ಚಿತ್ರದ ಛಾಯಾಗ್ರಹಣ, ಸುಂದರ ಸ್ಥಳಗಳಲ್ಲಿ ಚಿತ್ರೀಕರಿಸಿರುವುರಿಂದ ಕಣ್ಣಿಗೆ ತಂಪಾಗಿದೆ. ಚಿತ್ರಕ್ಕೆ ಸಂಗೀತ ನೀಡಿದ ದೇವಾ ಅವರಿಗೆ ಚಿತ್ರದ ಕಥೆಯೇನೆಂಬುದು ತಿಳಿದಂತಿಲ್ಲ, ಹಾಡುಗಳು ಗುನುಗುವಂತಿದ್ದರೂ ಚಿತ್ರದ ಭಾವಕ್ಕೆ ಹೊಂದಿಕೆಯಾಗಿಲ್ಲ.

ಏನೇ ಆದರೂ ರಿಮೇಕ್, ಗಿಮಿಕ್‌ಗಳೇ ತುಂಬಿರುವ ಇಂದಿನ ಕನ್ನಡ ಚಿತ್ರರಂಗದಲ್ಲಿ ಇಂತಹ ಒಂದು ಉತ್ತಮ ಸಾಹಸಕ್ಕೆ ಕೈಹಾಕಿರುವ ಯೋಗೇಶ್ವರ್ ನಿರ್ಮಾಪಕನಾಗಿ ಇಲ್ಲಿ ಉಳಿಯ ಬೇಕು. ಈ ಚಿತ್ರ ಯಶಸ್ಸು ಕಂಡು ಮತ್ತೊಂದು ಸಾಹಸಕ್ಕೆ ಅವರಿಗೆ ಪ್ರೇರಣೆಯಾಗಬೇಕು.

- ಎಂ.ರಾಮು

ಸೈನಿಕ ಯೋಗಿಶ್ ಶಾಸಕನಾಗಿ...!?

ಚಿತ್ರದಲ್ಲಿ ಸೈನಿಕ ಯೋಗಿಶ್ ತನ್ನ ಗ್ರಾಮದ ಉದ್ಧಾರದ ಬಗ್ಗೆ ಮಾತನಾಡುತ್ತಾರೆ. ದೇಶದ ಬೆಳವಣಿಗೆಗೆ ರೈತರ ಉದ್ಧಾರದ ಬಗ್ಗೆ ಮಾತನಾಡುತ್ತಾರೆ.

ತನ್ನ ಕ್ಷೇತ್ರದ ವಿಠ್ಠಲನ ಹಳ್ಳಿಯಲ್ಲಿ ಪೋಲೀಸರ ಗೋಲಿಬಾರ್‌ನಿಂದ ರೈತರು ಸಾವನ್ನಪ್ಪಿದಾಗ ಇದೇ ಯೋಗಿಶ್ವರ್ ಹಿಮಾಲಯದ ತಪ್ಪಲಲ್ಲಿ ನಾಯಕಿಯೊಂದಿಗೆ ಕುಣಿದಾಡುವ ಚಿತ್ರೀಕರಣದಲ್ಲಿ ಪಾಲ್ಗೊಂಡು ತೀವ್ರ ಟೀಕೆಗೆ ಒಳಗಾಗಿದ್ದರು.

ಯೋಗಿಶ್ವರ್ ಚಿತ್ರದಲ್ಲಿನ ತಮ್ಮ ಭಾಷಣವನ್ನು ಚಿತ್ರಕ್ಕೇ ಮೀಸಲಾಗಿಡದೆ ಶಾಸಕನಾಗಿ ಅದನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನಿಸುವರೇ?

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2002
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹಂಸ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH